ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 21 ಸೋಮವಾರ 2022

ಸಂಪುಟ: 43 | ಸಂಚಿಕೆ: 214 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಂಗಳೂರು ಕುಕ್ಕರ್ ಬಾಂಬ್

ಸೃಷ್ಟಿಯಾಗಿದ್ದೇ ಮೈಸೂರಲ್ಲಿ

- ಲೋಕನಾಯಕನಗರದ ಬಾಡಿಗೆ ಮನೆಯಲ್ಲಿದ್ದ ಶಂಕಿತ ಉಗ್ರ
- ಹುಬ್ಬಳ್ಳಿಯ ಪ್ರೇಮ್‌ರಾಜ್ ಎಂಬುವರ 'ಆಧಾರ್' ನೀಡಿ ರೂಂ ಬಾಡಿಗೆಗೆ ಪಡೆದಿದ್ದ
- ಮುಂಜಾನೆ 3 ಗಂಟೆಗೆ ಪೋಲೀಸರ ದಾಳಿ: ಬೆಚ್ಚಿ ಬಿದ್ದ ಅಕ್ಕಪಕ್ಕದ ನಿವಾಸಿಗಳು
- ಮನೆಯಲ್ಲಿ ಸ್ಫೋಟಕ ತಯಾರಿಕೆಗೆ ಬಳಸುವ ಪದಾರ್ಥಗಳು ವಶಕ್ಕೆ

ಮೈಸೂರು, ನ. 20(ಎಂಟಿವೈ)– ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ಶಂಕಿತ ಉಗ್ರ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನೆಲೆಯೂರಿದ್ದ ಹಾಗೂ ಇಲ್ಲೇ ಕುಕ್ಕರ್ ಬಾಂಬ್ ತಯಾರಿಸಿದ್ದ ಎಂಬ ಆತಂಕಕಾರಿ ವಿಷಯ ಬೆಳಕಿಗೆ ಬಂದಿದೆ.

ಮೈಸೂರಿನ ಲೋಕನಾಯಕನಗರ 2ನೇ ಮುಖ್ಯರಸ್ತೆಯ 10ನೇ ಕ್ರಾಸ್‌ನಲ್ಲಿರುವ 434 ಸಂಖ್ಯೆಯ ಮನೆಯ ಹಿಂಬದಿಯಲ್ಲಿರುವ ರೂಂನಲ್ಲಿ ಶಂಕಿತ ಉಗ್ರ ಕೆಲ ತಿಂಗಳಿಂದ ವಾಸವಿದ್ದ. ಈತ ರೂಂ ಬಾಡಿಗೆಗೆ ಪಡೆಯುವಾಗ ಹುಬ್ಬಳ್ಳಿಯ ರೈಲ್ವೇ ಉದ್ಯೋಗಿ ಪ್ರೇಮ್‌ರಾಜ್ ಅವರ ಹೆಸರಿನ ನಕಲಿ ಆಧಾರ್ ಕಾರ್ಡ್ ಅನ್ನು ಮನೆ ಮಾಲೀಕರಾದ ಮಂಗಳಮ್ಮ ಅವರಿಗೆ ನೀಡಿದ್ದ. ಈತ ಮೈಸೂರಿನಲ್ಲಿ ನೆಲೆಸಿದ್ದ ಎಂಬ ಮಾಹಿತಿ ದೊರೆಯುತ್ತಿದ್ದಂತೆಯೇ ರಾಜ್ಯದ ಡಿಜಿ ಹಾಗೂ ಐಜಿಪಿಯವರು ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಿದ ಮೇರೆಗೆ ಭಾನುವಾರ ಮುಂಜಾನೆ 3.30ರ ಸುಮಾರಿನಲ್ಲಿ ಶಸ್ತ್ರಸಜ್ಜಿತ ಪೊಲೀಸರ ತಂಡ ಲೋಕನಾಯಕನಗರದ ಈ ಮನೆ ಮೇಲೆ ದಾಳಿ ನಡೆಸಿದೆ. ಮನೆ ಮಾಲೀಕರಾದ ಮಂಗಳಮ್ಮ ಅವರನ್ನು ಎಬ್ಬಿಸಿ, ರೂಂನಲ್ಲಿ ವಾಸವಿದ್ದ ಶಂಕಿತ ಉಗ್ರನ ಬಗ್ಗೆ ವಿಚಾರಿಸಿದಾಗ ಅವರು, ಆತ ಪ್ರೇಮ್‌ರಾಜ್ ಎಂಬ ಹೆಸರಿನ ಆಧಾರ್ ಕಾರ್ಡ್ ಅನ್ನು ನೀಡಿ ತಮ್ಮ ಮನೆಯ ಹಿಂಬದಿಯ ರೂಂ ಬಾಡಿಗೆಗೆ ಪಡೆದು ವಾಸವಿದ್ದಾನೆ ಎಂಬುದನ್ನು ತಿಳಿಸಿದ್ದಾರೆ.

ರೂಂ ಬೀಗ ತೆರವುಗೊಳಿಸಿ ಒಳ ನುಗ್ಗಿದ ಪೊಲೀಸರ ತಂಡ ಪರಿಶೀಲನೆ ನಡೆಸಿದಾಗ ರೂಂನಲ್ಲಿ ಸ್ಫೋಟಕ ತಯಾರಿಕೆಗೆ ಬಳಸುವ ಸರ್ಕಿಟ್ ಬೋರ್ಡ್, ಸ್ಮಾಲ್ ಬೋಲ್ಟ್‌ಗಳು, ಬ್ಯಾಟರಿ, ಮೊಬೈಲ್‌ಗಳು, ಅಲ್ಯೂಮಿನಿಯಂ ತುಂಡುಗಳು, ಮಿಕ್ಸರ್ ಜಾರ್‌ಗಳು, ಪ್ರೆಷರ್ ಕುಕ್ಕರ್, ಮಂಗಳೂರಿನಲ್ಲಿ ಕುಕ್ಕರ್ ಸ್ಫೋಟಿಸಿದ ಸ್ಥಳದಲ್ಲಿ ▶ 2ನೇ ಪುಟಕ್ಕೆ



ಮೈಸೂರಿನಲ್ಲಿ ಶಂಕಿತ ಉಗ್ರ ನೆಲೆಸಿದ್ದ ಮನೆ



ಲೋಕನಾಯಕನಗರದ ರಸ್ತೆಗೆ ಪೊಲೀಸರು ಬ್ಯಾರಿಕೇಡ್ ಹಾಕಿ ಪ್ರವೇಶ ನಿರ್ಬಂಧಿಸಿರುವುದು.

ಉಗ್ರರಿಗೆ ಮೈಸೂರು ಸುರಕ್ಷಿತ ನೆಲೆಯೇ?

ಉಗ್ರವಾದಿಗಳಿಗೆ ಸಾಂಸ್ಕೃತಿಕನಗರಿ ಮೈಸೂರು ಸುರಕ್ಷಿತ ನೆಲೆಯೇ ಎಂಬ ಪ್ರಶ್ನೆ ಇದೀಗ ಉದ್ಭವಿಸಿದೆ. ಉಗ್ರವಾದಿಗಳು ಸಾಮಾನ್ಯವಾಗಿ ತಮಗೆ ಸುರಕ್ಷಿತ ಎಂದು ಭಾವಿಸುವ ನಗರ ಅಥವಾ ಗ್ರಾಮವನ್ನು ನೆಲೆಯಾಗಿಸಿಕೊಳ್ಳುತ್ತಾರೆ (ಶೆಲ್ಟರ್ ಪಡೆಯುತ್ತಾರೆ). ಅವರು ನೆಲೆಯಾಗಿಸಿಕೊಳ್ಳುವ ಸ್ಥಳಗಳಲ್ಲಿ ಯಾವುದೇ ದುಷ್ಕೃತ್ಯ ಸಾಮಾನ್ಯವಾಗಿ ಎಸಗುವುದಿಲ್ಲ. ಅಲ್ಲಿನ ನಿವಾಸಿಗಳೊಂದಿಗೆ ಸಭ್ಯರಂತೆ ಬೆರೆಯುತ್ತಾರೆ. ಯಾರೊಂದಿಗೂ ಹೆಚ್ಚು ಒಡನಾಟ ಇಟ್ಟುಕೊಳ್ಳದೇ, ತಾವು ಬೇರೆ ಕಡೆ ನಡೆಸಬಹುದಾದ ದುಷ್ಕೃತ್ಯಗಳಿಗೆ ನೀಲನಕ್ಷೆ ತಯಾರಿಸುವುದು ಹಾಗೂ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಬಹುಶಃ ಉಗ್ರರು ಮೈಸೂರನ್ನು ತಾವು ಶೆಲ್ಟರ್ ಪಡೆಯಲು ಸುರಕ್ಷಿತ ಸ್ಥಳ ಎಂದು ಭಾವಿಸಿದಂತಿದೆ. ಇದಕ್ಕೆ ಪೂರಕವೆಂಬಂತೆ ಕೆಲಸ ವರ್ಷಗಳ ಹಿಂದೆ ಮೈಸೂರಿನ ರಿಂಗ್ ರಸ್ತೆಯಲ್ಲಿ ಫಹಾದ್ ಹಾಗೂ ಅಲಿ ಹುಸೇನ್ ಎಂಬ ಇಬ್ಬರು ಉಗ್ರರು ಸಿಕ್ಕಿಬಿದ್ದಿದ್ದರು. ಅವರು ರಾಜೀವ್‌ನಗರದ ಮನೆಯೊಂದರಲ್ಲಿ ನೆಲೆ ಕಂಡುಕೊಂಡಿದ್ದರು. ಇಲ್ಲೇ ಆಧಾರ್ ಕಾರ್ಡ್ ಮತ್ತು ಡ್ರೈವಿಂಗ್ ಲೈಸನ್ಸ್ ಪಡೆದಿದ್ದರು. ಅವರ ಬಂಧನದ ನಂತರ ಅವರಿಬ್ಬರೂ ಜಮ್ಮು–ಕಾಶ್ಮೀರ್‌ನ ಉಗ್ರ ಸಂಘಟನೆಗೆ ಸೇರಿದವರು ಎಂಬ ವಿಚಾರ ಬಯಲಾಗಿತ್ತು. ಇದೀಗ ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಶಂಕಿತ ಉಗ್ರನೂ ಕೂಡ ಕೆಲ ತಿಂಗಳಿಂದಲೇ ಮೈಸೂರಿನಲ್ಲಿ ನೆಲೆ ಕಂಡುಕೊಂಡಿದ್ದ.

ತೀರ್ಥಹಳ್ಳಿ ಸೊಪ್ಪುಗುಡ್ಡೆ ಶಾರೀಕ್ ಶಂಕಿತ ಉಗ್ರ?



ಮಂಗಳೂರು, ನ. 20– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಶಂಕಿತ ಉಗ್ರ ಯಾರು ಎಂಬುದನ್ನು ಪೊಲೀಸರು ಈವರೆಗೂ ಬಹಿರಂಗಪಡಿಸಿಲ್ಲವಾದರೂ ಈತ ಶಿವಮೊಗ್ಗ ತುಂಗಾ ನದಿ ದಡದಲ್ಲಿ ಇತ್ತೀಚೆಗೆ ನಡೆದಿದ್ದ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ತೀರ್ಥಹಳ್ಳಿಯ ಸೊಪ್ಪುಗುಡ್ಡೆ ಮೂಲದ ಶಾರೀಕ್ ಎಂದು ಶಂಕಿಸಲಾಗಿದೆ. ಇದಕ್ಕೆ ಪೂರಕವೆಂಬಂತೆ ತೀರ್ಥಹಳ್ಳಿ, ಡಿವೈಎಸ್ಪಿಯವರು ಸೊಪ್ಪುಗುಡ್ಡೆಯ ಶಾರೀಕ್ ಸಂಬಂಧಿಕರನ್ನು ಇಂದು ಮಂಗಳೂರಿಗೆ ಕರೆದೊಯ್ದಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ. ಶಂಕಿತ ಉಗ್ರನನ್ನು ಗುರುತಿಸುವ ಸಲುವಾಗಿಯೇ ಶಾರೀಕ್ ಕುಟುಂಬದವರನ್ನು ಪೊಲೀಸರು ಮಂಗಳೂರಿಗೆ ಕರೆದೊಯ್ದಿರಬಹುದು ಎಂದು ಹೇಳಲಾಗಿದೆ. ಶಿವಮೊಗ್ಗದ ತುಂಗಾ ನದಿ ದಡದಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿನ ▶ 2ನೇ ಪುಟಕ್ಕೆ

ಶಂಕಿತ ಉಗ್ರನ ಸಂಪರ್ಕದಲ್ಲಿದ್ದ ಇಬ್ಬರು ಪೊಲೀಸ್ ವಶಕ್ಕೆ

ಓರ್ವ ಮಂಗಳೂರು, ಮತ್ತೋರ್ವ ಟಿ.ನರಸೀಪುರದವನು


ಮೈಸೂರು, ನ. 20 (ಎಂಟಿವೈ)–ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಶಂಕಿತ ಉಗ್ರನ ಸಂಪರ್ಕದಲ್ಲಿದ್ದ ಇಬ್ಬರನ್ನು ಮೈಸೂರಿನಲ್ಲಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅವರಲ್ಲಿ ಓರ್ವ ಮಂಗಳೂರು ಮೂಲದವನಾದರೆ, ಮತ್ತೋರ್ವ ತಿ.ನರಸೀಪುರದವನೆಂದು ಹೇಳಲಾಗಿದೆ. ಲೋಕನಾಯಕನಗರದಲ್ಲಿ ರೂಂ ಬಾಡಿಗೆಗೆ ಪಡೆದು, ನೆಲೆಸಿದ್ದ ಶಂಕಿತ ಉಗ್ರ ಮೊಬೈಲ್ ರಿಪೇರಿ ಮಾಡುವ ತರಬೇತಿ ಪಡೆಯುವ ಸೋಗಿನಲ್ಲಿ ಅಗ್ರಹಾರದಲ್ಲಿರುವ ಮೊಬೈಲ್ ಅಂಗಡಿಯೊಂದಕ್ಕೆ ಹೋಗುತ್ತಿದ್ದ ಎಂದು ಹೇಳಲಾಗಿದ್ದು, ಈತನಿಗೆ ಈಗ ಪೊಲೀಸರ ವಶದಲ್ಲಿರುವ ತಿ.ನರಸೀಪುರದ ವ್ಯಕ್ತಿ ಸಹಕಾರ ನೀಡುತ್ತಿದ್ದ. ಶಂಕಿತ ಉಗ್ರ ತನ್ನ ಸ್ನೇಹಿತನಿಂದ 500–ಸಾವಿರ ರೂ. ನೀಡಿ, 10ಕ್ಕೂ ಹೆಚ್ಚು ಮೊಬೈಲ್‌ಗಳನ್ನು ಖರೀದಿಸಿದ್ದ ಎಂದು ಹೇಳಲಾಗಿದ್ದು, ▶ 8ನೇ ಪುಟಕ್ಕೆ

ಫಿಫಾ ವಿಶ್ವಕಪ್‌ಗೆ ಅದ್ಧೂರಿ ಚಾಲನೆ

ಉದ್ಘಾಟನಾ ಪಂದ್ಯದಲ್ಲಿ ಈಕ್ವೆಡಾರ್‌ಗೆ ಭರ್ಜರಿ ಜಯ

ದೋಹಾ, ನ.20– ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಭಾನುವಾರ ಅದ್ಧೂರಿ ಚಾಲನೆ ದೊರೆತಿದೆ.

ಕತಾರ್‌ನ ದೋಹಾ ಸಮೀಪದ ಅಲ್‌ಬೇತ್ ಕ್ರೀಡಾಂಗಣದಲ್ಲಿ ನೆರೆದಿದ್ದ ಸುಮಾರು 40 ಸಾವಿರ ಕ್ರೀಡಾಭಿಮಾನಿಗಳು ಹಾಗೂ ವಿವಿಧ ದೇಶಗಳ ಗಣ್ಯರ ಸಮ್ಮುಖದಲ್ಲಿ ವರ್ಣರಂಜಿತ ಸಮಾರಂಭದೊಂದಿಗೆ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಆರಂಭವಾಯಿತು. ಕಾರ್ಯಕ್ರಮದಲ್ಲಿ ಕತಾರ್ ದೊರೆ ಶೇಖ್ ತಮೀಮ್ ಬಿನ್ ಹಮದ್ ಅಲ್–ಥಾನಿ, ಫಿಫಾ ಅಧ್ಯಕ್ಷ ಗಿಯಾನಿ ಇನ್‌ಫಾಂಟಿನೊ, ಮತ್ತಿತರ ಅರಬ್ ನಾಯಕರು, ಸೌದಿ ಅರೇಬಿಯಾದ ರಾಜ, ಈಜಿಪ್ಟ್, ಟರ್ಕಿ ಮತ್ತು ಅಲ್ಜೀರಿಯಾದ ಅಧ್ಯಕ್ಷರು, ಹಾಗೆಯೇ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತಿತರರು ಪಾಲ್ಗೊಂಡಿದ್ದರು. ಅಮೆರಿಕಾದ ನಟ ಮೋರ್ಗಾನ್ ಫ್ರೀಮಾನ್ ಮತ್ತಿತರಿಂದ 3 ಗಂಟೆಗಳ ಕಾಲ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನಡೆದವು. ಈ ವೇಳೆ ಕತಾರಿ ಗಾಯಕ ಫಹಾದ್ ಅಲ್–ಕುಬೈಸಿ ಮತ್ತು ಬಿಟಿಎಸ್ ▶ 8ನೇ ಪುಟಕ್ಕೆ



ಗೃಹ ಇಲಾಖೆಯ ವೈಫಲ್ಯಕ್ಕೆ ಸಾಕ್ಷಿ



ಬೆಂಗಳೂರು, ನ.20–ಮಂಗಳೂರು ನಗರದ ಗರೋಡಿಯಲ್ಲಿ ಶನಿವಾರ ಆಟೋರಿಕ್ಷಾದಲ್ಲಿ ಸಂಭವಿಸಿದ ಸ್ಫೋಟ ಗೃಹ ಇಲಾಖೆಯ ವೈಫಲ್ಯ ಎತ್ತಿ ತೋರಿಸಿದೆ ಎಂದು ವಿಧಾನ ಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮಂಗಳೂರಿನಲ್ಲಿ ಸಂಭವಿಸಿರುವ ಸ್ಫೋಟ ಪ್ರಕರಣ ಮತ್ತೊಮ್ಮೆ ರಾಜ್ಯದ ಗುಪ್ತಚರ ವಿಭಾಗ ಮತ್ತು ಗೃಹ ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿಸಿದೆ. ▶ 8ನೇ ಪುಟಕ್ಕೆ

ಸಹಕಾರಿ ಸಂಘಗಳಲ್ಲಿನ ಅವ್ಯವಹಾರ, ವಂಚನೆ ಪ್ರಕರಣ ತಡೆಗೆ


ಹೊಸ ಕಾನೂನು ರೂಪಿಸುವ ಅನಿವಾರ್ಯತೆ

- 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಸಹಕಾರ ಸಚಿವರೂ ಆದ ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಮತ
- ಸಹಕಾರಿ ಸಂಘಗಳ ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿ ಲೆಕ್ಕಪರಿಶೋಧಕರೂ ಸುಳ್ಳು ವರದಿ ನೀಡುತ್ತಿದ್ದಾರೆ; ಇವರ ವಿರುದ್ಧವೂ ಎಫ್‌ಐಆರ್ ಹಾಕಲಾಗುತ್ತದೆ
- ಕೆಲ ಸಕ್ಕರೆ ಕಾರ್ಖಾನೆಗಳು ಪಡೆದ ಸಾಲವನ್ನೇ ಪಾವತಿಸುತ್ತಿಲ್ಲ; ಸಹಕಾರಿ ಬ್ಯಾಂಕ್‌ಗಳ ಅಧಿಕಾರಿಗಳು ಇದರ ಬಗ್ಗೆ ಏನೂ ಕ್ರಮ ಕೈಗೊಳ್ಳುತ್ತಿಲ್ಲ; ಸಚಿವ ವಿಷಾದ
- ಜಿ.ಟಿ.ದೇವೇಗೌಡರು ಸಹಕಾರಿ ಕ್ಷೇತ್ರದಲ್ಲಿ ಅಪಾರ ಸೇವೆ ಮಾಡಿದ್ದಾರೆ; ಅವರು ಅಧ್ಯಕ್ಷರಾದರೆ ಸಹಕಾರ ಮಹಾಮಂಡಳ ಬೆಳೆಯುತ್ತದೆ; ಗುಣಗಾನ

ಮೈಸೂರು, ನ.20(ಎಂಟಿವೈ)– ಸಹಕಾರ ಸಂಘದಲ್ಲಿ ಅವ್ಯವಹಾರ ಮತ್ತು ವಂಚನೆ ಪ್ರಕರಣಗಳು ನಡೆಯುತ್ತಿದ್ದು, ಅದನ್ನು ತಡೆಯಲು ಕಠಿಣ ಕಾನೂನು ರೂಪಿಸುವ ಅನಿವಾರ್ಯತೆ ಇದೆ ಎಂದು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ರಾಜ್ಯ ಸಹಕಾರ ಮಹಾ ಮಂಡಳ ಮತ್ತು ವಿವಿಧ ಸಹಕಾರ ಸಂಘಗಳ ಸಹಯೋಗದಲ್ಲಿ ಭಾನುವಾರ ನಡೆದ 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಂಗಳೂರಿನ ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ 1270 ಕೋಟಿ ರೂ. ವಂಚನೆ ಆಗಿದೆ. ವಿವಿಧೆಡೆ ಇನ್ನಷ್ಟು ಸಹಕಾರಿ ಬ್ಯಾಂಕ್‌ಗಳಲ್ಲೂ ಅವ್ಯವಹಾರ ನಡೆದಿವೆ. ವಂಚನೆ ಮಾಡುವವರಿಗೆ ನ್ಯಾಯಾಲಯ, ಜೈಲು ಸಾಮಾನ್ಯ ಸಂಗತಿ ಎಂಬ ಭಾವನೆ ಮೂಡಿದೆ. ಹೀಗಾಗಿ ಇದಕ್ಕೆ ಕಡಿವಾಣ ಹಾಕಲು ಹೊಸ ಕಾನೂನು ರೂಪಿಸುವ ಪರಿಸ್ಥಿತಿ ಬಂದಿದೆ. ಆರ್‌ಬಿಐ ಕೂಡ ಕಠಿಣ ಕ್ರಮ ಕೈಗೊಂಡಿದೆ. ಸಹಕಾರ ಸಂಘದ ಆಡಿಟ್ ವರದಿ ಮೇಲೆ ಗ್ರಾಹಕರು, ಜನರು ನಂಬಿಕೆ ಇಟ್ಟಿರುತ್ತಾರೆ. ಆದರೆ, ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿ ಲೆಕ್ಕಪರಿಶೋಧಕರು ಸಹ ಸುಳ್ಳು ವರದಿ ನೀಡುತ್ತಾರೆ. ಆದ್ದರಿಂದ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಕೆಲವೊಂದು ಸಕ್ಕರೆ ಕಾರ್ಖಾನೆಗಳಿಂದ ಸಾಲ ಬಾಕಿಯಿದೆ. ಕೆಲವರು ಬಡ್ಡಿ ಪಾವತಿಸುತ್ತಿದ್ದಾರೆ. ಮತ್ತೆ ಕೆಲವರು ಅಸಲು ಬಡ್ಡಿ ಕಟ್ಟುತ್ತಿದ್ದಾರೆ. ಆದರೆ, ಕೆಲವು ಬುದ್ಧಿವಂತ ರಾಜಕಾರಣಿಗಳು ಅಸಲು, ಬಡ್ಡಿ ಎರಡನ್ನೂ ಕಟ್ಟುತ್ತಿಲ್ಲ. ಅವರಿಗೆ ಅಧಿಕಾರಿಗಳು ಚುರುಕು ಮುಟ್ಟಿಸುವ ಕೆಲಸ ಮಾಡಲ್ಲ. ಸಾಲ ವಸೂಲಾತಿಯಲ್ಲಿ ತಾರತಮ್ಯ ಇರಬಾರದು. ಸಹಕಾರ ಇಲಾಖೆ, ಅನೇಕ ಯೋಜನೆಗಳ ರೂಪಿಸುತ್ತಿದೆ. ಈ ವರ್ಷ 33 ಲಕ್ಷ ರೈತರಿಗೆ ಮತ್ತು ವಿಶೇಷವಾಗಿ 3 ಲಕ್ಷ ಹೊಸ ರೈತರಿಗೆ 24 ಸಾವಿರ ಕೋಟಿ ರೂ. ಸಾಲ ನೀಡುವ ಗುರಿ ಹೊಂದಲಾಗಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ರೈತರ ಸಾಲ ಮನ್ನಾಕ್ಕಾಗಿ 5700 ಕೋಟಿ ರೂ. ಹಣ ಬಿಡುಗಡೆ ಮಾಡಿದ್ದರು. ಅಲ್ಪ ಸ್ವಲ್ಪ ಸಾಲ ಮನ್ನಾ ಬಾಕಿಯಿದ್ದು, ಡಿಸೆಂಬರ್ ಅಂತ್ಯದ ವೇಳೆಗೆ ಬಾಕಿಯಿರುವ ಮೊತ್ತವೂ ಬಿಡುಗಡೆಯಾಗಲಿದೆ ▶ 8ನೇ ಪುಟಕ್ಕೆ




ಮೈಸೂರಲ್ಲಿ ನಡೆದ 69ನೇ ಸಹಕಾರಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು 'ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಾಧನೆಯತ್ತ ಸಹಕಾರಿ ಕ್ಷೇತ್ರ: ಜಿಟಿಡಿ



ಮೈಸೂರು, ನ.20(ಎಂಟಿವೈ)–ಸಹಕಾರ ಸಂಘದವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಪ್ರಾಮಾಣಿಕತೆ, ನಿಸ್ವಾರ್ಥದಿಂದ ಕಾರ್ಯನಿರ್ವಹಿಸಿದರೆ ಯಾವ ದೇವಾಲಯಕ್ಕೂ ಹೋಗುವ ಅಗತ್ಯ ಇರುವುದಿಲ್ಲ ಎಂದು ಶಾಸಕರೂ ಆದ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು. ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರ ಸಾಧನೆಯತ್ತ ಸಾಗುತ್ತಿದೆ. ಆದರೂ ಕೆಲವು ಸಂದರ್ಭದಲ್ಲಿ ಸಹಕಾರ ಸಂಘದಲ್ಲಿ ಲೋಪ–ದೋಷಗಳು ಕಂಡು ಬರುತ್ತಿವೆ. ಆಗಿರುವ ಲೋಪದೋಷವನ್ನು ಸರಿಪಡಿಸಿಕೊಳ್ಳಬೇಕು. ಉತ್ತಮ ಆಡಳಿತ ನಿರ್ವಹಣೆ ಮೂಲಕ ಸಂಘದ ಬೆಳವಣಿಗೆಗೆ ಶ್ರಮ ವಹಿಸಬೇಕು. ಪ್ರತಿಯೊಬ್ಬ ಪದಾಧಿಕಾರಿಯೂ ದಿನಕ್ಕೆ ಒಂದು ಗಂಟೆಯಾದರೂ ಸಂಘದ ಕೆಲಸ ಮಾಡಬೇಕು. ಸಾಲ ಸೇರಿದಂತೆ ಇನ್ನಿತರ ಸೌಲಭ್ಯವನ್ನು ಕಲ್ಪಿಸಿ ಕೊಡದಿದ್ದರೆ ಜನರಿಗೆ ದ್ರೋಹ ▶ 8ನೇ ಪುಟಕ್ಕೆ

ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ



ಮೈಸೂರು, ನ.20(ಎಂಟಿವೈ)– ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿರುವ ರಾಜಕೀಯ ಹಸ್ತಕ್ಷೇಪ ತಡೆಗಟ್ಟಿ, ಸಹಕಾರ ಚಳವಳಿಯನ್ನು ಇನ್ನಷ್ಟು ಗಟ್ಟಿಗೊಳಿಸುವ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ತಿಳಿಸಿದ್ದಾರೆ.

ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ರಾಜಕೀಯ ನುಸುಳಿದೆ. ಇದರಿಂದ ಸಹಕಾರ ಕ್ಷೇತ್ರದ ಮಹತ್ವಕ್ಕೆ ಧಕ್ಕೆಯಾಗುತ್ತಿದೆ. ಪಕ್ಷಪಾತ ಧೋರಣೆಯಿಂದಾಗಿ ಕೆಲವರು ಸಹಕಾರ ಕ್ಷೇತ್ರದಿಂದ ದೂರವುಳಿಯುವಂತಾಗಿದೆ. ಸಹಕಾರ ಸಂಘಗಳಲ್ಲಿ ನುಸುಳಿರುವ ರಾಜಕೀಯವನ್ನು ತಡೆಯಬೇಕು ಎಂದು ಆಗ್ರಹಿಸಿದರು. ಪ್ರತಿಯೊಂದು ಸಹಕಾರ ಸಂಘದಲ್ಲಿ ರಾಜಕೀಯವನ್ನು ಬೆರೆಸಲಾಗುತ್ತಿದೆ. ಇದರಿಂದ ಆಡಳಿತ ಹಳಿ ತಪ್ಪುತ್ತಿದೆ ಆದ್ದರಿಂದ ಇದಕ್ಕೆ ತಡೆವೊಡ್ಡಬೇಕು ಎಂದರು.

ಟಿ20 ವಿಶ್ವಕಪ್ ಸೆಮೀಸ್ ಸೋಲಿನ ಕಹಿ ಬಳಿಕ ಗೆಲುವಿನ ಲಯಕ್ಕೆ ಮರಳಿದ ಟೀಂ ಇಂಡಿಯಾ

ನ್ಯೂಜಿಲ್ಯಾಂಡ್ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ 65 ರನ್‌ಗಳ ಭರ್ಜರಿ ಜಯ



ಮೌಂಟ್ ಮೌಂಗನುಯಿ: ನ್ಯೂಜಿಲ್ಯಾಂಡ್ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಟೀಂ ಇಂಡಿಯಾ 65 ರನ್‌ಗಳಿಂದ ಭರ್ಜರಿ ಜಯ ಗಳಿಸಿದೆ.

ಮೌಂಟ್ ಮೌಂಗನುಯಿಯಲ್ಲಿ ನಡೆದ ಎರಡನೇ ಟಿ20 ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ ಓವರ್‌ನಲ್ಲಿ 191 ರನ್ ಪೇರಿಸಿತು. ಅಲ್ಲದೆ ನ್ಯೂಜಿಲ್ಯಾಂಡ್‌ಗೆ 192 ರನ್‌ಗಳ ಮೊತ್ತದ ಬೃಹತ್ ಮೊತ್ತ ನೀಡಿತು. ಈ ಟಾರ್ಗೆಟ್ ಬೆನ್ನಟ್ಟಿದ ನ್ಯೂಜಿಲ್ಯಾಂಡ್‌ಗೆ ದೀಪಕ್ ಹೂಡಾ ಮಾರಕವಾದರು. ಇನ್ನು 126 ರನ್‌ಗಳಿಗೆ ನ್ಯೂಜಿಲ್ಯಾಂಡ್ ಆಲೌಟ್ ಆಗುವ ಮೂಲಕ ಭಾರತಕ್ಕೆ ಶರಣಾದರು. ನ್ಯೂಜಿಲ್ಯಾಂಡ್ ಪರ ಬ್ಯಾಟಿಂಗ್‌ನಲ್ಲಿ ಡೆವೊನ್ ಕಾನ್ವೆ 25, ಕೇನ್ ವಿಲಿಯಮ್ಸನ್ 61, ಗ್ಲೇನ್ ಫಿಲಿಪ್ಸ್ 12 ಮತ್ತು ಮಿಚೆಲ್ 10 ರನ್ ಪೇರಿಸಿದ್ದಾರೆ. ಭಾರತದ ಪರ ಬೌಲಿಂಗ್‌ನಲ್ಲಿ ದೀಪಕ್ ಹೂಡಾ 4, ಮೊಹಮ್ಮದ್ ಸಿರಾಜ್ ಮತ್ತು ಚಹಾಲ್ ತಲಾ 2 ವಿಕೆಟ್ ಹಾಗೂ ವಾಷಿಂಗ್ಟನ್ ಸುಂದರ್ ಮತ್ತು ಭುವನೇಶ್ವರ್ ಕುಮಾರ್ ತಲಾ 1 ವಿಕೆಟ್ ಪಡೆದಿದ್ದಾರೆ.

ಟೀಂ ಇಂಡಿಯಾ ಪರ ಇಶಾನ್ ಕಿಶನ್ 36 ರನ್ ಪೇರಿಸಿ ಉತ್ತಮ ಓಪನಿಂಗ್ ನೀಡಿದರು. ಆದರೆ ರಿಷಬ್ ಪಂತ್ 6 ರನ್‌ಗಳಿಗೆ ಔಟ್ ಆಗಿ ನಿರಾಸೆ ಮೂಡಿಸಿದರು. ನಂತರ ಬಂದ ಸೂರ್ಯಕುಮಾರ್ ಯಾದವ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದು ತಂಡ ಬೃಹತ್ ಮೊತ್ತ ಪೇರಿಸಲು ನೆರವಾದರು. ಸೂರ್ಯಕುಮಾರ್ 51 ಎಸೆತಗಳಲ್ಲಿ 111 ರನ್ ಪೇರಿಸಿ ಅಜೇಯರಾಗಿ ಉಳಿದರು. ಶ್ರೇಯಸ್ ಅಯ್ಯರ್ 13 ಹಾಗೂ ನಾಯಕ ಹಾರ್ದಿಕ್ ಪಾಂಡ್ಯ 13 ರನ್ ಪೇರಿಸಿ ಔಟಾದರು. ನ್ಯೂಜಿಲ್ಯಾಂಡ್ ಪರ ಬೌಲಿಂಗ್‌ನಲ್ಲಿ ಟೀಮ್ ಸೌಥಿ 3, ಫರ್ಗ್ಯೂಸನ್ 2 ಮತ್ತು ಸೋಧಿ 1 ವಿಕೆಟ್ ಪಡೆದಿದ್ದಾರೆ. ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಮೊದಲ ಪಂದ್ಯ ಮಳೆಯಿಂದ ರದ್ದಾಗಿದ್ದು ಎರಡನೇ ಪಂದ್ಯದಲ್ಲಿ ಭಾರತ ಗೆಲುವು ಸಾಧಿಸಿದೆ.

ಆನೆ ದಾಳಿಯಿಂದ ಮಹಿಳೆ ಸಾವು

ಮೂಡಿಗೆರೆ ಶಾಸಕ ಕುಮಾರಸ್ವಾಮಿ ಅಟ್ಟಾಡಿಸಿದ ಗ್ರಾಮಸ್ಥರು

ಮೂಡಿಗೆರೆ, ನ.20– ಮೂಡಿಗೆರೆ ತಾಲೂಕು ಕುಂದೂರು ಸಮೀಪದ ಹುಲ್ಲೆಮನೆ ಗ್ರಾಮದ ಶೋಭಾ (45) ಕಾಡಾನೆ ದಾಳಿಯಿಂದ ಭಾನುವಾರ ಬೆಳಗ್ಗೆ ಮೃತಪಟ್ಟಿದ್ದು, ಸ್ಥಳಕ್ಕೆ ತಡವಾಗಿ ಬಂದ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರನ್ನು ರೊಚ್ಚಿಗೆದ್ದ ಗ್ರಾಮಸ್ಥರು ಅಟ್ಟಾಡಿಸಿ ಹಲ್ಲೆ ಮಾಡಿರುವುದಲ್ಲದೇ ಬಟ್ಟೆಯನ್ನು ಹರಿದಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಭಾನುವಾರ ಬೆಳಗ್ಗೆ ಮೂಡಿಗೆರೆ ತಾಲೂಕಿನ ಹುಲ್ಲೆಮನೆ ಗ್ರಾಮದಲ್ಲಿ ಕಾಡಾನೆ ದಾಳಿಯಿಂದಾಗಿ ಶೋಭಾ ಮೃತಪಟ್ಟಿದ್ದರು. ಘಟನೆ ಬೆಳಗ್ಗೆ ನಡೆದಿದ್ದರೂ ಕ್ಷೇತ್ರದ ಶಾಸಕ ಎಂ.ಪಿ.ಕುಮಾರಸ್ವಾಮಿ ಸಂಜೆ ಗ್ರಾಮಕ್ಕೆ ಬಂದಿದ್ದಾರೆ. ಈ ವೇಳೆ ಗ್ರಾಮಸ್ಥರು ಆಕ್ರೋಶಗೊಂಡು ಶಾಸಕ ಕುಮಾರಸ್ವಾಮಿ ಅವರಿಗೆ ಘೇರಾವ್ ಹಾಕಿದ್ದಲ್ಲದೆ. ಗ್ರಾಮದ ಮುಖ್ಯ



ರಸ್ತೆಯಲ್ಲಿ ಅಟ್ಟಾಡಿಸಿದ್ದಾರೆ. ತೀವ್ರ ಆಕ್ರೋಶಗೊಂಡಿದ್ದ ಕೆಲ ಗ್ರಾಮಸ್ಥರು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಲ್ಲದೆ. ಶಾಸಕರನ್ನು ಹಿಡಿದು ಎಳೆದಾಡಿದ್ದಾರೆ.

ಈ ವೇಳೆ ಉದ್ರಿಕ್ತಗೊಂಡ ಗ್ರಾಮಸ್ಥರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟಿದ್ದು, ಪರಿಸ್ಥಿತಿ ಕೈ ಮೀರಿದ ವೇಳೆ ಲಾಠಿ ಚಾರ್ಜ್ ಮಾಡಿ ಶಾಸಕರನ್ನು ಕರೆದುಕೊಂಡು ಬಂದು ಕಾರಿನಲ್ಲಿ ಕೂರಿಸಿದ್ದಾರೆ. ಈ ಸಂದರ್ಭದಲ್ಲಿ ಎಂ.ಪಿ. ಕುಮಾರಸ್ವಾಮಿ ಅವರ ಶರ್ಟ್ ಹರಿದಿರಲಿಲ್ಲ. ಆದರೆ, ಕುಮಾರಸ್ವಾಮಿ ಅವರು ಈ ಘಟನೆ ಬಗ್ಗೆ ವಿಡಿಯೋ ಹೇಳಿಕೆಯೊಂದನ್ನು ನೀಡಿದ್ದು, ಆ ವೇಳೆ ಶಾಸಕರ ಶರ್ಟ್ ಹರಿದಿದೆ. ಅಲ್ಲದೇ ಇದೊಂದು ವ್ಯವಸ್ಥಿತ ಪಿತೂರಿ ಎಂದು ಸ್ವತಃ ಕುಮಾರಸ್ವಾಮಿ ಅವರೇ ಆರೋಪಿಸಿದ್ದಾರೆ.

ಆನೆ ದಾಳಿಯಿಂದ ಮೃತಪಟ್ಟ ಮಹಿಳೆಯ ಮೃತದೇಹವನ್ನು ನೋಡಲು ತೆರಳಿದ ವೇಳೆ ನನ್ನ ಮೇಲೆ ಗ್ರಾಮಸ್ಥರು ಆಕ್ರೋಶಗೊಂಡಿದ್ದು, ಪ್ರತಿಭಟನಾ ನಿರತರು ಹಲ್ಲೆ ಮಾಡಿದ್ದಾರೆ. ಇದು ವ್ಯವಸ್ಥಿತ ಪಿತೂರಿಯಾಗಿದೆ. ನಮ್ಮದೇ ಸರ್ಕಾರದ ಪೊಲೀಸ್ ಇಲಾಖೆ ನನಗೆ ರಕ್ಷಣೆ ನೀಡುವಲ್ಲಿ ವಿಫಲವಾಗಿದೆ ಎಂದು ದೂರಿದ್ದಾರೆ.

ಒಂದನೇ ಪುಟದಿಂದ

ಸೃಷ್ಟಿಯಾಗಿದ್ದೇ ಮೈಸೂರಲ್ಲಿ

ದೊರೆತಂತಹದ್ದೇ ಶೆಲ್‌ಗಳು, 2 ನಕಲಿ ಆಧಾರ್ ಕಾರ್ಡ್, ಒಂದು ನಕಲಿ ಪಾನ್ ಕಾರ್ಡ್, ಫಿನೋ ಡೆಬಿಟ್ ಕಾರ್ಡ್ ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಿಂದಲೂ ಪೊಲೀಸ್ ಅಧಿಕಾರಿಗಳ ತಂಡ ಲೋಕನಾಯಕನಗರಕ್ಕೆ ಆಗಮಿಸಿದ್ದು, ಮುಂಜಾನೆ 3.30ರಿಂದ ಮಧ್ಯಾಹ್ನ 3 ಗಂಟೆವರೆಗೆ ಬರೋಬ್ಬರಿ 12 ಗಂಟೆ ಕಾಲ ಉಗ್ರ ವಾಸವಿದ್ದ ರೂಂ ಅನ್ನು ಶೋಧಿಸಿದೆ. ರೂಂನಲ್ಲಿ ಕೆಲವು ಮಹತ್ವದ ದಾಖಲೆಗಳು ದೊರೆತಿವೆ ಎಂದು ಹೇಳಲಾಗುತ್ತಿದೆ. ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಅವರು ಕೂಡ ಶಂಕಿತ ಉಗ್ರ ವಾಸವಿದ್ದ ರೂಂ ಅನ್ನು ಪರಿಶೀಲಿಸಿದರಲ್ಲದೇ ಮೇಟಗಳ್ಳಿ ಠಾಣೆಗೆ ಆಗಮಿಸಿ, ತಮ್ಮ ಸಿಬ್ಬಂದಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು. ಶಂಕಿತ ಉಗ್ರ ವಾಸವಿದ್ದ ಲೋಕನಾಯಕನಗರ 2ನೇ ಮುಖ್ಯರಸ್ತೆಯ 10ನೇ ಕ್ರಾಸ್ ಅನ್ನು ಇಂದು ಮುಂಜಾನೆಯಿಂದ ಪೊಲೀಸರು ಸಂಪೂರ್ಣವಾಗಿ ತಮ್ಮ ವಶಕ್ಕೆ ಪಡೆದುಕೊಂಡಿದ್ದರು. ಈ ರಸ್ತೆಯ ಎರಡೂ ಬದಿಗಳಲ್ಲೂ ಬ್ಯಾರಿಕೇಡ್ ಅಳವಡಿಸಿ ಯಾರೂ ರಸ್ತೆಯಲ್ಲಿ ಓಡಾಡದಂತೆ ನಿರ್ಬಂಧ ವಿಧಿಸಿದ್ದರು. ಪೊಲೀಸರು ಏಕೆ ರಸ್ತೆಯನ್ನು ಬಂದ್ ಮಾಡಿದ್ದಾರೆ ಎಂದು ಅಲ್ಲಿನ ನಿವಾಸಿಗಳು ತಮ್ಮತಮ್ಮಲ್ಲೇ ಪ್ರಶ್ನಿಸಿಕೊಳ್ಳುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರಿದ್ದ ಕಾರಣ ಅವರನ್ನು ಪ್ರಶ್ನಿಸುವ ಗೋಜಿಗೆ ನಿವಾಸಿಗಳು ಹೋಗಿಲ್ಲ.

ಬೆಚ್ಚಿ ಬಿದ್ದರು: ತಮ್ಮ ನಡುವೆಯೇ ಶಂಕಿತ ಉಗ್ರ ವಾಸವಿದ್ದ. ಆತ ಇಲ್ಲಿಯೇ ಸ್ಫೋಟಕಗಳನ್ನು ತಯಾರಿಸುತ್ತಿದ್ದ ಎಂಬುದರ ಬಗ್ಗೆ ಅಲ್ಲಿನ ನಿವಾಸಿಗಳ ಅರಿವಿಗೆ ಬಂದಿರಲಿಲ್ಲ. ಬೆಳಗ್ಗೆ ಕಣ್ಣು ಬಿಡುತ್ತಿದ್ದಂತೆಯೇ ತಮ್ಮ ರಸ್ತೆಯಲ್ಲಿ ಪೊಲೀಸರ ದಂಡು ಇರುವುದನ್ನು ಕಂಡರಾದರೂ ಯಾಕೆ ಎಂಬುದು ಅವರಿಗೆ ಗೊತ್ತಿರಲಿಲ್ಲ. 9 ಗಂಟೆ ನಂತರ ಮಾಧ್ಯಮದವರು ತೆರಳಿದಾಗಲೇ ತಮ್ಮ ನಡುವೆ ಶಂಕಿತ ಉಗ್ರ ವಾಸವಿದ್ದು, ಬಾಂಬ್ ತಯಾರಿಸುತ್ತಿದ್ದ ಎಂಬ ವಿಷಯ ತಿಳಿದು ಬೆಚ್ಚಿಬಿದ್ದಿದ್ದಾರೆ.

ಬಾಡಿಗೆ ಕೊಟ್ಟಿಲ್ಲ: ರೂಂನಲ್ಲಿ ವಾಸವಿದ್ದ ಶಂಕಿತ ಉಗ್ರ ಕಳೆದ ತಿಂಗಳು ಬಾಡಿಗೆ ಕೊಟ್ಟಿಲ್ಲ ಎಂದು ತಿಳಿದುಬಂದಿದೆ. ರೂಂ ಬಾಡಿಗೆಗೆ ನೀಡಿದ್ದ ವೃದ್ಧೆ ಮಂಗಳಮ್ಮ ನಾಲ್ಕೈದು ಬಾರಿ ಬಾಡಿಗೆ ಕೇಳಿದಾಗ ಇನ್ನೂ ಸಂಬಳ ಬಂದಿಲ್ಲ. ಮುಂದಿನ ವಾರ ಸಂಬಳ ಬಂದ ನಂತರ ಬಾಡಿಗೆ ನೀಡುವುದಾಗಿ ಹೇಳಿದ್ದ ಎಂದು ತಿಳಿದುಬಂದಿದೆ.

ಶಾರೀಕ್ ಶಂಕಿತ ಉಗ್ರ?

ಪೊಲೀಸರು, ಮಂಗಳೂರಿನ ಮುನೀರ್ ಹಾಗೂ ಶಿವಮೊಗ್ಗ ಸಿದ್ದೇಶ್ವರನಗರದ ಸೈಯ್ಯದ್ ಯಾಸಿನ್ ಎಂಬುವರನ್ನು ಬಂಧಿಸಿದ್ದರು. ಈ ವೇಳೆ ಪ್ರಮುಖ ಆರೋಪಿಯಾದ ಶಾರೀಕ್ ಪೊಲೀಸರಿಗೆ ಸಿಕ್ಕದೆ ಪರಾರಿಯಾಗಿದ್ದ. ತುಂಗಾ ದಡದಲ್ಲಿ ನಡೆದಿದ್ದಂತಹ ಸ್ವರೂಪದಲ್ಲೇ ಮಂಗಳೂರಿನಲ್ಲೂ ಸ್ಫೋಟ ಸಂಭವಿಸಿರುವುದರಿಂದ ಶಂಕಿತ ಉಗ್ರ ಶಾರೀಕ್ ಇರಬಹುದು ಎಂದು ಹೇಳಲಾಗಿದೆ. ಈಗಾಗಲೇ ಎಡಿಜಿಪಿ ಅಲೋಕ್ ಕುಮಾರ್ ಅವರು ಮಂಗಳೂರು ಕುಕ್ಕರ್ ಸ್ಫೋಟದ ಆರೋಪಿಯ ಸಂಬಂಧಿಕರನ್ನು ಕರೆತಂದಿದ್ದೇವೆ ಎಂದು ಹೇಳಿರುವುದು ಹಾಗೂ ತೀರ್ಥಹಳ್ಳಿ ಡಿವೈಎಸ್ಪಿ ಅವರು ಶಾರೀಕ್ ಸಂಬಂಧಿಕರನ್ನು ಮಂಗಳೂರಿಗೆ ಕರೆದೊಯ್ದಿರುವುದನ್ನು ಗಮನಿಸಿದರೆ ಶಂಕಿತ ಉಗ್ರ ಶಾರೀಕ್ ಇರಬಹುದು ಎಂಬ ಅನುಮಾನಕ್ಕೆ ಇಂಬು ನೀಡುತ್ತದೆ.

ಮದುವೆ ವೇದಿಕೆಯಲ್ಲೇ ಅಭ್ಯರ್ಥಿಗಳ ಘೋಷಣೆ

ಡಿಕೆಶಿಗೆ ಸೆಡ್ಡು ಹೊಡೆದ ಸಿದ್ದರಾಮಯ್ಯ

ಕೊಪ್ಪಳ: ಒಂದೆಡೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ರಾಜ್ಯಾದ್ಯಂತ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನಿಸುತ್ತಿದ್ದಾರೆ. ಮತ್ತೊಂದೆಡೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮದುವೆ ಕಾರ್ಯಕ್ರಮದ ವೇದಿಕೆಯಲ್ಲೇ ಕೊಪ್ಪಳ ಜಿಲ್ಲೆಯ 5 ಅಭ್ಯರ್ಥಿಗಳನ್ನು ಘೋಷಣೆ ಮಾಡುವ ಮೂಲಕ ಡಿಕೆಶಿಗೆ ಸೆಡ್ಡು ಹೊಡೆದಿದ್ದಾರೆ.



ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಅವರ ಸಹೋದರ ಸಂಬಂಧಿಯೊಬ್ಬರ ಮದುವೆಯಲ್ಲಿ ಭಾಗವಹಿಸಲು ಕೊಪ್ಪಳ ತಾಲೂಕಿನ ವಣಬಳ್ಳಾರಿ ಗ್ರಾಮಕ್ಕೆ ಇಂದು ಆಗಮಿಸಿದ್ದ ಸಿದ್ದರಾಮಯ್ಯ, ಮದುವೆ ಕಾರ್ಯಕ್ರಮದಲ್ಲೂ ರಾಜಕೀಯ ಭಾಷಣ ಮಾಡುವ ಮೂಲಕ ಕರ್ನಾಟಕ ರಾಜಕಾರಣದಲ್ಲಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ. ಥೇಟ್ ರಾಜಕೀಯ ಸಮಾವೇಶದಂತೆ ಕಂಡುಬಂದ ಮದುವೆಯಲ್ಲಿ ಎಲ್ಲೂ ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಅವರ ಫೋಟೋ ಕಾಣದಂತೆ ನೋಡಿಕೊಂಡಿದ್ದಾರೆ.

ಕಾಣದ ಡಿಕೆಶಿ ಕಟೌಟ್: ಮದುವೆ ಮಂಟಪಕ್ಕೆ ತೆರಳುವ ರಸ್ತೆಯ ಎರಡೂ ಬದಿಯಲ್ಲಿ ಕಾಂಗ್ರೆಸ್ ನಾಯಕರು ಮತ್ತು ಸ್ವಾಮೀಜಿಗಳ ಕಟೌಟ್ ಕಂಡುಬಂದವು. ಆದರೆ ಎಲ್ಲೂ ಕೂಡ ಡಿಕೆಶಿ ಅವರ ಒಂದು ಸಣ್ಣ ಫೋಟೊ ಕೂಡ ಕಾಣಸಿಗಲಿಲ್ಲ.

ರಾಜಕೀಯ ಭಾಷಣ: ನೆಪಕ್ಕೆ ಎನ್ನುವಂತೆ ವಧು– ವರರಿಗೆ ಶುಭಕೋರಿದ ಸಿದ್ದರಾಮಯ್ಯ, ಅದೇ ವೇದಿಕೆ ಮೇಲೆ ರಾಜಕೀಯ ಭಾಷಣ ಶುರು ಮಾಡಿದರು. ಒಂದೆಡೆ ಕೊಪ್ಪಳ ಜಿಲ್ಲೆಯ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ಅವಕಾಶಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದರೆ, ಇತ್ತ ಸಿದ್ದರಾಮಯ್ಯ ಕೊಪ್ಪಳದ ಕನಕಗಿರಿಗೆ ಶಿವರಾಜ ತಂಗಡಗಿ, ಕುಷ್ಟಗಿ ಕ್ಷೇತ್ರಕ್ಕೆ ಅಮರೇಗೌಡ ಭಯ್ಯಾಪೂರ, ಯಲಬುರ್ಗಾಕ್ಕೆ ಬಸವರಾಜ ರಾಯರೆಡ್ಡಿ, ಕೊಪ್ಪಳಕ್ಕೆ ರಾಘವೇಂದ್ರ ಹಿಟ್ನಾಳ ಹಾಗೂ ಗಂಗಾವತಿ ಕ್ಷೇತ್ರದಿಂದ ಇಕ್ಬಾಲ್ ಅನ್ಸಾರಿಗೆ ಮತ ನೀಡುವಂತೆ ನೆರೆದಿದ್ದ ಜನರಿಗೆ ಮನವಿ ಮಾಡಿದ್ದಾರೆ.

ಡಿಕೆಶಿಗೆ ಟಾಂಗ್: ಕಾಂಗ್ರೆಸ್ ಬ್ಯಾನರ್‌ನಡಿ ಕಾರ್ಯಕ್ರಮ ಮಾಡಿದರೂ, ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಗಮನಕ್ಕೆ ತರಬೇಕಾಗುತ್ತೆ ಎಂಬ ಕಾರಣಕ್ಕೆ ಮದುವೆ ನೆಪದಲ್ಲಿ ಸಿದ್ದರಾಮಯ್ಯ ಸಮಾವೇಶ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಮೂಲಕ ತಮ್ಮ ಬೆಂಬಲಿಗರಿಗೆ ಟಿಕೆಟ್ ಫಿಕ್ಸ್ ಎಂಬ ಸಂದೇಶ ನೀಡಿದ್ದಾರೆ ಅನ್ನೋ ಚರ್ಚೆ ಕಾಂಗ್ರೆಸ್ ಪಕ್ಷದಲ್ಲೇ ಹುಟ್ಟಿಕೊಂಡಿದೆ. ಆದರೆ ಈ ಬೆಳವಣಿಗೆ ತಮಗೂ ಟಿಕೆಟ್ ಬೇಕು ಎಂದು ಅರ್ಜಿ ಸಲ್ಲಿಸಿದ್ದ ಕೊಪ್ಪಳ ಜಿಲ್ಲೆಯ ಆಕಾಂಕ್ಷಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಯಡಿಯೂರಪ್ಪರಿಂದ ಸಿದ್ದರಾಮಯ್ಯ ದುಡ್ಡು ಪಡೆದಿದ್ದಾರೆ

ಚಿಕ್ಕೋಡಿ: ವಿಪಕ್ಷ ನಾಯಕ ಸಿದ್ದರಾಮಯ್ಯ, ಯಡಿಯೂರಪ್ಪ ಅವರಿಂದ ದುಡ್ಡು ಪಡೆದು, ಇಬ್ಬರು ಕಾಂಗ್ರೆಸ್ ಶಾಸಕರಿಂದ ಬಿಜೆಪಿಗೆ ವೋಟು ಹಾಕಿಸಿದ್ದಾರೆ. ಅವರೇ ಬಿಜೆಪಿಯ 'ಬಿ' ಟೀಂ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಹೇಳಿದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಿಎಂಗಳಾದ ಸಿದ್ದರಾಮಯ್ಯ ಹಾಗೂ ಯಡಿಯೂರಪ್ಪ ವಿರುದ್ಧ ಹರಿಹಾಯ್ದರು. ಹೆಚ್.ಡಿ ಕುಮಾರಸ್ವಾಮಿ ಸಿಎಂ ಆಗಿದ್ದಾಗ ಸರ್ಕಾರ ಬೀಳಿಸಿದವರು ಸಿದ್ದರಾಮಯ್ಯ. ಯಡಿಯೂರಪ್ಪ ಅವರ ಜೊತೆ ಕೈ ಮಿಲಾಯಿಸಿ ಮುಂಬೈಗೆ ಕರೆದುಕೊಂಡು ಹೋಗಿ ಮಂಚದ ಮೇಲೆ ಕೂರಿಸಿ 25 ಕೋಟಿ ರೂ. ಕೊಟ್ಟು ದೇಣಿಗೆ ಕೊಟ್ಟಿಲ್ಲ ಎಂದು ಹೇಳಿದ್ದರು. ಇದೆಲ್ಲಾ ಮಾಡಿ ಯಡಿಯೂರಪ್ಪ ಉಳಿದಿದ್ದಾನಾ ಉಳಿದಿಲ್ಲ. ಹಾಲು ಕುಡಿದ ಮಕ್ಕಳೇ ಬದುಕಲ್ಲ ವಿಷ ಕುಡಿದು ಬದುಕುತ್ತಾವಾ ಎಂದು ಪ್ರಶ್ನಿಸಿದ್ದಾರೆ.



ಜೆಡಿಎಸ್ ಅಭ್ಯರ್ಥಿಗಳು ಇದ್ದಾರಾ ಇಲ್ವೋ ಅನ್ನೋದು 2023ರ ಚುನಾವಣೆಯಲ್ಲಿ ಗೊತ್ತಾಗುತ್ತೆ. 'ಸಾಬ್ರು ಬಂದ್ರೆ ಕ್ಯಾರೆ ಕಾಸೀಮ ಅಂದರೆ ಹುವಾ ಸಾಬ್ ಕಾಮ್ ಅನ್ನುವ ಹಾಗೆ ಆಗುತ್ತೆ ಜೆಡಿಎಸ್ ಪಕ್ಷಕ್ಕೆ ಬಿಜೆಪಿ 'ಬಿ' ಟೀಮ್ ಅನ್ನೋರು ರಾಜ್ಯಸಭಾ ಚುನಾವಣೆಯಲ್ಲಿ ಏನು ಮಾಡಿದ್ರು ಯಡಿಯೂರಪ್ಪ ಹತ್ತಿರ ದುಡ್ಡು ಪಡೆದು ಇಬ್ಬರು ಕಾಂಗ್ರೆಸ್ ಶಾಸಕರನ್ನು ತೆಗೆದುಕೊಂಡು ಬಿಜೆಪಿಗೆ ಸಿದ್ದರಾಮಯ್ಯ ವೋಟು ಹಾಕಿಸಿಲ್ವಾ, ಬಿಜೆಪಿ 'ಬಿ' ಟೀಂ ಯಾರೆಂದು ನೀವೇ ಹೇಳ್ಬೇಕು. ಸಿದ್ದರಾಮಯ್ಯ ಅವರನ್ನು ನೋಡಿದ್ರೆ ಅಯ್ಯೋ ಅನ್ನಿಸುತ್ತೆ. ಬಾದಾಮಿ ಬಿಟ್ಟು ಕೋಲಾರಕ್ಕೆ ಹೋದ್ರು. ಬಾದಾಮಿಯಲ್ಲಿ ನಾನೇ ಗೆಲ್ಲಿಸಿದ್ದೆ, ಆದರೆ ಗೆಲ್ಲಿಸಿದ ಸಾಬ್ರನ್ನೇ ಸಿದ್ದರಾಮಯ್ಯ ಕೈಬಿಟ್ಟಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಿವಿಧ ಪಕ್ಷದ ನಾಯಕರು ನನ್ನ ಸ್ನೇಹಿತರಿದ್ದಾರೆ. ಅನೇಕ ಜನ ಆರ್‌ಎಸ್‌ಎಸ್ (RSS) ಮುಖಂಡರು ನಮ್ಮ ಮನೆಗೆ ಬಿರಿಯಾನಿ ತಿನ್ನೋಕೆ ಬರ್ತಿದ್ರು. ಜೆಡಿಎಸ್ ಪಕ್ಷದಲ್ಲಿ ಯಾರಿಗೂ ಬಲವಂತವಾಗಿ ಬಾ ಅಂತ ಕರೀತಿಲ್ಲ. 2023ರ ಚುನಾವಣೆಯಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗೋದು ನಿಶ್ಚಿತ ಎಂದು ದರ್ಗಾ ಎದುರು ಇಬ್ರಾಹಿಂ ಶಪಥ ಮಾಡಿದ್ದಾರೆ.

ಡಿ.12ರಂದು ಹೋಮ, ಹವನ

ಮೈಸೂರು, ನ.20– ಮೈಸೂರಿನ ಊಟಿ ರಸ್ತೆ ದತ್ತನಗರ ಶ್ರೀ ದೇವಿ ಪ್ರಸನ್ನ ದೊಡ್ಡಮ್ಮತಾಯಿ ಸೇವಾ ಟ್ರಸ್ಟ್‌ನ 23ನೇ ವಾರ್ಷಿಕೋತ್ಸವದ ಪ್ರಯುಕ್ತ ಡಿ.12ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವತಿಯಿಂದ ಹೋಮ, ನವಗ್ರಹ, ಪೂಜೆ, ಪಂಚಾಮೃತ ಅಭಿಷೇಕ ನಡೆಯಲಿದೆ. ಮಧ್ಯಾಹ್ನ ಅನ್ನಸಂತರ್ಪಣೆ ಏರ್ಪಡಿಸಿದೆ. ಸಂಜೆ 6.30ಕ್ಕೆ ದೊಡ್ಡಮ್ಮತಾಯಿ ಉತ್ಸವ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಮುಖ್ಯಸ್ಥರು ತಿಳಿಸಿದ್ದಾರೆ.

ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ

ಮೈಸೂರು, ನ.20– ಮೈಸೂರಿನ ಅಶೋಕಪುರಂ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆಯ ನೂತನ ಪದಾಧಿಕಾರಿಗಳಾಗಿ ಎಂ.ಮಾದಯ್ಯ (ಗೌರವ ಅಧ್ಯಕ್ಷ), ಆನಂದಮೂರ್ತಿ (ಅಧ್ಯಕ್ಷ), ಬಿ.ಎಂ.ಶ್ರೀಕಂಠಮೂರ್ತಿ, ಕೆಂಪಸಿದ್ದಯ್ಯ (ಉಪಾಧ್ಯಕ್ಷರು), ಎಂ.ಕೆ.ರೇವಣ್ಣ (ಕಾರ್ಯದರ್ಶಿ), ಈಶ್ವರ, ಎಂ.ಗಂಗಾಧರ (ಸಹ ಕಾರ್ಯದರ್ಶಿಗಳು), ರೈಲ್ವೆ ರಾಜಣ್ಣ (ಸಂಘಟನಾ ಕಾರ್ಯದರ್ಶಿ), ಎಂ. ಪುರುಷೋತ್ತಮ್ (ಖಜಾಂಚಿ), ದೇವರಾಜು (ಗೌರವ ಸಲಹೆಗಾರರು) ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಪುರುಷರ ದಿನಾಚರಣೆ

ಮೈಸೂರು,ನ.20(ಪಿಎಂ)– ಗೋಕುಲಂನ ಸಾಂಸ್ಕೃತಿಕ ಭವನದಲ್ಲಿ ಪ್ಯೂರ್ ಸಂಸ್ಥೆ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಪುರುಷರ ದಿನಾಚರಣೆಯನ್ನು ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಎಲ್ಲಾ ಕ್ಷೇತ್ರಗಳಲ್ಲೂ ಪುರುಷರು ಮುಂದಾಳತ್ವ ವಹಿಸಿದ್ದು, ಮಹಿಳೆಯರಿಗೂ ತಮ್ಮ ಕ್ಷೇತ್ರಗಳಲ್ಲಿ ಸ್ಥಾನಮಾನ ದೊರೆಯಲು ಸಹಕಾರಿಯಾಗಿ ಸಾಗುತ್ತಿದ್ದಾರೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಪ್ಯೂರ್ ಸಂಸ್ಥೆ ಸಂಸ್ಥಾಪಕರೂ ಆದ ವೈದ್ಯ ಡಾ. ಪೊನ್ನಪ್ಪ ಮಾತನಾಡಿ, ಪುರುಷರು ಸಮಾಜದಲ್ಲಿ ಸಾಕಷ್ಟು ಕೊಡುಗೆ ನೀಡುತ್ತಿದ್ದಾರೆ.



ಈ ನಡುವೆ ಬಹಳಷ್ಟು ಸವಾಲು ಸಹ ಎದುರಿಸುತ್ತಿದ್ದಾರೆ. ಬಹುತೇಕ ಸಂದರ್ಭದಲ್ಲಿ ಅನಗತ್ಯವಾಗಿ ಪುರುಷರನ್ನು ನಕಾರಾತ್ಮಕವಾಗಿ ಬಿಂಬಿಸಲಾಗುತ್ತಿದೆ. ಇದನ್ನು ನಿವಾರಿಸುವ ನಿಟ್ಟಿನಲ್ಲಿ ಸಮಾಜ ಮುನ್ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ನ್ಯೂ ಡಯಾಕೇರ್ ಸಂಸ್ಥೆಯ ಮಧುಮೇಹ ತಜ್ಞ ಡಾ. ಎ.ಆರ್.ರೇಣುಕಾಪ್ರಸಾದ್, ಪುರುಷರಲ್ಲಿನ ಆರೋಗ್ಯ ಸಮಸ್ಯೆಗಳು ಹಾಗೂ ಮಧುಮೇಹದ ಬಗ್ಗೆ ಮಾಹಿತಿ ನೀಡಿದರು. ಅಂತೆಯೇ ನವಾಯು ಕೇರ್ ಸಂಸ್ಥೆಯ ಡಾ.ಪಿ.ನವ್ಯ, ದಿನನಿತ್ಯ ಆಯುರ್ವೇದ ಬಳಕೆಯಿಂದ ಆರೋಗ್ಯ ರಕ್ಷಿಸಿಕೊಳ್ಳುವ ಮತ್ತು ಅನಾರೋಗ್ಯ ತಡೆಗಟ್ಟುವ ಬಗ್ಗೆ ತಿಳಿಸಿಕೊಟ್ಟರು.

ಇದೇ ವೇಳೆ ನ್ಯೂ ಡಯಾಕೇರ್ ಮತ್ತು ನವಾಯು ಕೇರ್ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ ಪಾರ್ಥ ಯೋಗ ಮುದ್ರೆಗಳ ಬಗ್ಗೆ ಮಾಹಿತಿ ನೀಡಿದರು. ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರೊ.ಕೆ.ಬಿ. ವಾಸುದೇವ, ಡಾ.ವಸಂತ್ ಕುಮಾರ್, ಲಕ್ಷ್ಮೀಶ್ ಮತ್ತಿತರರು ಹಾಜರಿದ್ದರು.

ಪ್ರಿ–ಡಯಾಬಿಟಿಸ್, ಸಂಧಿವಾತ ಖಾಯಿಲೆಗಳಿಗೆ ಚಿಕಿತ್ಸಾ ಶಿಬಿರ

ಮೈಸೂರು, ನ.20– ನಗರದ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ನ.21 ರಿಂದ 30ರವರೆಗೆ 'ಪ್ರಿ–ಡಯಾಬಿಟಿಸ್ (ಪೂರ್ವ–ಮಧುಮೇಹ ಲಕ್ಷಣ) ಮತ್ತು ಸಂಧಿವಾತ ಖಾಯಿಲೆಗಳಿಗೆ ಚಿಕಿತ್ಸಾ ಶಿಬಿರ' ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ನಡೆಯುವ ಶಿಬಿರದಲ್ಲಿ ಹಸ್ತ ಮತ್ತು ಪಾದ ಉರಿ, ಅಧಿಕ ದಾಹ, ಬೆವರು, ಮೂತ್ರ ಮತ್ತು ಕೀಲು ನೋವು ಇತ್ಯಾದಿ ಲಕ್ಷಣಗಳುಳ್ಳ ತೊಂದರೆಗಳಿಗೆ ತಜ್ಞ ವೈದ್ಯರಿಂದ ತಪಾಸಣೆ, ಸಲಹೆ ಮತ್ತು ಚಿಕಿತ್ಸೆಯನ್ನು ನೀಡಲಾಗುವುದು. ಹಾಗೆಯೇ ಉಚಿತ ಮೂತ್ರ ಪರೀಕ್ಷೆಯನ್ನು ಮಾಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಾಜಿಯಾಬಾದ್‌ನ ರಾಡಿಸನ್ ಬ್ಲೂ ಹೋಟೆಲ್ ಮಾಲೀಕ ಅಮಿತ್ ಜೈನ್ ನಿಗೂಢ ಸಾವು

ಹೊಸದಿಲ್ಲಿ: ಗಾಜಿಯಾಬಾದ್‌ನ ಜನಪ್ರಿಯ ರಾಡಿಸನ್ ಬ್ಲೂ ಹೋಟೆಲ್‌ನ ಮಾಲೀಕ ಅಮಿತ್ ಜೈನ್ ದೆಹಲಿಯ ಕಾಮನ್‌ವೆಲ್ತ್ ವಿಲೇಜ್ ಪ್ರದೇಶದಲ್ಲಿನ ಅವರ ನಿವಾಸದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ದೆಹಲಿಯ ಮಾಂಡವಲಿ ಪೊಲೀಸ್ ಠಾಣೆಯ ಪೊಲೀಸ್ ನಿಯಂತ್ರಣ ಕೊಠಡಿಗೆ ಶನಿವಾರ ಕರೆ ಬಂದಿದ್ದು, ಕಾಮನ್‌ವೆಲ್ತ್... ಗೇಮ್ಸ್ ಗ್ರಾಮದಲ್ಲಿರುವ ತನ್ನ ಮನೆಯಲ್ಲಿ ವ್ಯಕ್ತಿಯೊಬ್ಬ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ ಎಂದು ಕರೆ ಮಾಡಿದವರು ಹೇಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರು ಕೌಶಂಬಿಯಲ್ಲಿರುವ ರಾಡಿಸನ್ ಬ್ಲೂ ಹೋಟೆಲ್ ಮಾಲೀಕ ಎಂದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಮಿತ್ ಜೈನ್ ಕಾಮನ್‌ವೆಲ್ತ್ ಗೇಮ್ಸ್ ಗ್ರಾಮದಲ್ಲಿರುವ ಕರೆ ಮಾಡಿದವರ ನಿವಾಸಕ್ಕೆ ಭೇಟಿ ನೀಡಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಮತ್ತೊಂದು ಭೀಭತ್ಸ ಕೃತ್ಯ

ಗೆಳತಿಯನ್ನು ಕೊಂದು ನಾಲ್ಕು ದಿನ ಮೆಡಿಕಲ್ ಶಾಪ್‌ನಲ್ಲಿ ಇಟ್ಟಿದ್ದ ಯುವಕ

ರಾಯ್‌ಪುರ: ದೇಶದಲ್ಲಿ ಮತ್ತೊಂದು ಭಯಾನಕ ಘಟನೆ ನಡೆದಿದ್ದು ಗೆಳತಿಯನ್ನು ಕೊಂದು ನಾಲ್ಕು ದಿನಗಳ ಕಾಲ ತನ್ನ ಮೆಡಿಕಲ್ ಶಾಪ್‌ನಲ್ಲಿ ಇಟ್ಟಿದ್ದ ಘಟನೆ ವರದಿಯಾಗಿದೆ.

ಮೆಡಿಕಲ್ ಸ್ಟೋರ್‌ನ ಮಾಲೀಕ ಆಶಿಶ್ ಸಾಹು ಹಣದ ಸಮಸ್ಯೆಯಿಂದ ಹೈರಾಣವಾಗಿದ್ದ. ಈ ಮಧ್ಯೆ ಕೊಟ್ಟಿದ್ದ ಸಾಲ ವಾಪಸ್ ಕೇಳಿದ ತನ್ನ ಗೆಳತಿ ಪ್ರಿಯಾಂಕಾಳನ್ನು ಕೊಂದು ಶವವನ್ನು ನಾಲ್ಕು ದಿನಗಳ ಕಾಲ ತನ್ನ ಅಂಗಡಿಯಲ್ಲಿಟ್ಟು ವಿಲೇವಾರಿ ಮಾಡಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ ಘಟನೆ ಛತ್ತೀಸ್‌ಗಢದ ಬಿಲಾಸ್‌ಪುರ ಜಿಲ್ಲೆಯಲ್ಲಿ ನಡೆದಿದೆ. ಮೃತದೇಹವನ್ನು ಬಟ್ಟೆಯೊಂದರಲ್ಲಿ ಸುತ್ತಿ ಕಾರಿನಲ್ಲಿ ಮನೆಗೆ ತೆಗೆದುಕೊಂಡು ಹೋಗುತ್ತಿದ್ದಾಗ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಪೊಲೀಸರ ಪ್ರಕಾರ, ಸಾಹು ಮತ್ತು ಭಿಲಾಯಿ ನಿವಾಸಿ ಪ್ರಿಯಾಂಕಾ ನಡುವೆ ಹಣಕಾಸಿನ ವಿಚಾರವಾಗಿ ಕೆಲ ಸಮಯದಿಂದ ಜಗಳ ನಡೆಯುತ್ತಿತ್ತು.




ಪ್ರಿಯಾಂಕಾ ಬಿಲಾಸ್‌ಪುರದ ಹಾಸ್ಟೆಲ್‌ನಲ್ಲಿ ರಾಜ್ಯ ನಾಗರಿಕ ಸೇವಾ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಳು. 'ಪ್ರಿಯಾಂಕಾ ಮತ್ತು ಆಶಿಶ್ ಸಾಹು ಮಧ್ಯೆ ಆತ್ಮೀಯತೆ ಬೆಳೆಯಿತು. ನಂತರ ಇಬ್ಬರು ಒಟ್ಟಿಗೆ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರು. ಷೇರು ಮಾರುಕಟ್ಟೆಯಲ್ಲಿನ ನಷ್ಟದ ನಂತರ ತನ್ನಿಂದ ಸಾಲ ಪಡೆದಿದ್ದ 11 ಲಕ್ಷ ರೂಪಾಯಿಯನ್ನು ಹಿಂದಿರುಗಿಸುವಂತೆ ಆಶಿಶ್‌ಗೆ ಒತ್ತಡ ಹೇರುತ್ತಿದ್ದಳು ಎಂದು ಬಿಲಾಸ್‌ಪುರದ ಹಿರಿಯ ಪೊಲೀಸ್ ಅಧೀಕ್ಷಕ ಪಾರುಲ್ ಮಾಥುರ್ ತಿಳಿಸಿದರು.

ಬಿಲಾಸ್‌ಪುರದ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಪ್ರಿಯಾಂಕಾ ಕುಟುಂಬವು ನಾಪತ್ತೆ ದೂರು ದಾಖಲಿಸಿತ್ತು. ನಂತರ ಪೊಲೀಸರು ಸಾಹು ಪ್ರಮುಖ ಆರೋಪಿ ಎಂದು ಶಂಕಿಸಿದ್ದು ಆತನ ಮೇಲೆ ಕಣ್ಣಿಟ್ಟಿದ್ದರು. ಕುಟುಂಬದ ಸದಸ್ಯರೊಬ್ಬರು ಪ್ರಿಯಾಂಕಾ ಮತ್ತು ಸಾಹು ಇಬ್ಬರು ಪರಿಚಿತರು. ಅಲ್ಲದೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು ಎಂದು ಬಹಿರಂಗಪಡಿಸಿದರು. ಆದ್ದರಿಂದ, ಆರೋಪಿಯನ್ನು ಪ್ರಮುಖ ಶಂಕಿತನಾಗಿ ಗುರುತಿಸಿದ್ದೆವು. ಸಾಹು ಅಂಗಡಿ ಮತ್ತು ನಿವಾಸದ ಸುತ್ತಮುತ್ತಲಿನ ಸಿಸಿಟಿವಿಯ ದೃಶ್ಯಗಳ ಜೊತೆಗೆ ಅವನ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಿದ್ದೇವೆ ಎಂದು ಹೇಳಿದರು. ನವೆಂಬರ್ 14ರಂದು ಪ್ರಿಯಾಂಕಾಳನ್ನು ಕೊಂದ ಸಾಹು ದೇಹವನ್ನು ಮೆಡಿಕಲ್ ಶಾಪ್‌ನಲ್ಲಿ ಇಟ್ಟಿದ್ದು. ಅಲ್ಲದೆ ಶವ ವಿಲೇವಾರಿಗೆ ಸಮಯ ಕಾಯುತ್ತಿದ್ದನು. ಆತ ದೇಹವನ್ನು ಸಾಗಿಸುತ್ತಿದ್ದಾಗ ಆತನನ್ನು ಬಂಧಿಸಲಾಯಿತು ಎಂದು ಕೊತ್ವಾಲಿ ಪೊಲೀಸ್ ಠಾಣೆಯ ಉಸ್ತುವಾರಿ ಪ್ರದೀಪ್ ಆರ್ಯ ಹೇಳಿದ್ದಾರೆ.

ಶ್ರದ್ಧಾ ಹತ್ಯೆ: ತಲೆಬುರುಡೆ ಭಾಗ, ಹರಿತ ಆಯುಧ ಪತ್ತೆ

ನವದೆಹಲಿ: ಕಾಲ್ ಸೆಂಟರ್ ಉದ್ಯೋಗಿ ಶ್ರದ್ಧಾ ವಾಲಕರ್ ಹತ್ಯೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಭಾನುವಾರ ಮನುಷ್ಯನ ತಲೆಬುರುಡೆಯ ಕೆಳಭಾಗ, ಕೆಳದವಡೆ ಹಾಗೂ ಮತ್ತಷ್ಟು ಮೂಳೆಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಭಾಗಗಳು ಶ್ರದ್ಧಾಳದ್ದೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು, ಆಕೆಯ ತಂದೆಯ ಡಿಎನ್‌ಎ ಮಾದರಿಗಳೊಂದಿಗೆ ಹೊಂದುತ್ತವೆಯೇ ಎಂಬುದನ್ನು ದೃಢೀಕರಿಸಲು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ. ಛತ್ತರ್‌ಪುರದ ಅರಣ್ಯ ಪ್ರದೇಶ ಸೇರಿದಂತೆ, ಅಫ್ತಾಬ್ ಅಮೀನ್ ಪೂನಾವಾಲಾ ಮತ್ತು ಶ್ರದ್ಧಾ ವಾಸಿಸುತ್ತಿದ್ದ ಸ್ಥಳ ಹಾಗೂ ದೆಹಲಿ ನಗರದಲ್ಲಿ ದೆಹಲಿ ಪೊಲೀಸರು ಮತ್ತೊಮ್ಮೆ ಶೋಧ ಕಾರ್ಯವನ್ನು ಆರಂಭಿಸಿದ್ದಾರೆ.




ಆಯುಧ ಪತ್ತೆ: ಅಫ್ತಾಬ್‌ನ ಛತ್ತರ್‌ಪುರ ಫ್ಲ್ಯಾಟ್‌ನಿಂದ ಶನಿವಾರ ಪೊಲೀಸರು ದೊಡ್ಡದಾದ, ಹರಿತವಾದ ಕತ್ತರಿಸುವ ಅಸ್ತ್ರವೊಂದನ್ನು ವಶಪಡಿಸಿಕೊಂಡಿದ್ದಾರೆ. ಇದನ್ನು ಆರೋಪಿಯು ಶ್ರದ್ಧಾಳ ದೇಹ ಕತ್ತರಿಸಲು ಬಳಸಿರಬಹುದು ಎಂದು ಶಂಕಿಸಲಾಗಿದೆ.

ಸಾಕ್ಷ್ಯ ಮುಚ್ಚಿಟ್ಟ ಆರೋಪಿ: ಶ್ರದ್ಧಾಳನ್ನು ಹತ್ಯೆ ಮಾಡಿದ ಬಳಿಕ ಎಲ್ಲಾ ಸಾಕ್ಷ್ಯಗಳನ್ನು ನಾಶಪಡಿಸಿದ್ದಾಗಿ ಆರೋಪಿ ಅಫ್ತಾಬ್ ಪೊಲೀಸರ ಎದುರು ಒಪ್ಪಿಕೊಂಡಿದ್ದಾನೆ. ಅಷ್ಟೇ ಅಲ್ಲ, ಹತ್ಯೆಯ ನಂತರ ದೊರೆತ ಶ್ರದ್ಧಾಳ ಮೂರು ಚಿತ್ರಗಳನ್ನು ನಾಶಪಡಿಸಿದ್ದಾಗಿಯೂ ಹೇಳಿದ್ದಾನೆ. ಪೊಲೀಸರು ಕಟ್ಟುನಿಟ್ಟಿನ ವಿಚಾರಣೆ ಆರಂಭಿಸಿದ್ದು ಆರೋಪಿಯು ನಿಧಾನವಾಗಿ ಸತ್ಯವನ್ನು ಬಹಿರಂಗಪಡಿಸುತ್ತಿದ್ದಾನೆ. ಛತ್ತರ್‌ಪುರದ ತನ್ನ ಫ್ಲ್ಯಾಟ್‌ನಿಂದ ಪ್ರಮುಖ ಸಾಕ್ಷ್ಯವನ್ನು ಪಡೆಯಲು ಪೊಲೀಸರಿಗೆ ನೆರವಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶ್ರದ್ಧಾಳ ರಕ್ತದ ಬಟ್ಟೆಗಳನ್ನು ಕಸದ ವ್ಯಾನ್‌ಗೆ ವಿಲೇವಾರಿ ಮಾಡಿದ್ದಾಗಿಯೂ ಆರೋಪಿ ಮಾಹಿತಿ ನೀಡಿದ್ದಾನೆ.

ಕೆರೆಯಲ್ಲಿ ತಲೆಬುರುಡೆ: ಈ ನಡುವೆ, ಶ್ರದ್ಧಾಳ ತಲೆಬುರುಡೆಯನ್ನು ದೆಹಲಿಯ ಮೆಹ್ರೌಲಿ ಕೆರೆಗೆ ಎಸೆದಿರುವುದಾಗಿ ಅಫ್ತಾಬ್ ಪೊಲೀಸರಿಗೆ ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಭಾನುವಾರ ದೆಹಲಿ ಮಹಾನಗರ ಪಾಲಿಕೆಯ ಸಿಬ್ಬಂದಿ ಹಾಗೂ ಪೊಲೀಸರು ಮೆಹ್ರೌಲಿ ಕೆರೆಯನ್ನು ಖಾಲಿ ಮಾಡುವ ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.11.2022 ಸೋಮವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ : ಚಿತ್ತ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು** : ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ: ಸಂಸ್ಥೆಗಳ ಅಧ್ಯಕ್ಷ ಪ್ರೊ. ವಿ.ಕೆ. ಗೋಪಾಲರಾವ್, ಮುಖ್ಯ ಅಭ್ಯಾಗತರು: ಸಾಹಿತಿ ಪ್ರೊ. ಎಂ.ಕೃಷ್ಣೇಗೌಡ, ಗೌರವ ಉಪಸ್ಥಿತಿ: ಸಂಸ್ಥೆಗಳ ಉಪಾಧ್ಯಕ್ಷ ಸಿ.ಆರ್. ನಾಗರಾಜ್, ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಸಹಕಾರ್ಯದರ್ಶಿ ಕೆ.ಎಸ್. ಹಿರಿಯಣ್ಣ, ಟಿ.ಪಿ. ಕೈಲಾಸಂ ರಂಗಮಂಟಪ, ಬೆಳಗ್ಗೆ 10.30.

■ **ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್** : ಕಡೇ ಕಾರ್ತಿಕ ಸೋಮವಾರ ಪ್ರಯುಕ್ತ ನಾಗಲಿಂಗೇಶ್ವರ ಸ್ವಾಮಿಗೆ ತ್ರಿಶೂಲ ಧಾರಣೆ: ಮೂಕನಹುಂಡಿ ಶನೇಶ್ವರಸ್ವಾಮಿ ಗುಡ್ಡಪ್ಪನವರಿಂದ, ಅಭಿಷೇಕ, ಹೋಮ, ಪೂಜಾ ಕಾರ್ಯಕ್ರಮ, 11.30ಕ್ಕೆ ಮಹಾಮಂಗಳರಾತಿ, 12.30ಕ್ಕೆ ಪ್ರಸಾದ ವಿನಿಯೋಗ ಶ್ರೀರಾಂಪುರ 2ನೇ ಹಂತ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್** : 'ಗಿರಿಜಾ ಕಲ್ಯಾಣ' ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್** : 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 24ನೇ ವರ್ಷದ ಮಹಾ ಕುಂಭಾಭಿಷೇಕ, 8ನೇ ವರ್ಷದ ಹಾಲರವಿ ಸೇವೆ, ನಾಲ್ಕನೇ ಕಾರ್ತಿಕ ಸೋಮವಾರದ ಅಂಗವಾಗಿ ಶ್ರೀ ಸ್ವಾಮಿಗೆ ಅಭಿಷೇಕ, ವಿಶೇಷ ಪೂಜೆ, ಸಂಜೆ 7 ಗಂಟೆಗೆ ಶ್ರೀ ಸ್ವಾಮಿಯ ಸುವರ್ಣ ಕೊಳಗದ ಮೆರವಣಿಗೆ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್** : ದೃಶ್ಯ ಮಾಂದ್ಯರಿಗಾಗಿ ಕರ್ನಾಟಕ ರಾಜ್ಯ ಚೆಸ್ ಚಾಂಪಿಯನ್‌ಷಿಪ್ ಉದ್ಘಾಟನೆ, ಅಧ್ಯಕ್ಷತೆ: ನಿಸರ್ಗ ಚಿಕಿತ್ಸಾ ತಜ್ಞ ಶ್ರೀ ಬಸವಾನಂದ ಮಹಾಸ್ವಾಮೀಜಿ, ಉಪಸ್ಥಿತರು: ವಿದ್ಯಾವಿಕಾಸ ಸಂಸ್ಥೆಯ ಎಂಡಿ ಕವೀಶ್ ಗೌಡ, ಕಾರ್ಪೊರೇಟರ್‌ಗಳಾದ ಎಸ್‌ಬಿಎಂ ಮಂಜು, ಭಾಗ್ಯ ಮಾದೇಶ್, ಕೆಆರ್‌ವಿವಿ ವೇದಿಕೆ ಗೌರವ ಅಧ್ಯಕ್ಷ ಹೆಚ್.ಕೆ. ರಾಮು ಇತರರು, ಬಸವೇಶ್ವರ ಕಲ್ಯಾಣ ಮಂಟಪ, ಪಡುವಾರಹಳ್ಳಿ, ಬೆಳಗ್ಗೆ 9.15ಕ್ಕೆ.

■ **ಶ್ರೀ ಉತ್ತರಾದಿ ಮಠ** : ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಕಾರ್ತಿಕ ಮಾಸದ ಕಡೇ ಸೋಮವಾರದ ಅಂಗವಾಗಿ ರುದ್ರನಮಕ, ಚಮಕ, ಪಾರಾಯಣದೊಂದಿಗೆ ಸಾಮೂಹಿಕ ರುದ್ರಾಭಿಷೇಕ ಹಾಗೂ ಜಪಾರಧನೆ, ಉಪಸ್ಥಿತಿ: ಮೈಸೂರು ಮದುತ್ತರಾದಿ ಮಠದ ವ್ಯವಸ್ಥಾಪಕ ಪಂ. ಅನಿರುದ್ಧಾಚಾರ್ಯ ಪಾಂಡುರಂಗಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕೆಆರ್‌ಎಸ್ ರಸ್ತೆ, ಯಾದವಗಿರಿ (ರೈಲ್ವೇ ಮ್ಯೂಸಿಯಂ ಎದುರು).

■ **ರಂಗಾಯಣ** : ಅಡ್ಡಂಡ ಸಿ. ಕಾರ್ಯಪ್ಪ ರಚಿಸಿ, ನಿರ್ದೇಶನ ಮಾಡಿರುವ ಟಿಪ್ಪು ನಿಜ ಕನಸುಗಳು ನಾಟಕ ಪ್ರದರ್ಶನ, ಸಂಜೆ 6 ಗಂಟೆಗೆ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ** : ಮಹಾ ಗಣಪತಿ ಹೋಮ, ಉಪ ಪೂಜೆ, ಪಾಂಚಗವ್ಯ, ಪಾಂಚಕಂ, ಕಳಸ ಪೂಜಾ, ಶವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ತಮಾನ ಪೂಜೆ, ದೀಪಾರಾಧನೆ, ಅತ್ತಾಳ ಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಬೆಳಗ್ಗೆ–ಸಂಜೆ.

■ **ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ** : ಸಿದ್ಧ ಸಮಾಧಿ ಯೋಗ ಶಿಬಿರ, ಕುವೆಂಪುನಗರ.

ರಂಗಪ್ರೇಮಿಗಳ ಮನಗೆದ್ದ ಟಿಪ್ಪು ನಿಜಕನಸುಗಳು

● ಕಿಕ್ಕಿರಿದ ರಂಗಾಸಕ್ತರಿಂದ ನಾಟಕ ವೀಕ್ಷಣೆ ● ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮತ್ತವರ ತಂಡದ ಪ್ರಯತ್ನಕ್ಕೆ ಮುಕ್ತಕಂಠದಿಂದ ಪ್ರಶಂಸೆ ● ಆರಂಭದಿಂದ ಅಂತ್ಯದವರೆಗೆ ಕುತೂಹಲದಿಂದ ನಾಟಕ ವೀಕ್ಷಣೆ; ಕೊನೆಗೆ ಭಾರೀ ಕರತಾಡನದ ಮೂಲಕ ಅಭಿನಂದನೆ



ಟಿಪ್ಪು, ಕೊಡವ ಸಮುದಾಯದ ಮುಖಂಡರನ್ನು ಭೇಟಿಯಾಗುವ ಸನ್ನಿವೇಶ.



ಟಿಪ್ಪು ಪತನದ ನಂತರ ಸಾಮ್ರಾಜ್ಯ ದಕ್ಕಿದ ಸಂಭ್ರಮದಲ್ಲಿ ಮೈಸೂರು ಮಹಾರಾಣಿಯರು.

ಮೈಸೂರು, ನ.20(ಎಂಕೆ)– ರಂಗಪ್ರೇಮಿಗಳಿಂದ ಕಿಕ್ಕಿರಿದು ತುಂಬಿದ್ದ ರಂಗವೇದಿಕೆಯಲ್ಲಿ 'ಟಿಪ್ಪು ನಿಜಕನಸುಗಳು' ನಾಟಕದ ಪ್ರಥಮ ಪ್ರದರ್ಶನ ಅದ್ಭುತ ಯಶಸ್ಸು ಕಂಡಿತು.

ಮೈಸೂರು ರಂಗಾಯಣದ ಭೂಮಿಗೀತದಲ್ಲಿ ಬಿಗಿ ಪೊಲೀಸ್ ಭದ್ರತೆಯೊಂದಿಗೆ ಪ್ರದರ್ಶನಗೊಂಡ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಟಿಪ್ಪು ಪಾತ್ರಧಾರಿ ಸಚಿನ್ ಮಿತ್ರ, ಟಿಪ್ಪು ಪತ್ನಿ ರುಕಿಯಾ ಬೇಗಂ ಪಾತ್ರಧಾರಿಣಿ ಸೌಮ್ಯ, ದಿವಾನ್ ಪೂರ್ಣಯ್ಯ ಪಾತ್ರದಲ್ಲಿ ಕಾರ್ತಿಕ್, ಸೈಯದ್ ಹುಸೇನ್ ಕಿರ್ಮಾನಿ ಪಾತ್ರದಲ್ಲಿ ದುರ್ಗಪರಮೇಶ್ ಸೇರಿದಂತೆ ಎಲ್ಲ ಪಾತ್ರಧಾರಿಗಳೂ ತಮ್ಮ ನಟನಾ ಕೌಶಲ್ಯತೆಯಿಂದ ನೆರೆದ ರಂಗಾಸಕ್ತರ ಮನಸೂರೆಗೊಂಡರು.

ನಿರ್ಮಾಣ, ವಸ್ತ್ರ ವಿನ್ಯಾಸ ಹಾಗೂ ಪಾತ್ರಗಳ ನಿರ್ವಹಣೆ ಅಚ್ಚುಕಟ್ಟಾಗಿದ್ದು, ಐತಿಹಾಸಿಕ ಮೆರಗು ನೀಡುವಂತಿತ್ತು. ಶಶಿಧರ ಅಡಪರ ರಂಗವಿನ್ಯಾಸ, ಆರ್.ಸಿ.ಧನಂಜಯ ಮತ್ತು ಸುಬ್ರಹ್ಮಣ್ಯ ಮೈಸೂರು ಅವರ ಸಂಗೀತ, ಮಹೇಶ್ ಕಲ್ಲತ್ತಿಯ ಬೆಳಕು ಹಾಗೂ ಪಿ.ಶಿವಕುಮಾರ್ ಅವರ ಧ್ವನಿ ಸೊಗಸಾಗಿತ್ತು. ಆರಂಭದಿಂದ ಕೊನೆಯವರೆಗೂ ತೀವ್ರ ಕುತೂಹಲದಿಂದ ನಾಟಕ ಸವಿದ ರಂಗಪ್ರೇಮಿಗಳು ಕಡೆಗೆ ಒಮ್ಮೆಲೆ ಮೇಲೆದ್ದು ಕರತಾಡನದ ಮೂಲಕ ಅಡ್ಡಂಡ ಕಾರ್ಯಪ್ಪ ಹಾಗೂ ನಾಟಕ ತಂಡವನ್ನು ಮುಕ್ತಕಂಠದಿಂದ ಅಭಿನಂದಿಸಿದರು.


ನಾಟಕ ಆರಂಭಕ್ಕೆ ಐದತ್ತು ನಿಮಿಷ ಮುಂಚೆಯೇ ರಂಗಾಯಣದತ್ತ ತಂಡೋಪತಂಡವಾಗಿ ಧಾವಿಸಿದ ರಂಗಭೂಮಿ ಅಭಿಮಾನಿಗಳು ರಂಗಾಯಣ ನಿರ್ದೇಶಕರ ಮಹಾ ಸಾಹಸ ಪ್ರೋತ್ಸಾಹಿಸಿದರು. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಸನ್ನಿವೇಶದೊಂದಿಗೆ ಆರಂಭವಾಗುವ ನಾಟಕದ ಪ್ರತಿಯೊಂದು ದೃಶ್ಯಾವಳಿಯನ್ನು ಕಾಲಮಾನಕ್ಕೆ ತಕ್ಕಂತೆ ಸಂಯೋಜಿಸಲಾಗಿದೆ. ಸರ್ವ ರೀತಿಯಲ್ಲೂ ಮೂರು ಗಂಟೆಗಳ ಕಾಲ ರಂಗಾಸಕ್ತರ ಗಮನ ಸೆಳೆಯಲಿದೆ.

ತುಂಬಿದ ಭೂಮಿಗೀತ: ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ, ಆರ್‌ಎಸ್‌ಎಸ್ ಹಿರಿಯ ಮುಖಂಡ ವೆಂಕಟರಾಂ ಜೀ, ಪ್ರಧಾನ ಗುರುದತ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ಸೇರಿದಂತೆ ಹಲವರು 'ಟಿಪ್ಪು ನಿಜಕನಸುಗಳು' ನಾಟಕದ ಪ್ರಥಮ ಪ್ರದರ್ಶನವನ್ನು ಕಣ್ತುಂಬಿಕೊಂಡರು. 200ಕ್ಕೂ ಹೆಚ್ಚು ಸೀಟ್‌ಗಳನ್ನು ಹೊಂದಿರುವ ಭೂಮಿಗೀತ ವೇದಿಕೆ ಭರ್ತಿಯಾಗಿತ್ತು.

ಟಿಕೆಟ್ ಸಿಗದೆ ನಿರಾಸೆ: ಟಿಕೆಟ್ ಸಿಗಬಹುದೆಂದು ಬಂದೆವು. ಆದರೆ ಈಗಾಗಲೇ ಎಲ್ಲಾ ಟಿಕೆಟ್ ಮಾರಾಟವಾಗಿವೆ ಎಂದು ಹೇಳುತ್ತಿದ್ದಾರೆ. ನಮಗೆ ಗೊತ್ತೇ ಆಗಲಿಲ್ಲ ಎಂದು ಹಲವರು ಬೇಸರದಿಂದಲೇ ವಾಪಸ್ಸಾದರು.

ಸರ್ಕಾರ ಬೆಂಬಲಕ್ಕೆ ನಿಲ್ಲಬೇಕು: ನಾಟಕ ಮುಕ್ತಾಯದ ಬಳಿಕ ಕಲಾವಿದರನ್ನು ಪರಿಚಯ ಮಾಡಿಕೊಟ್ಟ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿ, 'ಟಿಪ್ಪು ನಿಜಕನಸುಗಳು' ನಾಟಕವನ್ನು ತುಂಬಾ ಶ್ರಮಪಟ್ಟು ಕಟ್ಟಿದ್ದೇವೆ. ಸತ್ಯದ ಅನಾವರಣ ಮಾಡಿದ್ದು, ಎಷ್ಟು ವರ್ಷವೆಂದು ಸುಳ್ಳು ಚರಿತ್ರೆಯನ್ನೇ ಕೇಳುವುದು. ಅದಕ್ಕೊಂದು ಪೂರ್ಣ ವಿರಾಮ ಹಾಕಬೇಕಿದೆ ಎಂದ ಅವರು, ಕಲಾವಿದರಿಗೆ ಮೊದಲು ಇತಿಹಾಸದ ಪರಿಚಯ ಮಾಡಿಕೊಟ್ಟ ನಂತರ ಪಾತ್ರಗಳನ್ನು ನೀಡಲಾಯಿತು. ರಾಜ್ಯದಾದ್ಯಂತ 100 ಪ್ರದರ್ಶನ ನೀಡಲು ನಾವು ಸಿದ್ಧರಿದ್ದು, ಸರ್ಕಾರ ಇದಕ್ಕೆ ಬೆಂಬಲ ನೀಡಬೇಕು ಎಂದರು.

ಪ್ರೇಕ್ಷಕರ ಸ್ಪಂದನೆ ಅಭೂತಪೂರ್ವವಾಗಿತ್ತು...



'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ ವೀಕ್ಷಿಸಿದ ಪ್ರೇಕ್ಷಕರ ಸ್ಪಂದನೆ ಅಭೂತಪೂರ್ವವಾಗಿತ್ತು ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹರ್ಷವ್ಯಕ್ತಪಡಿಸಿದರು. ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಸೇರಿದಂತೆ ಹಲವಾರು ಗಣ್ಯರು ನಾಟಕ ನೋಡಿದ್ದು, ಮೊದಲ ಪ್ರದರ್ಶನ ಅದ್ಭುತ ಯಶಸ್ಸನ್ನು ಕಂಡಿದೆ. ನಾಟಕದ ಕೊನೆಯಲ್ಲಿ ಪ್ರತಿಯೊಬ್ಬರು ಎದ್ದು ನಿಂತು ಕರತಾಡನದ ಮೂಲಕ ನಮ್ಮನ್ನು ಹುರಿದುಂಬಿಸಿದ್ದಾರೆ. ನಾಟಕ ನೋಡಿದ ಪ್ರತಿಯೊಬ್ಬರು ನಾಟಕ ಚೆನ್ನಾಗಿ ಮೂಡಿಬಂದಿದೆ ಎಂದು ಕೊಂಡಾಡಿದ್ದಾರೆ. ನಾಳೆ(ನ.21)ಯ ಪ್ರದರ್ಶನದ ಎಲ್ಲಾ ಟಿಕೆಟ್‌ಗಳು ಮಾರಾಟವಾಗಿವೆ ಎಂದು ತಿಳಿಸಿದರು.

ಬಿಗಿ ಪೊಲೀಸ್ ಬಂದೋಬಸ್ತ್

'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ಕೆಲವರ ಅಪಸ್ವರವಿದ್ದ ಕಾರಣಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ರಂಗಾಯಣದ ಮುಖ್ಯ ಗೇಟ್ ಮತ್ತು ಭೂಮಿಗೀತದ ಪ್ರವೇಶ ದ್ವಾರದಲ್ಲಿ ನಿಂತಿದ್ದ ಪೊಲೀಸರು, ಪ್ರತಿಯೊಬ್ಬರನ್ನೂ ತಪಾಸಣೆಗೆ ಒಳಪಡಿಸಿ ಒಳಗೆ ಬಿಟ್ಟರು. ಅಲ್ಲದೆ ರಂಗಾಯಣದ ಕುಕ್ಕರಹಳ್ಳಿಕೆರೆ ಮಾರ್ಗದ ಗೇಟ್ ಮತ್ತು ವಿನೋಬಾ ರಸ್ತೆಯ ಕಲಾಮಂದಿರ ದ್ವಾರದಲ್ಲೂ 300ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು. ಹೇಳಿಕೇಳಿ ಇದು ನಾಟಕ. ಇದಕ್ಕೇಕೆ ವಿರೋಧ ವ್ಯಕ್ತಪಡಿಸಬೇಕು. ಇಷ್ಟವಿದ್ದವರು ಬರುತ್ತಾರೆ. ಇದನ್ನು ವಿರೋಧಿಸುವವರಿಗೆ ಬುದ್ಧಿ ಇಲ್ಲ ಅಷ್ಟೇ ಎಂದು ನಾಟಕ ನೋಡಲು ಬಂದ ಕೆಲವರು ಗೊಣಗುತ್ತಿದ್ದರು.

ರಂಗಾಯಣ ಮಾಜಿ ನಿರ್ದೇಶಕ ಬಸವಲಿಂಗಯ್ಯರಿಂದ ನಾಟಕ ವೀಕ್ಷಣೆ

ಮೈಸೂರು, ನ.20(ಎಂಕೆ)– ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ 'ಟಿಪ್ಪು ನಿಜಕನಸುಗಳು' ನಾಟಕ ವೀಕ್ಷಿಸಿದರು. ರಂಗಾಯಣಕ್ಕೆ ಆಗಮಿಸಿದ ಅವರನ್ನು ಗೇಟ್ ಬಳಿಯೇ ತಡೆದು ನಿಲ್ಲಿಸಿದ ಪೊಲೀಸರು, ನಮಗೆ ಕೆಲವರು ಪ್ರತಿಭಟನೆ ನಡೆಸಬಹುದು ಎಂಬ ಮಾಹಿತಿ ಇದೆ ಎಂದರು. ಪೊಲೀಸರ ಮಾತಿನಿಂದ ಸಿಟ್ಟಾದ ಬಸವಲಿಂಗಯ್ಯ, ನಾವು ಪ್ರತಿಭಟನೆ ಮಾಡಲು ಬಂದಿಲ್ಲ. ನಾಟಕ ನೋಡಲು ಬಂದಿದ್ದೇವೆ. ಟಿಕೆಟ್ ಕೂಡ ಖರೀದಿಸಿದ್ದೇವೆ. ನಾವೇನಾದರೂ ಪ್ರತಿಭಟನೆ ಮಾಡುತ್ತೇವೆ ಎಂದು ನಿಮಗೆ ಅನಿಸಿದರೆ, ನಮ್ಮೊಂದಿಗೆ ನಿಮ್ಮ ಸಿಬ್ಬಂದಿಯನ್ನು ಕೂರಿಸಿ. ಪ್ರತಿಭಟನೆ ಮಾಡಿದರೆ ನಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಿ ಎಂದು ರಂಗಾಯಣದ ಒಳಗೆ ಬಿಡುವಂತೆ ಹೇಳಿದರು. ಕೊನೆಗೆ ಪೊಲೀಸರು ಅವಕಾಶ ಮಾಡಿಕೊಟ್ಟರು.

ಗಂಗರು ಅಪ್ಪಟ ಕನ್ನಡ ದೊರೆಗಳಾಗಿದ್ದರು

ಇವರ ಕುರಿತ ದಾಖಲೆ ಸಂಗ್ರಹಿಸಬೇಕಿದೆ:ಸಿಪಿಕೆ



ಮೈಸೂರು, ನ.20(ಎಂಕೆ)– ಸುಮಾರು ಏಳು ಶತಮಾನಗಳ ಕಾಲ ತಲಕಾಡನ್ನಾಳಿದ ಗಂಗರು ಅಪ್ಪಟ ಕನ್ನಡ ದೊರೆಗಳಾಗಿದ್ದು, ಗಂಗರಸರ ಕುರಿತು ಇರುವ ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ನಡೆಯಬೇಕಿದೆ ಎಂದು ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಹೇಳಿದರು.

ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶ್ರೀಪುರುಷ ಸಾಂಸ್ಕೃತಿಕ ಸಮಿತಿಯಿಂದ ಆಯೋಜಿಸಿದ್ದ 3ನೇ ಶ್ರೀಪುರುಷೋತ್ಸವ ಸಮಾರಂಭ ಹಾಗೂ ವೈದ್ಯ ಡಾ.ಬಿ.ಎನ್.ರವೀಶ್ ರಚಿಸಿರುವ 'ಸಾಮ್ರಾಟ್ ಶ್ರೀಪುರುಷ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುಮಾರು ಏಳು ಶತಮಾನಗಳ ಕಾಲ ತಲಕಾಡನ್ನಾಳಿದ ಗಂಗರು ಅಪ್ಪಟ ಕನ್ನಡ ದೊರೆಗಳು. ಗಂಗರ ಆಳ್ವಿಕೆಯಲ್ಲಿ 22 ಜನ ರಾಜರು ಆಳ್ವಿಕೆ ನಡೆಸಿದ್ದು, ಇವರಲ್ಲಿ ಶ್ರೀಪುರುಷ ಅತ್ಯುತ್ತಮ ಆಳ್ವಿಕೆ ನಡೆಸಿ ರಾಜ್ಯ ಸಂಪದ್ಭರಿತವಾಗುವಂತೆ ಮಾಡಿದ್ದ ಎಂದರು.

ಅಪ್ಪಟ ಕನ್ನಡ ದೊರೆಗಳಾಗಿದ್ದ ಗಂಗರ ರಾಜ ದುರ್ವಿನೀತ, ಕಲೆ–ಸಾಹಿತ್ಯಕ್ಕೆ ಒತ್ತು ನೀಡಿದ್ದರು. ಸ್ವತಃ ವಿದ್ವಾಂಸರಾಗಿ ಕೃತಿ ರಚಿಸುವ ಮೂಲಕ ಕನ್ನಡದ ಮೊದಲು ಸಾಹಿತಿಯಾಗಿದ್ದಾರೆ. ಆದರೆ ಅವರ ಕೃತಿಗಳು ಲಭ್ಯವಾಗುತ್ತಿಲ್ಲ. ಆದ್ದರಿಂದ ಗಂಗರ ಆಳ್ವಿಕೆ, ದುರ್ವಿನೀತ ಅವರ ಸಾಹಿತ್ಯದ ಕುರಿತು ಹೆಚ್ಚಿನ ಸಂಶೋಧನೆಗಳು ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರ, ಸಂಘ–ಸಂಸ್ಥೆಗಳು ಒತ್ತು ನೀಡಬೇಕು ಎಂದು ಆಗ್ರಹಿಸಿದರು. ಇಂದು ಆತ್ಮಚರಿತ್ರೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆಯೇ ವಿನಾಃ ಚರಿತ್ರೆ, ಇತಿಹಾಸದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ. ಚರಿತ್ರಾಕಾರರೂ ಕೂಡ ಗಂಗರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸುತ್ತಿಲ್ಲ. ನಾಗರಿಕತೆಗೆ ಹೆಚ್ಚಿನ ಒತ್ತು ನೀಡಿದ್ದ ಗಂಗರ ಆಳ್ವಿಕೆ ಇತರೆ ರಾಜರುಗಳಿಗೆ ಮಾದರಿಯಾಗಿತ್ತು ಎಂದು ಬಣ್ಣಿಸಿದರು.

ಮನುಷ್ಯ ಸಮಾಜಕ್ಕೆ ಕೊಡುಗೆ ನೀಡಬೇಕು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಮನುಷ್ಯನಾಗಿ ಹುಟ್ಟಿದ ಮೇಲೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಿ ತನ್ನ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಬೇಕು. ಸಿನಿಮಾಗಳು ನನ್ನ ಜೀವನದಲ್ಲಿ ಅಪಾರವಾದ ಪರಿಣಾಮ ಬೀರಿವೆ. ಸಿನಿಮಾದಲ್ಲಿರುವ ಉತ್ತಮ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಯಶಸ್ವಿಯಾಗಿದ್ದೇನೆ. ನಾನು ನನ್ನ ಹೆಂಡತಿ ಮಕ್ಕಳು ಚೆನ್ನಾಗಿದ್ದರೆ ಸಾಲದು. ನನ್ನ ಸಮಾಜವೂ ಚೆನ್ನಾಗಿರಬೇಕು ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಬರಬೇಕು ಎಂದರು. 'ಸಾಮ್ರಾಟ್ ಶ್ರೀಪುರುಷ' ಕೃತಿ ಕುರಿತು ಇತಿಹಾಸಕಾರ ಡಾ.ತಲಕಾಡು ಚಿಕ್ಕರಂಗೇಗೌಡ ತಿಳಿಸಿಕೊಟ್ಟರು. ಶ್ರೀಪುರುಷ ಸಾಂಸ್ಕೃತಿಕ ಸಮಿತಿ ಸಂಸ್ಥಾಪಕ ಡಾ.ಬಿ.ಎನ್.ರವೀಶ್, ಸ್ವೀಡನ್‌ನ ಕೆರೋಲಿನ್ಸಿಕ ವಿಶ್ವವಿದ್ಯಾಲಯದ ಡಾ.ಟಾಮ್ ಪಾಲ್ಮಿಸ್ಟರ್‌ನ, ಯುಕೆಯ ಮನೋವೈದ್ಯ ಡಾ.ಪೀಟರ್ ಲೆಪ್ಪಿಂಗ್ ಮತ್ತಿತರರಿದ್ದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ/ವಕ–4/2022–23 ದಿನಾಂಕ 19.11.2022

ಪತ್ರಿಕಾ ಪ್ರಕಟಣೆ

ಮೈಸೂರು ನಗರ ವಿಶ್ವಸ್ಥ ಮಂಡಳಿ ವತಿಯಿಂದ ಶ್ರೀ ಕೆ.ಆರ್. ರಾಧಕೃಷ್ಣ ಶೆಟ್ಟಿ ಮತ್ತು ಪಿ.ಆರ್.ರಂಗ ಸ್ವಾಮಿಶೆಟ್ಟಿರವರಿಗೆ ದೇವರಾಜ ಅರಸ್ ರಸ್ತೆ 3ನೇ ಹಂತದಲ್ಲಿ ಮಳಿಗೆ ಸಂಖ್ಯೆ 52 ಮಳಿಗೆಯು ಜಂಟಿಯಾಗಿ ದಿ.19.07.1976ರಂದು ಮಂಜೂರಾಗಿರುತ್ತದೆ. ಮಳಿಗೆಯನ್ನು ವಿಶ್ವಸ್ಥ ಮಂಡಳಿ ವತಿಯಿಂದ ನಿರ್ಮಿಸಿದ್ದು, ಸ್ವಾಧೀನವನ್ನು ದಿ.06.02.1981ರಂದು ನೀಡಲಾಗಿದೆ. ಮಳಿಗೆ ಬಾಬ್ತು ಪೂರ್ಣ ಹಣ ಸಂದಾಯವಾಗಿರುವ ಬಗ್ಗೆ ಪ್ರಾಧಿಕಾರದಿಂದ ದಿ.31.07.1981ರಂದು ದೃಢೀಕರಣ ಪತ್ರವನ್ನು ನೀಡಲಾಗಿದೆ.

ಮಳಿಗೆ ಸಂಖ್ಯೆ 52ರ ಜಂಟಿ ಮಾಲೀಕರಲ್ಲಿ ಒಬ್ಬರಾದ ಕೆ.ಆರ್.ರಾಧಕೃಷ್ಣಶೆಟ್ಟಿರವರು ದಿ.11.10.1985ರಂದು ನಿಧನ ಹೊಂದಿರುತ್ತಾರೆ. ತದನಂತರ ಲೇಟ್ ಕೆ.ರಾಧಶೆಟ್ಟಿರವರ ಪತ್ನಿ ಹಾಗೂ ಮಕ್ಕಳು ಸೇರಿದಂತೆ ಶ್ರೀ ಪಿ.ಆರ್.ರಂಗಸ್ವಾಮಿ ಶೆಟ್ಟಿ ಇವರುಗಳು ಈ ಎರಡು ಮಳಿಗೆಗೆ ಜಂಟಿಯಾಗಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿ.20.03.2014ರಂದು ಖಾತಾ ನೋಂದಾಯಿಸಿರುತ್ತಾರೆ.

ಪ್ರಾಧಿಕಾರದ ಯೋಜನಾ ಶಾಖೆಯು ಅಧಿಕೃತ ಜ್ಞಾಪನ ಸಂಖ್ಯೆ.ಮೈನಪ್ರಾ/ನಯೋಶಾ/03/2014–15 ಎಲ್.ನಂ 290 ದಿ: 27.05.2014 ಹಾಗು ನಕ್ಷೆ ಅನುಮೋದನೆ ಸಂಖ್ಯೆ ಮೈನಪ್ರಾ/ನಯೀ/ವಿಮಾ/ಒಗೂ/290/ 2014–15. ದಿ.28.05.2014 ರಂತೆ ಮಳಿಗೆ ಸಂಖ್ಯೆ.52, ಅಳತೆ 4.57*9.14 ಮೀ.ಗಳು ಹಾಗೂ ಮಳಿಗೆ ಸಂಖ್ಯೆ 52/1 ಅಳತೆ 4.57*9.14 ಮೀ. ಎಂದು ಉಪ ವಿಭಾಗವಾಗಿರುತ್ತದೆ. ಇದರನ್ವಯ ಮಳಿಗೆ ಸಂಖ್ಯೆ .52 ಅಳತೆ4.57*9.14 ಕ್ಕೆ ಪಿ.ಆರ್.ರಂಗಸ್ವಾಮಿಶೆಟ್ಟಿ ರವರು ಮಾಲೀಕರಾಗಿರುತ್ತಾರೆ ಹಾಗೂ ಮಳಿಗೆ ಸಂಖ್ಯೆ.52/1 ಅಳತೆ 4.57*9.14 ಮೀಟರ್ ಮಳಿಗೆಗೆ ಶ್ರೀ ಕೆ.ಆರ್. ರಾಧಾಕೃಷ್ಣ ಶೆಟ್ಟಿ ರವರು ಮಾಲೀಕರಾಗಿರುತ್ತಾರೆ.

ಪ್ರಸ್ತುತ ಶ್ರೀಪಿ.ಆರ್. ರಂಗಸ್ವಾಮಿ ಶೆಟ್ಟಿರವರು ಮಳಿಗೆ ಸಂಖ್ಯೆ.52 ಅಳತೆ 4.57*9.14ಕ್ಕೆ ಮಾತ್ರ ಪ್ರಾಧಿಕಾರಕ್ಕೆ ಕ್ರಯಪತ್ರ ಕೋರಿರುವುದರಿಂದ ಸದರಿಯವರ ಹೆಸರಿಗೆ ಕ್ರಯಪತ್ರ ನೀಡಲು ಯಾರಿಂದಾದರು ತಕರಾರು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು/ಆಕ್ಷೇಪಣೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು

ಸಹಿ/–ವಿಶೇಷ ತಹಸೀಲ್ದಾರ್,
ವಲಯ ಕಛೇರಿ–4, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

—— ನ್ಯಾಯಸಮ್ಮತ, ಭ್ರಷ್ಟಾಚಾರ ರಹಿತ ಆಡಳಿತ, ವಚನ ಪಾಲನೆಗೆ ——

ಪ್ರತಿಯೊಬ್ಬ ರಾಜಕಾರಣಿ ರಾಮಾಯಣ, ಮಹಾಭಾರತ ಓದಲೇಬೇಕು

● ಮಾಜಿ ಮುಖ್ಯಮಂತ್ರಿ, ಸಾಹಿತಿ ಎಂ.ವೀರಪ್ಪಮೊಯ್ಲಿ ಪ್ರತಿಪಾದನೆ ● 'ಭೀಷ್ಮ' ಮಹಾಕಾದಂಬರಿ ಬಿಡುಗಡೆ ● ರಾಮರಾಜ್ಯ ಸೃಷ್ಟಿಯ ಕನಸು ನನಸಾಗಬೇಕಿದ್ದರೆ ಶಾಲಾ–ಕಾಲೇಜಿನಲ್ಲಿ ಅಳವಡಿಸಬೇಕು



ಮೈಸೂರು, ನ.20(ಎಸ್‌ಪಿಎನ್)–ನ್ಯಾಯ ಸಮ್ಮತ, ಭ್ರಷ್ಟಾಚಾರ ರಹಿತವಾಗಿ, ರಾಜಕಾರಣಿಗಳು ಜನತೆಗೆ ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾದರೆ, ಮಹಾಭಾರತದಲ್ಲಿ ಬರುವ ಭೀಷ್ಮ ವಚನ, ರಾಮಾಯಣದ ಶ್ರೀರಾಮ ವಚನದ ಬಗ್ಗೆ ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿಗಳೂ ಆದ ಮಾಜಿ ಕೇಂದ್ರ ಸಚಿವ ಎಂ.ವೀರಪ್ಪಮೊಯ್ಲಿ ಯುವ ರಾಜಕಾರಣಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಮೈಸೂರು ಬನ್ನೂರು ರಸ್ತೆಯ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಗಳು, ವೆಂಕಟಗಿರಿ ಪ್ರಕಾಶನ ಹಾಗೂ ತಿಪ್ಪೂರು ಮಿತ್ರಕೂಟ ಸಹಯೋಗದೊಂದಿಗೆ ವೆಂಕಟಗಿರಿ ಪ್ರಕಾಶನ ಹೊರತಂದಿರುವ ಹಿರಿಯ ಕಾದಂಬರಿಕಾರ ಶ್ರೀ ಕೃಷ್ಣ ತಿಪ್ಪೂರು ರಚಿತ 1200 ಪುಟಗಳ 'ಭೀಷ್ಮ' ಮಹಾ ಕಾದಂಬರಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಭಾರತೀಯ ಪರಂಪರೆಯಲ್ಲಿ ಬರುವ ನ್ಯಾಯಶಾಸ್ತ್ರ ಇಂದಿಗೂ ಮುಂದಕ್ಕೂ ಪ್ರಸ್ತುತ. ಏಕೆಂದರೆ, ಮಹಾಭಾರತದ ಭೀಷ್ಮಾಚಾರ್ಯರು ತಾವು ಕೊಟ್ಟ ಮಾತಿಗೆ ಒಂದಿಷ್ಟು ಚ್ಯುತಿ ಬಾರದಂತೆ ನಡೆದುಕೊಳ್ಳುತ್ತಾರೆ. ಪ್ರಭು ಶ್ರೀರಾಮರು ತನ್ನ ತಂದೆಗೆ ಕೊಟ್ಟ ಮಾತಿನಂತೆ 14 ವರ್ಷ ವನವಾಸಕ್ಕೆ ತನ್ನ ಪತ್ನಿಯೊಂದಿಗೆ ಹೋಗುತ್ತಾರೆ. ಹೀಗೆ ಇತಿಹಾಸದಲ್ಲಿ ಬರುವ ಅನೇಕ ಮಹನೀಯರು ತಾವು ಕೊಟ್ಟ ವಚನ(ಬೇರೆಯವರು ಕೊಟ್ಟ ಮಾತಿಗೆ)ಕ್ಕೆ ತಮ್ಮ ಜೀವಿತಾವಧಿಯವರೆಗೂ ಬದ್ಧರಾಗಿದ್ದರು ಎಂಬುದಕ್ಕೆ ಈ ಘಟನೆಗಳೇ ಸಾಕ್ಷಿ ಎಂದರು.

ಪಾರದರ್ಶಕತೆ, ಭ್ರಷ್ಟಾಚಾರ ರಹಿತ, ಅಪರಾಧ ರಹಿತ ರಾಮರಾಜ್ಯ ಸೃಷ್ಟಿಸಲು ಶಾಲಾ–ಕಾಲೇಜು ಹಂತದಲ್ಲಿ ತತ್ವಶಾಸ್ತ್ರ ಅಳವಡಿಸಬೇಕು. ಈ ವೇದಿಕೆಯಲ್ಲಿ ಸಾನ್ನಿಧ್ಯ ವಹಿಸಿರುವ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮನಸ್ಸು ಮಾಡಿದರೆ, ತಮ್ಮ ವಿದ್ಯಾಸಂಸ್ಥೆಗಳ ಪ್ರಾಯೋಗಿಕವಾಗಿ ತತ್ವಶಾಸ್ತ್ರ ವಿಷಯ ಅಳವಡಿಸಿ, ವಿದ್ಯಾರ್ಥಿಗಳಲ್ಲಿ ಪರಿವರ್ತನೆಗೆ ನಾಂದಿ ಹಾಡಬಹುದು ಎಂದು ಸುತ್ತೂರು ಶ್ರೀಗಳಲ್ಲಿ ತಮ್ಮ ಭಾಷಣ ಮಧ್ಯೆ ಮನವಿ ಮಾಡಿದರು.

ಪುಟ ಸಂಖ್ಯೆ ನೋಡಿ ಗಾಬರಿಯಾಗಬೇಡಿ: ರಾಮಾಯಣ, ಮಹಾಭಾರತ ಎರಡು ಮಹಾಕಾವ್ಯಗಳು ಭಾರತೀಯ ಪರಂಪರೆಯ ಜೀವನಾಡಿಗಳು. ಅದರಲ್ಲಿ ಬರುವ ಒಂದೊಂದು ಪಾತ್ರವೂ ಇಂದಿನ ಭಾರತೀಯರ ಜೀವನದ ಪಾತ್ರಗಳಾಗಿವೆ. ಹಾಗಾಗಿ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಇಂದಿಗೂ ಪ್ರಸ್ತುತ. ಕಾದಂಬರಿಕಾರ ಶ್ರೀ ಕೃಷ್ಣ ತಿಪ್ಪೂರು ರಚಿತ 'ಭೀಷ್ಮ' ಕಾದಂಬರಿ 1200 ಪುಟಗಳನ್ನೊಳಗೊಂಡಿದೆ. ಇಷ್ಟು ಬೃಹತ್ ಗಾತ್ರದ ಪುಸ್ತಕ ಎಂದು ಹುಬ್ಬೇರಿಸಬೇಡಿ ಎಂದು ಓದುಗರಲ್ಲಿ ವಿಶ್ವಾಸ ಮೂಡಿಸಿದರು.

ನ್ಯಾಯಶಾಸ್ತ್ರ ಕುರಿತಾದ ಪುಸ್ತಕ ಬರೆಯುತ್ತಿದ್ದೇನೆ: ನಾನು ನ್ಯಾಯಶಾಸ್ತ್ರ ಕುರಿತಾದ 7ರಿಂದ 8 ಸಾವಿರ ಪುಟಗಳಿರುವ ಬೃಹತ್ ಗಾತ್ರದ ಪುಸ್ತಕ ಬರೆಯುತ್ತಿದ್ದೇನೆ. ಅದರಲ್ಲಿ ಈಗಾಗಲೇ 3 ಸಾವಿರ ಪುಟಗಳ ಬರವಣಿಗೆ ಮುಗಿದಿದೆ. ಇನ್ನೂ 5 ಸಾವಿರ ಪುಟಗಳ ಬರವಣಿಗೆ ಮುಂದುವರೆದಿದೆ. ಏಕೆಂದರೆ, ನಮ್ಮ ದೇಶದ ತತ್ವಶಾಸ್ತ್ರ, ಜಗತ್ತಿಗೆ ಮಾದರಿ, ಇಲ್ಲಿನ ಜಾತ್ಯತೀತ ಅಂಶಗಳು ಯಾವ ದೇಶದ ನ್ಯಾಯಶಾಸ್ತ್ರದಲ್ಲೂ ಅಳವಡಿಸಿಕೊಂಡಿಲ್ಲ ಎಂದು ತಿಳಿಸಿದರು.

ಇಂದಿನ ವಿದ್ಯಾರ್ಥಿಗಳಿಗೆ ನೈಜ ಇತಿಹಾಸ ತಿಳಿಸಬೇಕು. ಆದರೆ, ರಾಜಕಾರಣಕ್ಕೆ ಅವಸರದ ಇತಿಹಾಸ ತಿಳಿಸುವುದು ಪೂರ್ವಗ್ರಹಪೀಡಿತವಾಗುತ್ತದೆ. ನ್ಯಾಯಶಾಸ್ತ್ರದಲ್ಲಿ ಜಾತ್ಯತೀತತೆ ಹಾಸು ಹೊಕ್ಕಾಗಿದೆ. ಪ್ರಸ್ತುತ ನ್ಯಾಯಶಾಸ್ತ್ರವೂ ಮತೀಯ ಗುಂಪಿನತ್ತ ವಾಲುತ್ತಿರುವಂತೆ ನನಗೆ ಭಾಸವಾಗುತ್ತಿದೆ. ಈಗಲೇ ಸಾರ್ವಜನಿಕರು ಎಚ್ಚೆತ್ತು ಇದನ್ನು ತಡೆಗಟ್ಟಲು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ನಮ್ಮದು ಉತ್ಕೃಷ್ಟ ತತ್ವಶಾಸ್ತ್ರ ಆದಿಕವಿ ಪಂಪ, ರನ್ನ, ಜನ್ನ ಸೇರಿದಂತೆ ಅತೀರಥ ಮಹಾರಥ ಕವಿಗಳು ಕನ್ನಡದ ಸಿದ್ಧಾಂತಗಳನ್ನು ಕಟ್ಟಲು ಆಯಾಯ ಕಾಲ ಘಟ್ಟದಲ್ಲಿ ತಮ್ಮ ಲೇಖನಗಳ ಮೂಲಕ ಪ್ರಯತ್ನಿಸಿದ್ದಾರೆ. ಇದನ್ನು ಭಾರತೀಯರಾದ ನಾವು ಉಳಿಸಿಕೊಳ್ಳಬೇಕು. ಇವೆಲ್ಲ ಮುಂದಿನ ಪೀಳಿಗೆಗೂ ಅವಶ್ಯಕ ಎಂದ ಅವರು, ನ.17ರಂದು ವಿಶ್ವ ತತ್ವಶಾಸ್ತ್ರ ದಿನಾ ಚರಣೆ ಆಚರಿಸಲಾಗುತ್ತದೆ. ಆದರೆ, ನಮ್ಮಲ್ಲಿ ಈ ಆಚರಣೆ ಬಗ್ಗೆ ಸಾಹಿತಿಗಳು ತಲೆಕೆಡಿಸಿಕೊಂಡಿಲ್ಲ. ಹಾಗಾಗಿ ನಾವು–ನೀವು ಎಲ್ಲರೂ ಸೇರಿ ತತ್ವಶಾಸ್ತ್ರ ಉಳಿವಿಗೆ ಪ್ರಯತ್ನಿಸಬೇಕು. ನಮ್ಮ ತತ್ವಶಾಸ್ತ್ರ ತಿಳಿದುಕೊಂಡರೆ ಉತ್ತಮ ನಾಗರಿಕತೆ, ಪ್ರಜಾಪ್ರಭುತ್ವ ಪುನರ್‌ಮನನ, ಜಗತ್ತಿನ ಅನೇಕ ಸಮಸ್ಯೆಗಳ ನಿವಾರಣೆಗೆ ಭಾರತೀಯ ತತ್ವಶಾಸ್ತ್ರದ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದರು.

ಮಾತಿಗೆ ಬದ್ಧರಾಗಿರಬೇಕು: ಈ ಕಾದಂಬರಿಯಲ್ಲಿ ಭೀಷ್ಮಾಚಾರ್ಯರ ಬದುಕಿನ ಸಮಗ್ರ ಚಿತ್ರಣವಿದೆ. ಭೀಷ್ಮನ ಪಾತ್ರ ಮಾನವೀಯತೆಯ ಪ್ರತೀಕ. ಪ್ರತಿಯೊಬ್ಬ ರಾಜಕಾರಣಿಗಳ ಆದರ್ಶ. ಭೀಷ್ಮರು ತಮ್ಮ ಜೀವನದಲ್ಲಿ ಎಂದೂ ಸುಖವನ್ನು ಕಂಡಿಲ್ಲ. ಭೀಷ್ಮರ ಆಂತರಿಕ ಜೀವನ ಇಡೀ ಕಾದಂಬರಿಯನ್ನು ಆವರಿಸಿಕೊಂಡಿದೆ. ಅದಕ್ಕಾಗಿ ಪುಸ್ತಕದ ಗಾತ್ರ, ವಿನ್ಯಾಸ ಹಾಗೂ ಪುಟದ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಓದುಗರು ಕಾದಂಬರಿ ಗಾತ್ರ ನೋಡಿ, ಭಯಪಡಬೇಡಿ. ಭೀಷ್ಮನ ವ್ಯಕ್ತಿತ್ವವೇ ಎತ್ತರದ ವ್ಯಕ್ತಿತ್ವ ಎಂದರಲ್ಲದೆ, ನಾನು ಈ ಪುಸ್ತಕವನ್ನು ಪೂರ್ಣ ಓದಿದ್ದೇನೆ. ಅದಕ್ಕಾಗಿ ಈ ಮಾತು ಹೇಳುತ್ತಿದ್ದೇನೆ ಎಂದರು.

ಭೀಷ್ಮನ ಪಾತ್ರದಲ್ಲಿ ತಾನು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಕ್ಕೆ ಜೀವನ ಪೂರ್ತಿ ಕಷ್ಟ ಪಡಬೇಕಾಯಿತು. ಶ್ರೀ ರಾಮ ತಾನು ಕೊಟ್ಟ ಮಾತಿಗೆ ಬದ್ಧನಾಗಿ ವನವಾಸಕ್ಕೆ ಹೊರಟ. ಅದಕ್ಕಾಗಿ ರಾಮಾಯಣ, ಮಹಾಭಾರತ ಕಾವ್ಯಗಳೂ ಇಂದಿನ ಪೀಳಿಗೆಗೆ ಆದರ್ಶ ಎಂದರಲ್ಲದೆ, ಕುವೆಂಪು ತಮ್ಮ ಜಾತ್ಯತೀತ ಸಿದ್ಧಾಂತದ ಮೂಲಕ ವಿಶ್ವಸಂದೇಶ ನೀಡಿದರು, ಈ ನಿಲುವನ್ನು ಪಂಪನಲ್ಲೂ ಕಾಣಬಹುದು. ಈ ಮೊದಲು ಮಾತನಾಡಿದ ಸಾಹಿತಿ ಪ್ರೊ.ನೀ.ಗಿರಿಗೌಡ, ಡಾ.ಎಂ. ನೀಲಗಿರಿ ತಳವಾರ, ಪ್ರೊ.ಪದ್ಮಶೇಖರ್ ತಮ್ಮ ಮಾತಿನಲ್ಲಿ ತಿಳಿಸಿಕೊಟ್ಟಿದ್ದಾರೆ ಎಂದು ಹೇಳಿದರು.

136ನೇ ಸ್ಥಾನ: ವಿಶ್ವ ಮಾನವೀಯತೆ ಅಳವಡಿಸಿಕೊಂಡ ದೇಶಗಳ ಪಟ್ಟಿಯಲ್ಲಿ ಭಾರತ 136ನೇ ಸ್ಥಾನದಲ್ಲಿದೆ. ಅಫ್ಘಾನಿಸ್ತಾನ 146ನೇ ಸ್ಥಾನದಲ್ಲಿದೆ. ಇದರ ಬಗ್ಗೆ ನಮ್ಮ ಸಾಹಿತಿಗಳು, ಪ್ರಗತಿಪರ ಚಿಂತಕರು ಯಾವುದರ ಬಗ್ಗೆಯೂ ಮಾತನಾಡುತ್ತಿಲ್ಲ. ಜಗತ್ತಿಗೆ ತತ್ವಶಾಸ್ತ್ರ ನೀಡಿದ ದೇಶದಲ್ಲಿ ಈ ಪರಿಸ್ಥಿತಿಯಿದೆ. ಇದರ ಬಗ್ಗೆ ಎಲ್ಲರೂ ಚಿಂತಿಸಬೇಕು ಎಂದರು. ವೇದಿಕೆಯಲ್ಲಿ ಮಾಜಿ ಶಾಸಕ ವಾಸು, ಸಾಹಿತಿ ಶ್ರೀ ಕೃಷ್ಣ ತಿಪ್ಪೂರು, ಡಾ.ಗೋವಿಂದಶೆಟ್ಟಿ, ಅಖಿಲ ಕರ್ನಾಟಕ ಲೇಖಕರು ಹಾಗೂ ಪ್ರಕಾಶಕರ ಸಂಘದ ಅಧ್ಯಕ್ಷ ಡಿ.ಎನ್.ಲೋಕಪ್ಪ ಸೇರಿದಂತೆ ಇತರರಿದ್ದರು.

ಬೆಂಗಾಲಿ ನಟಿ ಐಂದ್ರಿಲಾ ಶರ್ಮಾ ಬ್ರೈನ್ ಸ್ಟ್ರೋಕ್‌ನಿಂದ ಸಾವು

ಕೋಲ್ಕತ್ತಾ: ಕ್ಯಾನ್ಸರ್ ಗೆದ್ದಿದ್ದ ಬೆಂಗಾಲಿ ನಟಿ ಐಂದ್ರಿಲಾ ಶರ್ಮಾ ಅವರು ಬ್ರೈನ್ ಸ್ಟ್ರೋಕ್‌ನಿಂದ ಭಾನುವಾರ ನಿಧನರಾಗಿದ್ದಾರೆ ಎಂದು ಅವರ ಕುಟುಂಬ ತಿಳಿಸಿದೆ.



ಐಂದ್ರಿಲಾ ಶರ್ಮಾ ಅವರಿಗೆ ನವೆಂಬರ್ 1 ರಂದು ಬ್ರೈನ್ ಸ್ಟ್ರೋಕ್ ಆಗಿದ್ದು, ಹೌರಾದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂದಿನಿಂದ ಜೀವನ್ಮರಣದ ಹೋರಾಟ ನಡೆಸುತ್ತಿದ್ದ 24 ವರ್ಷದ ನಟಿ, ಇಂದು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಮುರ್ಷಿದಾಬಾದ್ ಜಿಲ್ಲೆಯ ಐಂದ್ರಿಲಾ ಶರ್ಮಾ ಅವರು ಬಂಗಾಳಿಯ 'ಜಿಯೋನ್ ಕಥಿ', 'ಜುಮುರ್' ಮತ್ತು 'ಜಿಬಾನ್ ಜ್ಯೋತಿ' ಯಂತಹ ಧಾರಾವಾಹಿಗಳಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದರು. ಎರಡು ಬಾರಿ ಕ್ಯಾನ್ಸರ್‌ನಿಂದ ಬದುಕುಳಿದಿದ್ದ ಐಂದ್ರಿಲಾ ಶರ್ಮಾ ಅವರು, ಕಷ್ಟಕರವಾದ ಶಸ್ತ್ರಚಿಕಿತ್ಸೆ ಮತ್ತು ಹಲವಾರು ರೌಂಡ್ ಕೀಮೋಥೆರಪಿಗೆ ಒಳಗಾಗಿದ್ದರು. ನಂತರ ಅವರು ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾಗಿದ್ದಾರೆ ಎಂದು ವೈದ್ಯರು ಸ್ಪಷ್ಟಪಡಿಸಿದ್ದರು. ಕ್ಯಾನ್ಸರ್‌ನಿಂದ ಚೇತರಿಸಿಕೊಂಡ ನಂತರ, ಐಂದ್ರಿಲಾ ತನ್ನ ಕೆಲಸವನ್ನು ಪುನರಾರಂಭಿಸಿದರು ಮತ್ತು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಹಸಿರು ನಮ್ಮ ಉಸಿರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



ನಕ್ಕರೆ ಅದೇ ಸ್ವರ್ಗ

ಹಿತೈಷಿ : ನೀವು ಬರೆದ ಗ್ರಂಥವನ್ನು ನಿಮ್ಮ ಹೆಂಡತಿಗೆ ಸಮರ್ಪಣೆ ಮಾಡಿದ್ದೀರಿ, ವಿಶೇಷ ಏನು?"

ಅವರು : ಯಾಕೆಂದರೆ ಅವಳು ವರ್ಷಕ್ಕೆ ಒಂಭತ್ತೂ ತಿಂಗಳು ತವರು ಮನೆಗೆ ಹೋಗದಿದ್ದರೆ ಈ ಪುಸ್ತಕ ಬರೆಯಲು ಸಾಧ್ಯವಾಗುತ್ತಿರಲಿಲ್ಲ.

ಮೈಸೂರು ಮಿತ್ರ

ಸೋಮವಾರ, 21 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಉಪಾಯದಿಂದ ಕೆಲಸಗಳನ್ನು ಮಾಡಿದರೆ ಕಠಿಣವಾದ ಕೆಲಸಗಳೂ ಸುಲಭವಾಗುತ್ತವೆ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಂದೂ ಇಲ್ಲದೋನು ಎಲೆ ತ್ವಾಟ ಮಾಡಿ ಒಂದೂ ಇಲ್ಲದಂಗೆ ಚಿಗುಟಿಕೊಂಡ

ನಿಮ್ಮ ಪತ್ರಗಳು

ಮೈಸೂರಿನ ಕ್ಯಾನ್ಸರ್ ರೋಗಿಗಳಿಗೆ ದ್ರೋಹ ಬಗೆದ ರಾಜ್ಯ ಸರಕಾರ

ಮಾನ್ಯರೆ,

ಬಲಪಂಥೀಯ ನಾಯಕರ ಅತೀ ದೊಡ್ಡ ಸಮಸ್ಯೆ ಅವರ ಜಾಣ, ಮರೆಗುಳಿತನ. ಜನರ ಪಾಲಿಗೆ ಅದು ಶಾಪ. ಆದರೆ ಅವರ ಪಾಲಿಗೆ ಅದೇ ಅತೀ ದೊಡ್ಡ ಅಸ್ತ್ರ.

ಸಂಸದ ಪ್ರತಾಪ್ ಸಿಂಹ ಅವರು ಸಾಮಾಜಿಕ ಮಾಧ್ಯಮಗಳಲ್ಲಿ ರಾಜ್ಯ ಸರ್ಕಾರ ಮೈಸೂರಿನ ಕ್ಯಾನ್ಸರ್ ಆಸ್ಪತ್ರೆಗೆ ದಡದಕಲ್ಲಹಳ್ಳಿ ಬಳಿ 18 ಎಕರೆ ಜಮೀನನ್ನು ಮಂಜೂರು ಮಾಡಿದೆ ಎನ್ನುವ ಬ್ರೇಕಿಂಗ್ ನ್ಯೂಸ್ ನೀಡಿದರು. ಅದಕ್ಕೆ ತಾವೇ ಕಾರಣ ಎನ್ನುವುದನ್ನು ಕೂಡ ಸೂಚ್ಯವಾಗಿ ಘೋಷಿಸಿಕೊಂಡರು.

ದುರಂತವೆಂದರೆ, ಈ 18 ಎಕರೆಯ ಕುರಿತಾದ ಸರಕಾರಿ ಆದೇಶವನ್ನು ಸ್ವತಃ ಪ್ರತಾಪ ಸಿಂಹ ಅಥವಾ ಅವರ ಬೆಂಬಲಿಗರು ಸರಿಯಾಗಿ ಓದಿಕೊಂಡಿದ್ದರೆ, ಅವರು ತಮ್ಮದೇ ಪಕ್ಷದ ರಾಜ್ಯ ಸರಕಾರವನ್ನು ನೇರವಾಗಿ ಟೀಕಿಸಬೇಕಿತ್ತು. ಎಕೆಂದರೆ ಸರಕಾರ ನೀಡುತ್ತಿರುವುದು 18 ಎಕರೆ ಗೋಮಾಳ ಜಮೀನನ್ನು. ಆದರೆ ಈ ಉಚಿತ ಆಸ್ಪತ್ರೆ ಆರಂಭಿಸಬೇಕಿದ್ದರೆ ವೈದ್ಯಕೀಯ ಶಿಕ್ಷಣ ಇಲಾಖೆ ಮಾರುಕಟ್ಟೆ ದರದ ಶೇಕಡಾ ಐವತ್ತರಷ್ಟು ಬೆಲೆಯನ್ನು ಸರಕಾರಕ್ಕೆ ಕಟ್ಟಬೇಕಂತೆ.

ಸರಕಾರಿ ಆಸ್ಪತ್ರೆಗೆ ಗೋಮಾಳ ಮಾರುತ್ತಿರುವ ಕುಖ್ಯಾತಿಯ ನಿರ್ಣಯ ಇದು. ಇದನ್ನು ಸಾಧನೆ ಎನ್ನುವವರಿಗೆ ಏನನ್ನಬೇಕು? ಇದು ಕ್ಯಾನ್ಸರ್ ರೋಗಿಗಳಿಗೆ ಮಾಡಿದ ದ್ರೋಹ ಅಲ್ಲವೇ? ಪ್ರತಾಪ ಸಿಂಹ ಅವರು ತಮ್ಮ ಆತ್ಮ ಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಲಿ. ಈಗ ವೈದ್ಯಕೀಯ ಶಿಕ್ಷಣ ಇಲಾಖೆ ಈ ಜಮೀನಿಗೆ ಹಣ ನೀಡಿದರೆ, ಅದರ ಪರಿಣಾಮ ಚಿಕಿತ್ಸಾ ವೆಚ್ಚ ಜಾಸ್ತಿಯಾಗುತ್ತದೆ. ವ್ಯವಸ್ಥೆಗಳು ಕಡಿಮೆಯಾಗುತ್ತವೆ. ಮೊದಲೇ ಆರೋಗ್ಯ ಕ್ಷೇತ್ರಕ್ಕೆ ಸರಕಾರ ನೀಡುತ್ತಿರುವ ಅನುದಾನ ಬಕಾಸುರನ ಹೊಟ್ಟೆಗೆ ಮಜ್ಜಿಗೆಯಂತಿದೆ.

ಪ್ರತಾಪ ಸಿಂಹ ಅವರಿಗೊಂದು ಮನವಿ. ನಿಮ್ಮ ಶ್ರೇಷ್ಠ ಸಾಧನೆ ಎನ್ನುವ ಬೆಂಗಳೂರು–ಮೈಸೂರು ಹೆದ್ದಾರಿಯ ಅವಾಂತರಗಳು ಒಂದೆರಡಲ್ಲ. ವಿಮಾನ ನಿಲ್ದಾಣ, ರೈಲ್ವೆ ಇಲಾಖೆ ಸಾಧನೆಗಳು ನಿಮ್ಮದಲ್ಲ. ಅವೆಲ್ಲ ಯುಪಿಎ ಇದ್ದಾಗ ಆರಂಭವಾದ ಕೆಲಸಗಳು. ದಯವಿಟ್ಟು ಟಿಪ್ಪು ವಿರೋಧಿ ಹೇಳಿಕೆ ಬಿಟ್ಟು ನಿಮ್ಮ ನೈಜ ಸಾಧನೆ ಏನಿದೆ ಎಂಬುದನ್ನು ತಿಳಿಸಿ ಎಂಬುದು ನಮ್ಮೆಲ್ಲರ ಕೋರಿಕೆ

ಟಿಪ್ಪು ಸಾಧನೆ ಏನು ಎಂದು ಮುಕ್ತವಾಗಿ ಪ್ರಶ್ನಿಸುವ ನೀವು ದಯವಿಟ್ಟು, ಟಿಪ್ಪು ಜಾರಿಗೆ ತಂದ ಭೂ ಸುಧಾರಣೆ, ಸಾಮಾಜಿಕ ಸುಧಾರಣೆಗಳನ್ನು ನೀವು ಪತ್ರಕರ್ತರಾಗಿದ್ದೀರಿ ಎಂಬ ಕಾರಣಕ್ಕಾದರೂ ಒಮ್ಮೆ ಓದಿ. ಇಲ್ಲವಾದರೆ ನಿಮಗೆ ಜನಪರ ನೀತಿ ಎಂಬುದನ್ನು ತಿಳಿದುಕೊಳ್ಳಲು ಕಷ್ಟವಾಗಬಹುದು.

– ಸಿಂಚನ ಅಧಿಕಾರಿ, ವಿಜಯನಗರ, ಮೈಸೂರು.

ಕಾರವಾರ, ಮಂಗಳೂರಿಗೆ ರೈಲು ಓಡಿಸಲು ಸಮಸ್ಯೆ ಏನು?

ಮಾನ್ಯರೆ,

ಇತ್ತೀಚೆಗೆ ಕೇಂದ್ರ ಸರಕಾರ ಮೈಸೂರು, ಕಾರವಾರ ಪ್ರಯಾಣಿಕರ ರೈಲಿನ ಬಗ್ಗೆ ತನ್ನ ಪ್ರಕಟಣೆ ಹೊರಡಿಸಿದೆ. ಮೈಸೂರು–ಕಾರವಾರಕ್ಕೆ ಪ್ರಯಾಣಿಕರ ರೈಲನ್ನು ಓಡಿಸಲು ಅನೇಕ ತೊಂದರೆಗಳಿವೆ ಎಂದು ಅದರಲ್ಲಿ ತಿಳಿಸಿದೆ. ಆದರೆ ಬೆಂಗಳೂರಿನಿಂದ ಅನೇಕ ರೈಲುಗಳು ಮಂಗಳೂರಿಗೆ ಪ್ರತಿದಿನ ಓಡಾಡುತ್ತಿವೆ. ಮೈಸೂರಿನಲ್ಲಿ ಆ ಭಾಗದ ಸುಮಾರು 1.5 ಲಕ್ಷ ಜನರಿದ್ದಾರೆ. ಇವರೆಲ್ಲರೂ ತಮ್ಮ ಊರಿಗೆ ಹೋಗಲು ಬಸ್ಸನ್ನೇ ಅವಲಂಭಿಸಬೇಕಿವೆ. ಆದರೆ ರೈಲ್ವೆ ಇಲಾಖೆ ಮೈಸೂರಿನಿಂದ ಕಾರವಾರಕ್ಕೆ ಪ್ರಯಾಣಿಕರ ರೈಲನ್ನು ಓಡಿಸಲು ನಾನಾ ನೆಪ ಹೇಳುತ್ತಿದೆ ಮೈಸೂರಿನಿಂದ ಉತ್ತರ ಭಾರತಕ್ಕೆ ಅನೇಕ ರೈಲುಗಳು ಓಡುತ್ತಿವೆ. ಆದರೆ ಕರ್ನಾಟಕದ ಮಂಗಳೂರು, ಕಾರವಾರಕ್ಕೆ ರೈಲು ಓಡಿಸುವಲ್ಲಿ ಉದಾಸೀನ ಮಾಡುತ್ತಿದೆ. ಮೈಸೂರಿನಿಂದ ಚೆನ್ನೈ ನಗರಕ್ಕೆ ಶತಾಬ್ಧಿ ರೈಲು ಇದ್ದರೂ, ಅದೇ ಸಮಯದಲ್ಲಿ ವಂದೇ ಭಾರತ್ ಹೈಸ್ಪೀಡ್ ರೈಲನ್ನು ಓಡಿಸುತ್ತಿದೆ.

ಮೈಸೂರು, ಮಂಡ್ಯ, ಕೆ.ಆರ್.ನಗರ, ನಂಜನಗೂಡು ಇನ್ನಿತರ ಊರುಗಳಿಂದ ಸಾವಿರಾರು ಪ್ರಯಾಣಿಕರು ಧರ್ಮಸ್ಥಳ, ಸುಬ್ರಮಣ್ಯ ಹಾಗೂ ಉಡುಪಿ ದೇವಾಲಯಗಳಿಗೆ ಹೋಗುವವರಿದ್ದಾರೆ. ಈಗ ಒಂದು ಪ್ರಯಾಣಿಕರ ರೈಲು ರಾತ್ರಿ 11.30ಕ್ಕೆ ಮೈಸೂರಿಗೆ ಬಂದು ಮುಂಜಾನೆ 8.30ಕ್ಕೆ ಮಂಗಳೂರನ್ನು ತಲುಪುತ್ತಿದೆ. ಇದರಿಂದ ಮೈಸೂರಿನ ಜನತೆಗೆ ಯಾವುದೇ ಪ್ರಯೋಜನವಿಲ್ಲ. ಬೆಂಗಳೂರಿನಿಂದ ಹೊರಡುವಾಗಲೇ ರೈಲು ಭರ್ತಿಯಾಗಿರುತ್ತದೆ. ಮೈಸೂರಿನ ಪ್ರಯಾಣಿಕರಿಗೆ ಜಾಗ ಸಿಗುತ್ತಿಲ್ಲ. ಮೈಸೂರಿನಲ್ಲಿ ಸುಮಾರು 13 ವಿವಿಧ ಒಕ್ಕೂಟಗಳು ಕೆಲಸ ಮಾಡುತ್ತಿವೆ. ಇವೆಲ್ಲವೂ ಈ ಮೂರು ಜಿಲ್ಲೆಗಳಿಂದ ಬಂದ ಜನರಿಂದ ಕೂಡಿವೆ. ಸುಮಾರು 3 ವರ್ಷಗಳಿಂದ ಮೈಸೂರು–ಕಾರವಾರಕ್ಕೆ ರೈಲು ಬೇಕೆಂಬ ಬೇಡಿಕೆಯನ್ನು ನೀಡುತ್ತಾ ಬಂದಿದ್ದೇವೆ. ಮೈಸೂರು, ಮಂಗಳೂರು ಹಾಗೂ ಉಡುಪಿ ಸಂಸದರು ಇದಕ್ಕೆ ಸರಿಯಾಗಿ ಸ್ಪಂದಿಸುತ್ತಿಲ್ಲ. ನಮ್ಮ ಈ ಮನವಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಹಕಾರ ನೀಡಿ, ಬೇಡಿಕೆಯನ್ನು ಈಡೇರಿಸುವಂತೆ ಮತ್ತೊಮ್ಮೆ ಮನವಿ ಮಾಡುತ್ತೇವೆ.

– ಕರಾವಳಿ ಭಾಗದ 13 ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮೈಸೂರು.

ಮೈಸೂರಿನ ಸೌಂದರ್ಯ ಉಳಿಸೋಣ



ಮಾನ್ಯರೆ,

ವಿಶ್ವವಿಖ್ಯಾತ ಮೈಸೂರು ಅರಮನೆಯ ಉತ್ತರ ದಿಕ್ಕಿನ ಜಯರಾಮ ದ್ವಾರದ ಕೋಟೆ ಆಂಜನೇಯ ದೇವಸ್ಥಾನ ಮುಂಭಾಗದ ಎರಡೂ ಕಡೆಯ ಪಾದಚಾರಿ ಮಾರ್ಗಗಳನ್ನು ರಾಜಪಥ ರಸ್ತೆ ನಿರ್ಮಿಸುವಾಗ ವಿಶೇಷ ವಿನ್ಯಾಸವೆಂದು ಪರಿಗಣಿಸಿ (ಯಾವ ಆರ್ಕಿಟೆಕ್ಟ್ ಸಲಹೆ ನೀಡಿದರೋ?) ಅಭಿವೃದ್ಧಿಗೊಳಿಸಲಾಗಿದೆ. ಕಲ್ಲುಕಂಬಗಳಿಂದ ನಿರ್ಮಿಸಿದ ರೈಲಿಂಗ್ಸ್ ರಸ್ತೆ ಉದ್ದಕ್ಕೂ ಅಲ್ಲಲ್ಲಿ ತುಂಡಾಗಿ ಬಿದ್ದು, ವಿಕಾರವಾಗಿ ಕಾಣುತ್ತಿದೆ. ಮುಖ್ಯವಾಗಿ ಅರಮನೆಯ ಜಯರಾಮ ದ್ವಾರದ ಬಳಿ ಬಹಳಷ್ಟು ಕಂಬಗಳು ಬಿದ್ದುಹೋಗಿವೆ.

ಇಂಡೋ–ಸಾರ್ಸೆನಿಕ್ ವಾಸ್ತು ಶೈಲಿಯಂತೆ 1912 ರಲ್ಲಿ ಅದ್ಭುತವಾಗಿ ಮೈಸೂರು ಅರಸರು ಕಟ್ಟಿಸಿದ ಸುಂದರವಾದ ಅರಮನೆಯನ್ನು ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರು ವೀಕ್ಷಿಸಿ ರಾಜಪಥದ ರೈಲಿಂಗ್ಸ್ ನೋಡಿದವರು ಏನಂದುಕೊಂಡಾರು? ಎಂಬ ಪರಿಜ್ಞಾನ ಮಹಾನಗರ ಪಾಲಿಕೆಗೆ ಇದ್ದಂತಿಲ್ಲ!. ಎಂದೋ ನಿರ್ಮಿಸಿದ ಅರಮನೆ ಹಾಗೂ ಸುತ್ತಲಿನ ಕಾಂಪೌಂಡ್ ಇಂದಿಗೂ ಮನಮೋಹಕವಾಗಿರಬೇಕಾದರೆ ಇತ್ತೀಚಿನ ರಾಜಪಥದ ಕಾಮಗಾರಿಯ ಪಾದಚಾರಿ ಮಾರ್ಗದ ಅವಸ್ಥೆ ಹೀಗೇಕಾಯ್ತು?, ವಿಕಾರವಾಗಿರುವ ಕಲ್ಲುಕಂಬಗಳ ರೈಲಿಂಗ್ಸ್‌ನ್ನು ದುರಸ್ಥಿಪಡಿಸಿ ಇಲ್ಲವೆ ಸಂಪೂರ್ಣವಾಗಿ ತೆರವುಗೊಳಿಸಿ, ಸಾಂಸ್ಕೃತಿಕ ನಗರಿಯ ಸೌಂದರ್ಯವನ್ನು ಹೆಚ್ಚಿಸಲು ನಮ್ಮಿಂದ ಆಗದಿದ್ದರೂ ಮಹಾರಾಜರು ಬಿಟ್ಟುಹೋಗಿರುವ ಸುಂದರ ಮೈಸೂರು ಬ್ರಾಂಡ್ ಉಳಿಸಿಕೊಳ್ಳೋಣ.

– ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಕ್ಷಮಿಸಿರಿ, ಆ ಕ್ಷಣ ಮರೆಯಿರಿ!!

ನಮ್ಮ ಜೀವನವನ್ನು ಸುಲಲಿತ ಮಾಡಿಕೊಳ್ಳುವುದು, ದುಃಖಕ್ಕೆ ಒಳಪಡಿಸಿಕೊಳ್ಳುವುದು, ದುರಂತ ಮಾಡಿಕೊಳ್ಳುವುದು, ಒಟ್ಟಾರೆ ನಿರ್ಧರಿಸುವುದು. ನಮಗೇ ಸೇರಿದ ವಿಷಯಗಳಾಗಿವೆ. ನಾವು ಹೇಗೆ ಬದುಕಬೇಕು ಎಂಬುದನ್ನು ನಾವೇ ನಿರ್ಧರಿಸಿಕೊಳ್ಳಬೇಕು. ಇಂದು ನಮಗೆಲ್ಲಾ ತಿಳಿದಿದೆ. ಅತಿಯಾದ ಉದ್ವೇಗ ಅಥವಾ ಸಿಟ್ಟು–ಸಿಡುಕು ನಮ್ಮನ್ನು ಸಾಕಷ್ಟು ತೊಂದರೆಗಳಿಗೀಡು ಮಾಡುತ್ತದೆ. ಉದ್ವೇಗ ಮಾಡಿಕೊಳ್ಳುವವರೂ ನಾವೇ, ತೊಂದರೆಗೆ ಸಿಲುಕಿಕೊಳ್ಳುವವರೂ ನಾವೇ. ಈ ರೀತಿ ಉದ್ವೇಗಕ್ಕೆ ಒಳಗಾದವರು ಕೆಲವೊಮ್ಮೆ ಆತ್ಮಹತ್ಯೆ ಯಂತಹ ಹೇಯ ಕೃತ್ಯಕ್ಕೂ ಇಳಿಯುತ್ತಾರೆ ಎಂಬುದು ನಮಗೆ ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ಗಮನಿಸಿದಾಗ ತಿಳಿಯುತ್ತದೆ.



ಹಾಗಿದ್ದರೆ ನಾವು ಹೇಗೆ ಇರಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವೂ ನಮಗೆ ಗೊತ್ತು. ಆದಷ್ಟೂ ಸಾತ್ವಿಕವಾದ ಹಾಗೂ ಪರೋಪಕಾರಿ ಮನೋಭಾವದ ಜೀವನ ನಡೆಸುವುದು ಅಗತ್ಯ ಎಂಬುದು ನಮ್ಮ ಅರಿವಿಗೆ ಬಂದಿರುತ್ತದೆ. ನಮ್ಮಲ್ಲಿರುವ ಮನುಷ್ಯತ್ವಕ್ಕೆ ನಾವು ಬೆಲೆ ಕೊಡಬೇಕು. ಎಲ್ಲರೂ ತಪ್ಪು ಮಾಡುತ್ತಾರೆ. ಆದರೆ ಎಷ್ಟು ಜನ ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಾರೆ? ತಾನು ಮಾಡಿದ್ದು ತಪ್ಪು ಎಂದು ಗೊತ್ತಾದ ಮೇಲೂ ಅದನ್ನು ಒಪ್ಪಿಕೊಳ್ಳದೇ ಸಮರ್ಥಿಸಿ ಕೊಳ್ಳುವುದು ಮೇಲು ನೋಟಕ್ಕೂ ಸರಿ ಎಂದು ಕಂಡುಬರುವುದಿಲ್ಲ. ಇನ್ನು ನಮ್ಮ ಮನಸ್ಸಿಗಂತೂ ಅದು ಒಪ್ಪಿಗೆಯಾಗುವುದೇ ಇಲ್ಲ. ತಪ್ಪು ಮಾಡುವುದು ಸಹಜ, ಅದನ್ನು ತಿದ್ದಿಕೊಂಡು ನಡೆಯುವುದು ಬುದ್ಧಿವಂತಿಕೆ ಎಂದು ಹೇಳಲಾಗುತ್ತದೆ. ತಪ್ಪನ್ನು ಒಪ್ಪಿಕೊಳ್ಳುವುದನ್ನೂ ದೊಡ್ಡಗುಣ ಎಂದೇ ಭಾವಿಸಲಾಗುತ್ತದೆ. ತಪ್ಪು ಎಂಬುದು ನಮಗೇ ಮನವರಿಕೆಯಾದ ನಂತರ ಅದನ್ನು ಸಮರ್ಥಿಸಿಕೊಳ್ಳಬಾರದು. ಅದು ಹಿರಿಯರಿರಲಿ, ಕಿರಿಯರಿ ರಲಿ ತಪ್ಪು ಎಂದಾದಾಗ ಅದು ತಪ್ಪೇ. ದೊಡ್ಡವರು ತಪ್ಪು ಮಾಡುವು ದಿಲ್ಲ ಎಂದಲ್ಲ, ಆದರೆ ಅದನ್ನು ಒಪ್ಪಿಕೊಂಡಾಗ ಅವರು ಸಣ್ಣವರಾಗುವ ಬದಲು ದೊಡ್ಡವರೆನಿಸಿಕೊಳ್ಳುತ್ತಾರೆ. ತಪ್ಪಿಗೆ ಸಣ್ಣದು ದೊಡ್ಡದು ಎಂಬುದಿಲ್ಲ.

ತಪ್ಪನ್ನು ಒಪ್ಪಿಕೊಳ್ಳುವುದು ಎಂದರೇನು? ಮೊದಲನೆಯದಾಗಿ ತನ್ನ ತಪ್ಪಿನಿಂದ ಯಾರಿಗೆ ತೊಂದರೆಯಾಗಿದೆಯೋ ಅವರಲ್ಲಿ ಕ್ಷಮೆ ಯಾಚಿಸುವುದು ಸೂಕ್ತ. ಅವರು ನಮಗಿಂತ ಕಿರಿಯರೇ ಇರಬಹುದು. ಆದರೂ ಕ್ಷಮೆ ಕೇಳುವುದು ವಿಹಿತ. ಹಾಗೆ ಮಾಡಿದಾಗ ನಮ್ಮಿಂದ ತೊಂದರೆಯಾಗಿದ್ದನ್ನು ಸರಿಪಡಿಸಬಹುದು. ಕ್ಷಮೆ ಎಂದರೆ ಕಾಲುಮುಟ್ಟಿ ನಮಸ್ಕರಿಸುವುದು ಎಂದಲ್ಲ. ಬದಲಿಗೆ ತಪ್ಪನ್ನು ಅರುಹಿ ಸರಿಪಡಿಸಿಕೊಳ್ಳುವುದು.

ನಾವು ಮಾಡಿಕೊಳ್ಳುವ ಸಿಟ್ಟು ಹಾಗೂ ಇತರೆ ಚಟುವಟಿಕೆಗಳು ನಮ್ಮ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಒಂದು ವೈದ್ಯ ವರದಿಯ ಪ್ರಕಾರ ನಾವು ಹೆಚ್ಚು ಸಿಟ್ಟು ಮಾಡಿಕೊಂಡಾಗ ನಮ್ಮ ಲಿವರ್ ಹಾಳಾಗುತ್ತದೆ. ಹೆಚ್ಚು ದುಃಖದಿಂದ ಶ್ವಾಸಕೋಶ ದುರ್ಬಲವಾಗುತ್ತದೆ. ಹೆಚ್ಚು ಚಿಂತೆಗಳಿಂದ ಹೊಟ್ಟೆ ದುರ್ಬಲವಾಗುತ್ತದೆ, ಒತ್ತಡಗಳಿಂದ ಹೃದಯ ಹಾಗೂ ಮೆದುಳು ದುರ್ಬಲವಾಗುತ್ತದೆ. ಹೆದರಿಕೆಯಿಂದ ಕಿಡ್ನಿ ಹಾಳಾದರೆ, ಪ್ರೀತಿಯ ಭಾವನೆಯಿಂದ ಶಾಂತಿ ಹಾಗೂ ಬಾಂಧವ್ಯ ವೃದ್ಧಿಸುತ್ತದೆ ಹಾಗೂ ಅದು ನಮ್ಮ ಶರೀರ ಹಾಗೂ ಮನಸ್ಸನ್ನು ಬಲಿಷ್ಠಗೊಳಿಸುತ್ತದೆ. ನಗುವಿನಿಂದ ಒತ್ತಡ ಮಾಯವಾಗುತ್ತದೆ. ಇದು ನಮ್ಮ ಅರಿವಿನಲ್ಲಿರಬೇಕು. ಸಿಟ್ಟು ಮಾಡಿಕೊಳ್ಳುವುದು, ದುಃಖಿಸುವುದು, ಚಿಂತಿಸುವುದು, ಒತ್ತಡ ಅನುಭವಿಸುವುದು ನಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದಾದ ಮೇಲೆ ಆದಷ್ಟೂ ಅದರಿಂದ ಮುಕ್ತರಾಗಲು ಪ್ರಯತ್ನ ಮಾಡಬೇಕು. ಮುಖ್ಯವಾಗಿ ಕ್ಷಮಿಸುವ ಹಾಗೂ ಆದ ಘಟನೆಯನ್ನು ಮರೆಯಲು, ಮರೆಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು.

> ನಾವು ಮಾಡಿಕೊಳ್ಳುವ ಸಿಟ್ಟು ಹಾಗೂ ಇತರೆ ಚಟುವಟಿಕೆಗಳು ನಮ್ಮ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಒಂದು ವೈದ್ಯ ವರದಿಯ ಪ್ರಕಾರ ನಾವು ಹೆಚ್ಚು ಸಿಟ್ಟು ಮಾಡಿಕೊಂಡಾಗ ನಮ್ಮ ಲಿವರ್ ಹಾಳಾಗುತ್ತದೆ. ಹೆಚ್ಚು ದುಃಖದಿಂದ ಶ್ವಾಸಕೋಶ ದುರ್ಬಲ ವಾಗುತ್ತದೆ. ಹೆಚ್ಚು ಚಿಂತೆಗಳಿಂದ ಹೊಟ್ಟೆ ದುರ್ಬಲವಾಗುತ್ತದೆ, ಒತ್ತಡಗಳಿಂದ ಹೃದಯ ಹಾಗೂ ಮೆದುಳು ದುರ್ಬಲವಾಗುತ್ತದೆ. ಹೆದರಿಕೆಯಿಂದ ಕಿಡ್ನಿ ಹಾಳಾದರೆ, ಪ್ರೀತಿಯ ಭಾವನೆಯಿಂದ ಶಾಂತಿ ಹಾಗೂ ಬಾಂಧವ್ಯ ವೃದ್ಧಿಸುತ್ತದೆ ಹಾಗೂ ಅದು ನಮ್ಮ ಶರೀರ ಹಾಗೂ ಮನಸ್ಸನ್ನು ಬಲಿಷ್ಠಗೊಳಿಸುತ್ತದೆ. ನಗುವಿನಿಂದ ಒತ್ತಡ ಮಾಯವಾಗುತ್ತದೆ.

ಇಂತಹ ಪ್ರಯತ್ನವನ್ನು ಮಾನವೀಯತೆ ಎಂದು ಪರಿಗಣಿಸಲಾಗುವುದು. ಮನುಷ್ಯ ಹಾಗೂ ಮಾನವೀಯತೆ ಒಂದಕ್ಕೊಂದು ನಿಕಟ ಭಾವದ ಪದಗಳಾಗಿವೆ. ಮಾನವೀಯತೆ ಇಲ್ಲದಾದಾಗ ನಾವು ಹೆಚ್ಚು ತಪ್ಪುಗಳನ್ನು ಮಾಡುತ್ತೇವೆ. ನಾನೇ ಸರಿ, ನಾನು ಮಾಡಿದ್ದೇ ಸರಿ ಎಂಬ ಮನೋಭಾವವೇ ನಮ್ಮಿಂದ ಹೆಚ್ಚು ತಪ್ಪುಗಳನ್ನು ಮಾಡಿಸುತ್ತದೆ. ಮಾನವೀಯತೆ ಹೇಗೆ ಗಮನಸೆಳೆಯುತ್ತದೆ ಎಂಬುದಕ್ಕೆ ಇತ್ತೀಚೆಗೆ ಬೆಳಕಿಗೆ ಬಂದ ಒಂದು ಉದಾಹರಣೆ; ಇದು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ನಡೆದ ಅಪರೂಪದ ಘಟನೆ. ಅಲ್ಲಿನ ಹೂವಿನ ವ್ಯಾಪಾರಿಗಳು ರಾತ್ರಿ ತಮ್ಮ ಅಂಗಡಿಯನ್ನು ಮುಚ್ಚಿ ಹೋಗುವ ಮುಂಚೆ ಸರದಿಯಂತೆ (ದಿನಕ್ಕೊಬ್ಬರಂತೆ) ಎರಡು ಹೂವಿನ ಹಾರಗಳನ್ನು ತಮ್ಮ ಅಂಗಡಿಯ ಬಾಗಿಲು ಮುಚ್ಚುವಾಗ, ಹೊರಗೆ ನೇತುಹಾಕಿ ಹೋಗುತ್ತಾರೆ. ಇದರ ಉದ್ದೇಶ; ರಾತ್ರಿಯ ವೇಳೆ ಯಾರಾದರೂ ನಿಧನರಾದರೆ, ಅಷ್ಟೊತ್ತಿನಲ್ಲಿ ಹೂವಿನ ಹಾರಕ್ಕೆ ಹೋಗುತ್ತಾರೆ?. ಬೆಳಿಗ್ಗೆಯವರೆಗೆ ಕಾಯುವಂತಾಗಬಾರದು. ಇಹಲೋಕದ ಪಯಣ ಮುಗಿಸಿದ ವ್ಯಕ್ತಿಗೆ ಸಲ್ಲಬೇಕಾದ ಅಂತಿಮ ಗೌರವಕ್ಕೆ ಚ್ಯುತಿ ಬಾರದಿರಲಿ ಎಂಬುದು ಇದರ ಹಿಂದಿನ ಸದುದ್ದೇಶ. ಈ ಹಾರ ತೆಗೆದುಕೊಂಡು ಹೋಗಲು ಹಣ ನೀಡಬೇಕೆಂದೇನೂ ಇಲ್ಲ. ಆದರೆ ಜನರು ಅದನ್ನು ತೆಗೆದುಕೊಂಡು ಹೋಗುವಾಗ ಒಂದಷ್ಟು ಹಣ ಇಟ್ಟೇ ಹೋಗುತ್ತಾರೆ. ಈ ಸಮಾಜ ನನ್ನದು ಎಂದುಕೊಂಡಾಗ ಇಂತಹ ಸೇವೆ ಮಾಡುವ ಹಲವಾರು ವಿಧಾನಗಳು ನಮಗೆ ದೊರಕುತ್ತವೆ. ಇಂತಹ ಉನ್ನತ ಮನೋಭಾವ ವನ್ನು ಅಲ್ಲಿ ಹೂವಿನ ವ್ಯಾಪಾರಿಗಳು ಫಲಿಸುತ್ತಾರೆ. ಇಂತಹ ಕಡೆ ಯಾವ ಜಗಳ, ವ್ಯಾಜ್ಯವೂ ಹುಟ್ಟುವುದಿಲ್ಲ. ಇಂತಹುದನ್ನು ಆದರ್ಶ ಎಂದು ಒಪ್ಪಿಕೊಳ್ಳಲೇಬೇಕು. ಅವರು ಹಾಗೆ ಅಂಗಡಿ ಮುಂದೆ ನೇತು ಹಾಕಿ ಹೋಗುವ ಹಾರ ಯಾರ ಶವಕ್ಕೆ ಅರ್ಪಣೆಯಾಗುವುದೋ ಗೊತ್ತಿಲ್ಲ. ಒಂದು ವೇಳೆ ಅದು ಆ ಹೂವಿನ ವ್ಯಾಪಾರಿಗಳು ದ್ವೇಷಿಸುವ ವ್ಯಕ್ತಿಯೂ ಆಗಿದ್ದಿರಬಹುದು. ಆದರೆ ಪ್ರಾಣ ಹೋದ ಮೇಲೆ ಹಗೆತನಕ್ಕೆ ತಾವಿಲ್ಲ ಎಂಬಂತೆ ಅವರ ಮನೋಭಾವ ಇಲ್ಲಿ ವ್ಯಕ್ತವಾಗುತ್ತದೆ. ಇಂತಹ ಹಲವಾರು ಘಟನೆಗಳು ನಮ್ಮ ಸುತ್ತಮುತ್ತಲು ನಡೆಯುತ್ತಿರುತ್ತವೆ. ಅದನ್ನು ಗಮನಿಸಿದಾಗ ನಮಗೆ ಅವು ಮಾರ್ಗದರ್ಶಕವಾಗುತ್ತವೆ.

ನಮಗೆ ಹಣಕ್ಕಿಂತ ಮಾನವೀಯತೆ ಮುಖ್ಯ ಎಂಬುದಕ್ಕೆ ಇಂತಹ ಹಲವಾರು ಪ್ರಸಂಗಗಳು ಕಂಡುಬರುತ್ತವೆ. ಅಲ್ಲೆಲ್ಲಾ ಹಣ ಗೆಲ್ಲುವುದಿಲ್ಲ, ಬದಲಾಗಿ ಗುಣ ಗೆಲ್ಲುತ್ತದೆ. ಹಣದಿಂದ ಗೆಲ್ಲಲಾಗದ್ದನ್ನು ಗುಣ ಗೆಲ್ಲುತ್ತದೆ.

ನಮ್ಮಲ್ಲಿ ಅನೇಕರು ಮನೆ ತೊರೆದು ಹೋಗುವುದನ್ನು ನೋಡುತ್ತೇವೆ. ಅನೇಕ ಸಲ ವ್ಯಕ್ತಿಗಳು ಕಾಣೆಯಾದ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತದೆ. ಅನೇಕರು ಇಂತಹದರ ಬಗ್ಗೆ ಪತ್ರಿಕೆಗಳಲ್ಲಿ ಜಾಹಿರಾತು ಹಾಕಿ, ಹೇಗಾದರೂ ವಾಪಸ್ಸು ಬಂದುಬಿಡು, ನಾವು ನಿನ್ನನ್ನು ಬೈಯ್ಯುವುದಿಲ್ಲ, ನಿನ್ನ ತಪ್ಪುಗಳನ್ನು ಮತ್ತೆ ಎತ್ತಾಡುವುದಿಲ್ಲ, ಹಣ ಬೇಕಿದ್ದರೆ ಕಳುಹಿಸುತ್ತೇವೆ ತಿಳಿಸು ಎಂದು ನಮೂದಿಸುತ್ತಾರೆ. ಇದರ ಹಿನ್ನೆಲೆ ಮನೆಯಲ್ಲಿ ಆದ ಘರ್ಷಣೆ ವ್ಯಕ್ತಿಯನ್ನು ಮನೆಯಿಂದ ಹೊರಹೋಗುವಂತೆ ಮಾಡಿದೆ ಎಂಬುದು. ಇದರಲ್ಲಿ ತಪ್ಪು ಯಾರದ್ದು? ಮನೆಯವರು ಜಾಹಿರಾತಿನಲ್ಲಿ ತಿಳಿಸಿದಂತೆ ಮನೆಯಲ್ಲಿ ಹಣದ ವಿಷಯಕ್ಕೋ, ಮತ್ತಾವುದೋ ವಿಷಯಕ್ಕೋ ಘರ್ಷಣೆಯಾಗಿರಬಹುದು. ದುರ್ಬಲ ಮನದವರು ಅದನ್ನು ಎದುರಿಸಲಾರದೆ ಮನೆ ಬಿಟ್ಟು ಹೋಗಿರುತ್ತಾರೆ. ಆ ವ್ಯಕ್ತಿ ಮನೆ ಬಿಟ್ಟು ಹೋದ ನಂತರ ಅವರಿಗೆ ತಮ್ಮ ತಪ್ಪು ಅರಿವಾಗಿ ಈ ರೀತಿ ಜಾಹಿರಾತಿನಲ್ಲಿ ತಾವು ಬೈಯ್ಯುವುದಿಲ್ಲ ಎಂದೆಲ್ಲಾ ಹಾಕಿ ತಪ್ಪು ಒಪ್ಪಿಕೊಳ್ಳುತ್ತಾರೆ. ಹಾಗೆಂದು ಮನೆ ಬಿಟ್ಟು ಹೋದವನ ರೀತಿ ಸರಿ ಎಂದು ಹೇಳಲಾಗದು. ತಪ್ಪು ಮಾಡಿದ್ದರ ಫಲ ಹಾಗೂ ಅದನ್ನು ಒಪ್ಪಿಕೊಳ್ಳದ ಮನೋಭಾವ ಇದಕ್ಕೆ ಕಾರಣವಾಗಿರುತ್ತದೆ. ಹಾಗಾದರೆ ಇದನ್ನು ಸರಿಪಡಿಸುವುದು ಹೇಗೆ? ಎಂದರೆ ಉತ್ತರ ಬಹಳ ಸರಳ, ಪರಸ್ಪರ ಯಾವುದೇ ನಿಬಂಧನೆಗಳಿಲ್ಲದೆ ಕುಳಿತು ಮಾತನಾಡಿ ಕೊಳ್ಳುವುದು. ಇದಕ್ಕೆ ಯಾರ ಮಧ್ಯಸ್ಥಿಕೆಯ ಅಗತ್ಯವೂ ಇರುವುದಿಲ್ಲ. ಬೇಕಾದದ್ದು ತಪ್ಪು ಮಾಡಿದವರು ಅದನ್ನು ಒಪ್ಪಿಕೊಳ್ಳುವ ಮನಸ್ಸು ಮಾಡಬೇಕಷ್ಟೇ. ಮತ್ತೊಬ್ಬರು ಅದನ್ನು ಕೇಳಿಸಿಕೊಳ್ಳುವ ವ್ಯವಧಾನ ತೋರಿಸಬೇಕು. ಇಂತಹ ಘಟನೆಗಳಿಗೆ ನಮ್ಮ ಸುತ್ತಲಿನ ಕೆಲವು ಕಪಟಿಗಳೇ ಕಾರಣರಾಗಿ ರುತ್ತಾರೆ. ನಮ್ಮನ್ನು ಹೊಗಳುವಂತೆ ನಾಟಕವಾಡಿ ಮನಗಳನ್ನು ಮುರಿಯುವ ಕೆಲಸ ಮಾಡುತ್ತಾರೆ. ದುರ್ಬಲ ಮನಸ್ಸುಗಳು ಇದಕ್ಕೆ ಬಲಿಯಾಗುತ್ತವೆ.

ವೈಮನಸ್ಸಿನ ಮತ್ತೊಂದು ಸಾಮಾನ್ಯ ಘಟನೆ ಹುಡುಗ/ಹುಡುಗಿಯರ ಪ್ರೇಮ ಪ್ರಕರಣಗಳು. ಅದೂ ಅಂತರ್ಜಾತಿ ಪ್ರಕರಣವಾದರೆ ಮತ್ತೂ ತೀವ್ರವಾಗಿರುತ್ತದೆ. ಇದು ಎಂತಹ ತಿರುವು ಪಡೆಯುತ್ತದೆ ಎಂದರೆ ಯುವ ಪ್ರೇಮಿಗಳು ಆತ್ಮಹತ್ಯೆಯಂತಹ ಕಠಿಣ ನಿರ್ಧಾರಕ್ಕೆ ಬರುವಂತಾಗುತ್ತದೆ. ಹಾಗಾದ ನಂತರ ಎರಡೂ ಮನೆಯವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಆದರೆ ಅಷ್ಟರಲ್ಲಿ ಕಾಲಮಿಂಚಿ ಹೋಗಿ ರುತ್ತದೆ. ಅದರ ಬದಲು ಎರಡು ಮನೆಯ ಪೈಕಿ ಒಂದು ಕಡೆಯವರು ಕ್ಷಮಿಸಿ, ತಮ್ಮವರ ಪರ ನಿಂತರೆ ಜೀವಗಳು ಉಳಿಯುತ್ತವೆ. ಇಂತಹ ಮನೋಭಾವ ಬೆಳೆಯಬೇಕು.

ಕ್ಷಮಿಸುವುದನ್ನು ದೈವತ್ವದ ಗುಣ ಎಂದು ಕರೆಯಲಾಗುತ್ತದೆ. ಸ್ನೇಹಿತರ ನಡುವೆ ಹಲವು ದಶಕಗಳ ಸ್ನೇಹ ಯಾವುದೋ ಕ್ಷುಲ್ಲಕ ಘಟನೆಯಿಂದ ಮುರಿಉದ ಬಿದ್ದಿರುತ್ತದೆ. ಹಾಗೆ ನೋಡಿದರೆ ಅದು ದೊಡ್ಡ ಕಾರಣವಾಗದೇ ಇರಬಹುದು. ಕೇವಲ ಸಣ್ಣ ಕಾರಣವಾಗಿರುತ್ತದೆ. ಹಲವು ವರ್ಷಗಳ ಸ್ನೇಹದ ನಡುವೆ ಬಿರುಕು ಮೂಡಿಸಿರುತ್ತದೆ. ಅದನ್ನು ಹೊರತುಪಡಿಸಿದರೆ ಗೆಳೆತನ ಅನನ್ಯವಾದುದು. ಇದನ್ನು ಒಪ್ಪಿ ಕ್ಷಮಿಸುವ ಗುಣ ಸಾದರಪಡಿಸಿದರೆ ಗೆಳೆತನ ಮುಂದುವರೆಯುತ್ತದೆ. ಇಲ್ಲದಿದ್ದರೆ ಗೆಳೆಯರೇ ಶಾಶ್ವತ ಶತ್ರುಗಳಂತಾಗಿ ಬಿಡಬಹುದು.

ನಮ್ಮ ಸಂಬಂಧಗಳಲ್ಲಿ ಕ್ಷಮೆ ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿರುತ್ತದೆ. ಹಾಗೆ ನೋಡಿದರೆ ನಾವ್ಯಾರೂ ಪರಿಪೂರ್ಣರಾಗಿರುವುದಿಲ್ಲ, ಸಕಾರಾತ್ಮಕವಾಗಿ ಇರಬೇಕಾದ ಸಂಬಂಧ ಸಣ್ಣ ಕಾರಣದಿಂದ ನಕಾರಾತ್ಮಕವಾಗಿ ಪರಿವರ್ತನೆಯಾಗಿ ಬಿಡುತ್ತದೆ. ಕ್ಷಮಾಗುಣ ಇಂತಹ ಬಿರುಕು ಸರಿಪಡಿಸಬಲ್ಲದು. ಕೇವಲ ಕ್ಷಮಿಸುವುದಲ್ಲ, ಬದಲಿಗೆ ಕ್ಷಮಿಸಿ ಆ ಘಟನೆಯನ್ನು ಮರೆತುಬಿಡಬೇಕು.

ದಾಂಪತ್ಯದಲ್ಲೂ ಇಂತಹ ಹಲವು ಘಟನೆಗಳು ಬರುತ್ತದೆ. ಸಹಿಷ್ಣುತೆ ಸಂಸಾರದ ಮುಖ್ಯ ಸೂತ್ರವಾಗಿರುತ್ತದೆ. ಯಾರಾದರೂ ಒಬ್ಬರು ಸೋತಾಗ ಘಟನೆ ಸುಖಾಂತ್ಯವಾಗುವುದಲ್ಲದೆ, ತಪ್ಪು ಮಾಡಿದವರು ತಪ್ಪಿಗೆ ಕ್ಷಮೆ ಯಾಚಿಸುವಂತೆಯೂ ಆಗುತ್ತದೆ. ನಾವು ಕೆಲಸ ಮಾಡುವ ಸ್ಥಳಗಳಲ್ಲೂ ಹೀಗೆ. ಸಣ್ಣ ಕಾರಣಗಳು ದೊಡ್ಡದಾಗುತ್ತದೆ. ನಮ್ಮ 'ಈಗೊ' ಯಿಂದಾಗಿ ಇಬ್ಬರೂ ಕ್ಷಮೆ ಕೇಳದೆ ಅದನ್ನು ಸಾಧಿಸುತ್ತಾ ಹೊರಟರೆ ಇಬ್ಬರೂ ನೆಮ್ಮದಿ ಕಳೆದುಕೊಳ್ಳಬೇಕಾಗುತ್ತದೆ.

ಕ್ಷಮಿಸುವುದು ಧೈರ್ಯವಂತರ ಲಕ್ಷಣ ಎಂದೂ ಹೇಳಲಾಗುತ್ತದೆ. ಹೇಡಿಗಳಿಗೆ ಸಾಮಾನ್ಯವಾಗಿ ಕ್ಷಮಾಗುಣ ಇರುವುದಿಲ್ಲ. ಏಕೆಂದರೆ ಅವರು ಯಾವುದೇ ಸಂದಿಗ್ಧತೆಗಳಿಗೆ ಸ್ಪಂದಿಸುವುದಿಲ್ಲ. ಮನುಷ್ಯರನ್ನು ಮನುಷ್ಯರನ್ನಾಗಿ ಮಾಡುವುದು ಕ್ಷಮಾಗುಣವೇ ಎಂದೂ ಹೇಳಲಾಗುತ್ತದೆ. ಕ್ಷಮಾಗುಣ ಏನನ್ನು ಗಳಿಸಿ ಕೊಡುತ್ತದೆ ಎಂಬುದಕ್ಕೆ ನೆಲ್ಸನ್ ಮಂಡೇಲಾ ಉತ್ತಮ ಉದಾಹರಣೆ. ಅವರು ಜೈಲುವಾಸ ಅನುಭವಿಸಿದ್ದು ಬರೋಬ್ಬರಿ 27 ವರ್ಷ. ಅವರು ಜೈಲಿನಿಂದ ಬಿಡುಗಡೆಯಾದಾಗ ಹೇಳಿದ್ದು: ತಾನು ತನ್ನನ್ನು ಬಂಧಿಸಿದವರನ್ನು ಕ್ಷಮಿಸಿದ್ದೇನೆ ಎಂದು. ಈ ಕಾರಣದಿಂದ ಮುಂದೆ ಅವರು ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದರು ಹಾಗೂ ವಿಶ್ವದ ನಾಯಕರು ಎನಿಸಿಕೊಂಡರು. ಶಿಕ್ಷಿಸುವುದು ಮನುಷ್ಯರ ಕೆಲಸವಲ್ಲ, ಅದು ದೇವರ ಕೆಲಸ ಎಂಬ ಭಾವನೆ ಅವರಲ್ಲಿತ್ತು.

ಇದೆಲ್ಲದರ ಸಾರಾಶ ಇಷ್ಟೇ. ನಾವು ದೊಡ್ಡವರಾಗಬೇಕಾದರೆ ದ್ವೇಷ ಸಾಧಿಸುವುದಕ್ಕಿಂತ ಕ್ಷಮಿಸುವ ಗುಣವನ್ನು ಬೆಳೆಸಿಕೊಳ್ಳುವುದು. ಕ್ಷಮಿಸುವುದು ದೊಡ್ಡ ಗುಣವೇ ಹೊರತು ಅದು ನಮ್ಮ ದೌರ್ಬಲ್ಯ ಎಂದು ತಿಳಿದುಕೊಳ್ಳಬಾರದು. ತಪ್ಪು ನಮ್ಮಿಂದಾಗದೇ ಇದ್ದರೂ ನಾವು ಕೇಳುವ ಕ್ಷಮೆ ಮುಂದೆ ನಮಗೆ ಒಳಿತನ್ನೇ ಮಾಡುತ್ತದೆ. ಕ್ಷಮಿಸು ಹಾಗೂ ಆ ಘಟನೆಯನ್ನು ಮರೆ ಎಂಬುದು ನಮ್ಮ ಉನ್ನತಿಗೆ ಸಾಧನವಾಗುತ್ತದೆ.

ವಿವಿಧ ಕ್ಷೇತ್ರದ ಸಾಧಕರ ಅನುಭವವನ್ನು ಸರ್ಕಾರ ಪರಿಗಣಿಸಬೇಕು

- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಸಲಹೆ
- ಸಂಘ-ಸಂಸ್ಥೆಗಳೂ ಸರ್ಕಾರಕ್ಕೆ ನಾನಾ ರೀತಿಯಲ್ಲಿ ಸಹಕರಿಸಬೇಕಾಗುತ್ತದೆ



ಮೈಸೂರು, ನ.20(ಎಸ್‌ಪಿಎನ್)–ವಿವಿಧ ಕ್ಷೇತ್ರದ ಸಾಧಕರ ಅನುಭವವನ್ನು ರಾಜ್ಯ ಸರ್ಕಾರ ಬಳಸಿಕೊಂಡು, ಕರ್ನಾಟಕದ ಪ್ರಗತಿಗೆ ಮುಂದಾಗಬೇಕು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ತಿಳಿಸಿದರು.

ಮೈಸೂರು ವಿಶ್ವೇಶ್ವರ ನಗರದ ಅಕ್ಕಾಮಹಾದೇವಿ ರಸ್ತೆಯಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಆವರಣದಲ್ಲಿ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಗಳ ಒಕ್ಕೂಟದ (ಜಿಲ್ಲೆ 317ಎ) ವತಿಯಿಂದ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಅಂಗವಾಗಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಿ.ಮಾದೇಗೌಡ, ವೃತ್ತಿ ರಂಗಭೂಮಿ ಕಲಾವಿದ ಶೃಂಗೇರಿ ರಾಮಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನಿತರ ಪರವಾಗಿ ಮಾತನಾಡಿದ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅವರು, 67ನೇ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ವಿವಿಧ ಕ್ಷೇತ್ರದ 67 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದರು. ಈ ವೇದಿಕೆಯಲ್ಲಿ ಸನ್ಮಾನಿತರಾಗಿರುವ ಅನೇಕರು ಜನರ ನಡುವೆ ಇದ್ದು ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಅವರ ಸಾಧನೆಗಳ ಬಗ್ಗೆ ಅಧಿಕಾರಿಗಳು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು ಎಂಬ ಸಂದೇಶ ನೀಡಿದ್ದಾರೆ ಎಂದರು.

ಮುಖ್ಯಮಂತ್ರಿ ಬೊಮ್ಮಾಯಿ ಅವರ ಸಂದೇಶವನ್ನು ಅರ್ಥೈಸಿಕೊಂಡು ಹೇಳುವುದಾದರೆ, ನಾನು ಸಿಐಟಿಬಿ ಅಧ್ಯಕ್ಷನಾಗಿದ್ದಾಗ, 30 ಸಾವಿರಕ್ಕೂ ಹೆಚ್ಚು ಮಧ್ಯಮ ವರ್ಗದವರಿಗೆ ಸೂರು ಒದಗಿಸುವ ನನ್ನ ಪ್ರಯತ್ನ ಸಂಘ–ಸಂಸ್ಥೆಗಳ ನೆರವಿನಿಂದ ಸಫಲವಾಯಿತು. ಈಗಲೂ ನಾನು ಲಯನ್ಸ್ ಸಂಸ್ಥೆಯಲ್ಲಿರುವ ವಿವಿಧ ಕ್ಷೇತ್ರದ ಸದಸ್ಯರಿಗೆ ವಿನಮ್ರವಾಗಿ ಹೇಳುವುದೇನೆಂದರೆ, ನೀವು ಬಡವರ ಪರವಾಗಿ ಕೆಲಸ ಮಾಡಬೇಕು. ಸೂರಿಲ್ಲದವರಿಗೆ ಸೂರು ಒದಗಿಸುವ ಕಾರ್ಯಕ್ಕೆ ಸರ್ಕಾರದ ಬೆನ್ನೆಲುಬಾಗಿ ನಿಂತು ಸಹಕಾರ ನೀಡಬೇಕು ಎಂದರು. ಕನ್ನಡ ನಾಡು–ನುಡಿ, ಸಂಸ್ಕೃತಿ ಬೆಳವಣಿಗೆಗೆ ಲಯನ್ಸ್ ಸಂಸ್ಥೆ, ರೋಟರಿ ಸಂಸ್ಥೆ ಸೇರಿದಂತೆ ಇತರೆ ಕನ್ನಡ ಪರ ಸಂಘ–ಸಂಸ್ಥೆಗಳು ಜೊತೆಗೂಡಿ ಶ್ರಮಿಸಬೇಕು. ನಾನು ಈ ಹಿಂದೆ ಸಿಐಟಿಬಿ (ಈಗ ಮುಡಾ)ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಇವೆರಡು ಸಂಸ್ಥೆಗಳಿಗೆ ಶಿಕ್ಷಣ ಸಂಸ್ಥೆ ಸ್ಥಾಪಿಸಲು ಸಿಎ ನಿವೇಶನ ಮಂಜೂರಾಗಿತ್ತು. ಆ ವೇಳೆ ಇವೆರಡು ಸಂಸ್ಥೆಗಳು ಶಿಕ್ಷಣ ಸಂಸ್ಥೆ ಸ್ಥಾಪಿಸಲು ತಡ ಮಾಡಿದವು. ಆಗ ನಾನೇ ಖುದ್ದು ನಿಂತು ಅಧಿಕಾರಿಗಳಿಂದ ನೋಟೀಸ್ ಜಾರಿಗೊಳಿಸಿದ್ದೆವು. ಆ ನೋಟೀಸ್ ಜಾರಿಗೊಂಡ ಎರಡನೇ ದಿನಕ್ಕೆ ಆ ಜಾಗದಲ್ಲಿ ಶಿಕ್ಷಣ ಸಂಸ್ಥೆ ಕಟ್ಟಲು ಇವೆರಡು ಸಂಸ್ಥೆ ಪ್ರತಿನಿಧಿಗಳು ಶಿಲಾನ್ಯಾಸ ನೆರವೇರಿಸಿದ ಪ್ರಸಂಗವನ್ನು ವಿವರಿಸಿದರು.

ಹೀಗೆ ಅಭಿವೃದ್ಧಿ ಕಾರ್ಯದಲ್ಲಿ ಸಂಘ–ಸಂಸ್ಥೆಗಳ ಪ್ರತಿನಿಧಿಗಳನ್ನು ಸಾರ್ವಜನಿಕರು ಸದಾ ಎಚ್ಚರಿಸಿದರೆ, ಅಭಿವೃದ್ಧಿ ಸಾಧ್ಯವಿದೆ. ಕಸ ವಿಂಗಡಣೆ, ವಾರ್ಡ್ ಅಭಿವೃದ್ಧಿ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳಲ್ಲೂ ಸಾಧಕರ ಅನುಭವದ ಮಾತುಗಳ ಬಗ್ಗೆ ತಾತ್ಸರ ಮಾಡಬಾರದು ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಈ ವೇಳೆ ಲಯನ್ಸ್ ಸಂಸ್ಥೆ ಜಿಲ್ಲಾ ರಾಜ್ಯ ಪಾಲರಾದ ಶ್ರೀ ವಿದ್ಯಾ, ಲಯನ್ಸ್ ರಾಜ್ಯೋತ್ಸವ ಸಮಿತಿ ಅಧ್ಯಕ್ಷ ಲಯನ್ ಹೆಚ್.ನಾರಾಯಣ, ಲಯನ್ ನಂಜುಂಡ ಸ್ವಾಮಿ, ಸುವಂತ ವಸಿಷ್ಠ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ಆಕಸ್ಮಿಕ ಬೆಂಕಿ; ದಾಖಲೆಗಳಿಗೆ ಹಾನಿ

ಮೈಸೂರು, ನ. 20– ಚಾಮುಂಡಿಬೆಟ್ಟದಲ್ಲಿನ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ಆಕಸ್ಮಿಕ ಬೆಂಕಿಯಿಂದ ಹಲವು ಪ್ರಮುಖ ದಾಖಲೆಗಳು ಸುಟ್ಟುಹೋಗಿವೆ. ಇಂದು ಸಂಜೆ 6.30ರ ಸಮಯದಲ್ಲಿ ಬ್ಯಾಂಕ್‌ನಿಂದ ದಟ್ಟ ಹೊಗೆ ಹೊರ ಸೂಸುತ್ತಿರುವುದನ್ನು ಗಮನಿಸಿದ ಸಾರ್ವಜನಿಕರು ಕೂಡಲೇ ಪೊಲೀಸರು ಹಾಗೂ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ಕ್ಷಿಪ್ರ ಕಾರ್ಯಾಚರಣೆ ಮೂಲಕ ನಂದಿಸಿದರು. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಬ್ಯಾಂಕ್ ಕ್ಯಾಷಿಯರ್ ರಕ್ಷಿತ್ ಬಾಗಿಲು ತೆಗೆದು ಅಗ್ನಿಶಾಮಕ ದಳ ಕಾರ್ಯಾಚರಣೆ ನಡೆಸಲು ಅನುವು ಮಾಡಿಕೊಟ್ಟರು.



ಈ ಆಕಸ್ಮಿಕ ಅಗ್ನಿಯಿಂದ ಒಂದೆಡೆ ಜೋಡಿಸಲಾಗಿದ್ದ ದಾಖಲೆಗಳು ಸುಟ್ಟುಹೋಗಿವೆ. ಸೂಕ್ತ ಸಮಯದಲ್ಲಿ ಬೆಂಕಿಯನ್ನು ನಂದಿಸಿದ್ದರಿಂದ ಹೆಚ್ಚಿನ ಹಾನಿ ಸಂಭವಿಸಿಲ್ಲ ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ. ಸ್ವಿಚ್ ಬೋರ್ಡ್‌ನಲ್ಲಿ ಉಂಟಾದ ಶಾರ್ಟ್‌ಸರ್ಕ್ಯೂಟ್‌ನಿಂದಾಗಿ ಬೆಂಕಿ ಕಾಣಿಸಿಕೊಂಡಿದೆ. ಅದೃಷ್ಟವಶಾತ್ ಕ್ಯಾಷ್ ಕೌಂಟರ್‌ನತ್ತ ಅದು ಆವರಿಸಿಲ್ಲ ಎಂದು ನಿಟ್ಟುಸಿರು ಬಿಟ್ಟಿದ್ದಾರೆ. ಸೆಕ್ಯೂರಿಟಿ ಆಫೀಸರ್ ಪರಿಶೀಲನೆ ನಂತರ ಹಾನಿಯ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಾಗಲಿದೆ ಎಂದು ರಕ್ಷಿತ್ ಹೇಳಿದ್ದಾರೆ. ಅಗ್ನಿಶಾಮಕ ಅಧಿಕಾರಿ ನಾಗರಾಜ ಅರಸ್, ಸೋಮಯ್ಯ ಇತರರು ಅಗ್ನಿ ನಂದಿಸುವಲ್ಲಿ ಪರಿಶ್ರಮಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

'ಪಾಲಿಕೆ ಅದಾಲತ್'ನಲ್ಲಿ ಒಟ್ಟು 272 ಅರ್ಜಿ ಸ್ವೀಕಾರ

ಮೈಸೂರು, ನ.20(ಆರ್‌ಕೆಬಿ)– ಮೈಸೂರು ನಗರಪಾಲಿಕೆ ಆವರಣದಲ್ಲಿ ಆಯೋಜಿಸಿದ್ದ ಆರು ದಿನಗಳ 'ಪಾಲಿಕೆ ಅದಾಲತ್' ಶನಿವಾರ ಸಂಜೆ ಅಂತ್ಯಗೊಂಡಿತು. ಈ ಅವಧಿಯಲ್ಲಿ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಒಟ್ಟು 272 ಅರ್ಜಿಗಳು ಸ್ವೀಕರಿಸಲಾಗಿವೆ.

ಕೊನೆಯ ದಿನವಾದ ಶನಿವಾರ ಕಂದಾಯ ಶಾಖೆಯಲ್ಲಿ 23, ನಗರ ಯೋಜನಾ ಶಾಖೆಯಲ್ಲಿ 11, ಆಶ್ರಯ ಶಾಖೆಯಲ್ಲಿ 15, ಅಭಿವೃದ್ಧಿ ಮತ್ತು ತಾಂತ್ರಿಕ ಶಾಖೆಯಲ್ಲಿ 2, ಲೆಕ್ಕಪತ್ರ ಮತ್ತು ಆಡಳಿತ ಶಾಖೆಯಲ್ಲಿ 1, ಆರೋಗ್ಯ ಶಾಖೆಯಲ್ಲಿ 5, ಒಳಚರಂಡಿ ವಿಭಾಗ ಮತ್ತು ವಾಣಿ ವಿಲಾಸ ನೀರು ಸರಬರಾಜು ಶಾಖೆಯಲ್ಲಿ 9, ಬಡತನ ನಿರ್ಮೂಲನಾ ಶಾಖೆಯಲ್ಲಿ 2 ಹಾಗೂ ಇತರೆ ವಿಭಾಗದಲ್ಲಿ 2 ಅರ್ಜಿಗಳು ಸೇರಿ 70 ಅರ್ಜಿಗಳು ಸ್ವೀಕೃತಗೊಂಡವು.

ಪಾಲಿಕೆ ಅದಾಲತ್ ಅಂತ್ಯಗೊಂಡಾಗ ಆರು ದಿನಗಳ ಅವಧಿಯಲ್ಲಿ ಕಂದಾಯ ಶಾಖೆಯಲ್ಲಿ 86, ನಗರ ಯೋಜನಾ ಶಾಖೆಯಲ್ಲಿ 34, ಆಶ್ರಯ ಶಾಖೆಯಲ್ಲಿ 53, ಅಭಿವೃದ್ಧಿ ಮತ್ತು ತಾಂತ್ರಿಕ ಶಾಖೆಯಲ್ಲಿ 25, ಲೆಕ್ಕಪತ್ರ ಮತ್ತು ಆಳಿತ ಶಾಖೆಯಲ್ಲಿ 4, ಆರೋಗ್ಯ ಶಾಖೆಯಲ್ಲಿ 8, ಒಳಚರಂಡಿ ವಿಭಾಗ ಮತ್ತು ವಾಣಿವಿಲಾಸ ನೀರು ಸರಬರಾಜು ವಿಭಾಗದಲ್ಲಿ 27, ಬಡತನ ನಿರ್ಮೂಲನಾ ಶಾಖೆಯಲ್ಲಿ 21, ಇತರೆ 14 ಅರ್ಜಿಗಳು ಸೇರಿ ಒಟ್ಟು 272 ಅರ್ಜಿಗಳು ಸ್ವೀಕೃತಗೊಂಡಿವೆ. ಈ ಎಲ್ಲಾ ಅರ್ಜಿಗಳಿಗೆ ನ.27ರ ಒಳಗಾಗಿ ಉತ್ತರ ನೀಡಲಿದ್ದು, ಅಲ್ಲಿಯೂ ಸೂಕ್ತ ಉತ್ತರ ಸಿಗದಿದ್ದರೆ ನ.30ರಂದು ಅಂತಿಮ ಅದಾಲತ್‌ನಲ್ಲಿ ದೂರು ನೀಡಬಹುದಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ನಾಳೆಯಿಂದ ಮೈಸೂರು ಜಿಲ್ಲಾ ಪೊಲೀಸ್ ಕ್ರೀಡಾಕೂಟ

ಮೈಸೂರು, ನ.20–ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ನವೆಂಬರ್ 22 ರಿಂದ 24ರವರೆಗೆ ಜ್ಯೋತಿನಗರ ಡಿಎಆರ್ ಕವಾಯತು ಮೈದಾನದಲ್ಲಿ ನಡೆಯಲಿದೆ. ಮೈಸೂರು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಪೂರ್ಣಿಮಾ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಜ.24ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ದಕಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಪ್ರವೀಣ್ ಮಧುಕರ್ ಪವಾರ್ ಮುಖ್ಯ ಅತಿಥಿಗಳಾಗಿರುವರು.



ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಪದಾಧಿಕಾರಿಗಳಾದ ಬ್ರಿಜೇಷ್ ಪಟೇಲ್ ಸೇರಿದಂತೆ ಇನ್ನಿತರರೊಂದಿಗೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಭಾನುವಾರ ಬೆಂಗಳೂರಲ್ಲಿ ಸುದೀರ್ಘ ಚರ್ಚೆ ನಡೆಸಿದರು.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 21 ನವೆಂಬರ್ 2022

ಶ್ರೀರಂಗಪಟ್ಟಣದಲ್ಲಿ ಅದ್ಧೂರಿ ಅಂಬಿ ಸ್ಮರಣೋತ್ಸವ

ಶ್ರೀರಂಗಪಟ್ಟಣ, ನ20– ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಮೈದಾನದಲ್ಲಿ ಶನಿವಾರ ರಾತ್ರಿ ಅಂಬಿ ಸ್ಮರಣೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.



ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನಿಂದ ಆಯೋಜಿಸಿದ್ದ ಕಾರ್ಯಕ್ರಮವನ್ನು ರೇಷ್ಮೆ ಮತ್ತು ಯುವ ಸಬಲೀಕರಣ ಕ್ರೀಡಾ ಸಚಿವ ಕೆಸಿ ನಾರಾಯಣಗೌಡ, ಕೃಷಿ ಸಚಿವ ಬಿ.ಸಿ.ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು.

ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಪಟ್ಟಣದಲ್ಲಿ ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ಹಮ್ಮಿಕೊಂಡಿರುವ ಅಂಬಿ ಸ್ಮರಣೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಅರ್ಥಪೂರ್ಣವಾಗಿದೆ. ಮೊದಲ ಬಾರಿಗೆ ನಾಯಕ ನಟನಾಗಿ ಅಭಿನಯಿಸಿದ್ದ ಕೌರವ ಸಿನಿಮಾವನ್ನು ಶ್ರೀರಂಗಪಟ್ಟಣದಲ್ಲಿ ಚಿತ್ರೀಕರಿಸಲಾಗಿತ್ತು. ಹಾಗಾಗಿ ಶ್ರೀರಂಗಪಟ್ಟಣಕ್ಕೂ ನನಗೂ ಅವಿನಾಭಾವ ಸುಬಂಧವಿದೆ ಯುವ ಮುಖಂಡ ಇಂಡವಾಳು ಎಸ್.ಸಚ್ಚಿದಾನಂದ ಹಲವು ವರ್ಷಗಳಿಂದ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಮುಂದೆ ರಾಜಕೀಯವಾಗಿ ನಿಮ್ಮ ಬಳಿ ಬಂದಾಗ ಅವರಿಗೆ ಆಶೀರ್ವಾದ ಮಾಡುವ ಮೂಲಕ ಸಚ್ಚಿದಾನಂದ ಅವರನ್ನು ಶ್ರೀರಂಗಪಟ್ಟಣದ ಸಾರಥಿಯನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಮಾಜಿ ಸಚಿವ ಅಂಬರೀಶ್ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಹೆಸರು ಮಾಡಿದವರು. ಅವರನ್ನು ಇಂದು ಸ್ಮರಣೆ ಮಾಡುತ್ತಿರುವುದು ಹೆಮ್ಮೆಯೇ ಸರಿ. ಎಸ್.ಸಚ್ಚಿದಾನಂದ ರಾಜಕೀಯ ಪ್ರವೇಶಿಸಿ ಮುಂದಿನ ದಿನಗಳಲ್ಲಿ ಬಿಜೆಪಿ ಸೇರಬೇಕು ಎಂದರು.

ಮಂಡ್ಯ ಜಿಲ್ಲೆಗೆ ಅಂಬರೀಶ್ ಕೊಡುಗೆ ಅಪಾರ. ಅವರ 30 ವರ್ಷಗಳ ರಾಜಕೀಯ ಜೀವನದಲ್ಲಿ ಜಿಲ್ಲೆಯ ಜನ ಅವರಿಗೆ ಸಾಕಷ್ಟು ಪ್ರೀತಿ ನೀಡಿದ್ದಾರೆ. ಕಾವೇರಿ ಹೋರಾಟದ ವೇಳೆ ಕೇಂದ್ರ ಮಂತ್ರಿ ಸ್ಥಾನಕ್ಕೆ ಅಂಬರೀಶ್ ರಾಜೀನಾಮೆ ನೀಡುವ ಮೂಲಕ ಅವರು ಜನರ ನಿಜವಾದ ರೆಬೆಲ್‌ಸ್ಟಾರ್ ಎಂಬುದನ್ನು ನಿರೂಪಿಸಿದ್ದರು. ನಾನು ರಾಜಕಾರಣಕ್ಕೆ ಬಂದಾಗ ನನಗೆ ನೀಡಿದ ಪ್ರೀತಿಯನ್ನು ಮುಂದೆ ಸಚ್ಚಿದಾನಂದ ಅವರಿಗೂ ನೀಡಿ. ಶ್ರೀರಂಗಪಟ್ಟಣಕ್ಕೆ ಸಚ್ಚಿ ಅವರಂತಹ ಯುವ ನಾಯಕರ ಅಗತ್ಯವಿದೆ. ಹೀಗಾಗಿ ಮುಂಬರುವ ದಿನಗಳಲ್ಲಿ ಅವರಿಗೆ ಒಂದು ಅವಕಾಶ ಮಾಡಿಕೊಡಿ ಎಂದರು.

ಈ ವೇಳೆ ನಟರಾದ ಅಭಿಷೇಕ್, ವಿನೋದ್ ಪ್ರಭಾಕರ್, ಚಿಕ್ಕಣ್ಣ, ಧನ್ವೀರ್, ನಟಿ ರಚಿತಾ ರಾಮ್ ಸೇರಿದಂತೆ ಹಿರಿತೆರೆ ಹಾಗೂ ಕಿರುತೆರೆ ನಟ–ನಟಿಯರು ಇದ್ದರು. ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಹಾಗೂ ಹೇಮಂತ್ ತಂಡದಿಂದ ಸುಗೀತ ರಸಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಮಾಜಿ ಜಿಪಂ ಸದಸ್ಯರಾದ ಎಸ್.ಎಲ್.ಲಿಂಗರಾಜು, ರಾಮಲಿಂಗಯ್ಯ, ಮಮತಾ, ತಾಪಂ ಮಾಜಿ ಅಧ್ಯಕ್ಷ ರಾಮಣ್ಣ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಟಿ.ಶ್ರೀಧರ್, ಯುವ ಮುಖಂಡ ದರ್ಶನ್, ಲಿಂಗರಾಜು ಸೇರಿದಂತೆ ಇತರರಿದ್ದರು.

ಜೋಡಿಲಿಂಗೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ ಭೂಮಿ ಪೂಜೆ

ಕೆಆರ್.ಪೇಟೆ, ನ20– ತಾಲೂಕಿನ ಬೂಕನಕೆರೆ ಹೋಬಳಿ ದೊಡ್ಡಗಾಡಿಗನಹಳ್ಳಿ ಗ್ರಾಮದಲ್ಲಿ 1000 ವರ್ಷ ಇತಿಹಾಸವುಳ್ಳ ಹೊಯ್ಸಳರ ಕಾಲದ ಜೋಡಿಲಿಂಗೇಶ್ವರ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಗೆ ಸಚಿವ ಕೆ.ಸಿ.ನಾರಾಯಣಗೌಡ ಭೂಮಿ ಪೂಜೆ ನೆರವೇರಿಸಿದರು.



ನಂತರ ಮಾತನಾಡಿದ ಅವರು, ದೇವಾಲಯಗಳು ನಮ್ಮ ಸಂಸ್ಕೃತಿ, ಪರಂಪರೆ ಪ್ರತೀಕ. ಮನುಷ್ಯನಿಗೆ ಶಾಂತಿ, ನೆಮ್ಮದಿ ನೀಡುವ ತಾಣಗಳಾಗಿದೆ. ದೇವರ ಪೂಜೆ ಜೊತೆಗೆ ಬಡವರಿಗೆ, ಅಶಕ್ತರಿಗೆ ದಾನಧರ್ಮ ಮಾಡುವ ಮೂಲಕ ನೆಮ್ಮದಿ ಪಡೆಯಬಹುದು. ತಂದೆ–ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವ ಮೂಲಕವೂ ದೇವರ ಪ್ರೀತಿಗೆ ಪಾತ್ರರಾಗಬಹುದು. ಕಾಶಿಯಲ್ಲಿ ಜೋಡಿಲಿಂಗೇಶ್ವರ ದೇವಾಲಯವಿದ್ದು, ಅದೇ ಮಾದರಿ ಗ್ರಾಮದಲ್ಲಿಯೂ ಜೋಡಿಲಿಂಗೇಶ್ವರ ದೇವಾಲಯ ಕಾಣಬಹುದು. ಅದ್ಭುತ ಶಿಲ್ಪಕಲೆ ಹೊಂದಿರುವ ಪುರಾತನ ಕಾಲದ ಜೋಡಿಲಿಂಗೇಶ್ವರ ದೇವಾಲಯವನ್ನು 1 ಕೋಟಿ ರೂ. ವೆಚ್ಚದಲ್ಲಿ ಪುನರ್‌ನಿರ್ಮಾಣ ಮಾಡುತ್ತಿರುವ ಗ್ರಾಮಸ್ಥರ ಕಾರ್ಯ ಶ್ಲಾಘನೀಯ. ಈ ಕಾರ್ಯಕ್ಕೆ ಸರ್ಕಾರದಿಂದ 20 ಲಕ್ಷ, ಹೆಚ್ಚುವರಿಯಾಗಿ 10 ಲಕ್ಷ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಮಿತ್ರ ಫೌಂಡೇಷನ್ ಅಧ್ಯಕ್ಷ, ಸಮಾಜ ಸೇವಕ ವಿಜಯ್ ರಾಮೇಗೌಡ, ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್ ಗ್ರಾಮಸ್ಥರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿ, ದೇವಾಲಯ ಜೀರ್ಣೋದ್ಧಾರಕ್ಕೆ ಆರ್ಥಿಕ ನೆರವು ನೀಡುವುದಾಗಿ ತಿಳಿಸಿದರು.

ದೇವಾಲಯ ಜೀರ್ಣೋದ್ಧಾರ ಟ್ರಸ್ಟ್ ಅಧ್ಯಕ್ಷ ಡಿ.ಪಿ.ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ಮಾಜಿ ತಾಪಂ ಅಧ್ಯಕ್ಷ ಬಿ.ಜವರಾಯೀಗೌಡ, ಬಿಬಿಎಂಪಿ ಇಂಜಿನಿಯರ್ ಗಂಗಾಧರ್, ವಕೀಲ ಡಿ.ಆರ್.ಮೋಹನ್, ಬಲ್ಲೇನಹಳ್ಳಿ ಗ್ರಾಪಂ ಅಧ್ಯಕ್ಷೆ ಸಂಗೀತಾ, ಪಟೇಲ್ ಸ್ವಾಮೀಗೌಡ, ಗ್ರಾಪಂ ಸದಸ್ಯರಾದ ಡಿ.ವಿ.ಕುಮಾರ್, ಸಾವಿತ್ರಿ ರಾಜು, ಅಭಿಲಾಷ್ ಮಂಜು, ಮಾಜಿ ಗ್ರಾಪಂ ಸದಸ್ಯ ರಂಗರಾಜು, ದೇವಾಲಯ ಟ್ರಸ್ಟ್ ಗೌರವಾಧ್ಯಕ್ಷ ಪಿ.ರಾಮೇಗೌಡ, ಉಪಾಧ್ಯಕ್ಷ ರಂಗೇಗೌಡ, ಡಿ.ಆರ್.ಶೇಖರ್, ಖಜಾಂಚಿ ಡಿ.ಆರ್.ಕುಮಾರ್, ಆಂತರಿಕ ಲೆಕ್ಕಪರಿಶೋಧಕ ಅಪ್ಪಾಜಿಗೌಡ, ಸಹ ಕಾರ್ಯದರ್ಶಿ ಗೋಪಾಲಕೃಷ್ಣ, ಸಲಹೆಗಾರ ಆರ್.ವೆಂಕಟರಮಣೇಗೌಡ, ನಿರ್ದೇಶಕರಾದ ಟಿ.ಡಿ.ಯೋಗೇಶ್, ನಾಗೇಗೌಡ, ಡಿ.ಪಿ.ಪ್ರಕಾಶ್, ಯಜಮಾನರಾದ ಗೌರಮ್ಮನ ದಾಸೇಗೌಡ, ಭೇರ್ಮನ್ ರಂಗೇಗೌಡ, ದೊಡ್ಡ ಸ್ವಾಮಿಗೌಡ ಸೇರಿದಂತೆ ಇತರರಿದ್ದರು.

ಪುನೀತೋತ್ಸವ ಪ್ರಚಾರ ವಾಹನಕ್ಕೆ ಚಾಲನೆ



ಪಾಂಡವಪುರ, ನ.20– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನ.25ರಿಂದ 27ರವರೆಗೆ ಮೂರು ದಿನಗಳ ಕಾಲ ನಡೆಯುವ ಪುನೀತೋತ್ಸವ ಕಾರ್ಯಕ್ರಮದ ಪ್ರಚಾರ ವಾಹನಕ್ಕೆ ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಹಾಗೂ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು ಕನ್ನಡ ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು.

ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು ಮಾತನಾಡಿ, ಪಾಂಡವ ಕ್ರೀಡಾಂಗಣದಲ್ಲಿ 3 ದಿನಗಳ ಕಾಲ ನಡೆಯುವ ಪುನೀತೋತ್ಸವದ ಪ್ರಯುಕ್ತ 5 ಪ್ರಚಾರ ವಾಹನಗಳು ಹೋಬಳಿಗೆ ಒಂದರಂತೆ ತಾಲೂಕಿನ ಎಲ್ಲಾ ಗ್ರಾಮಗಳಿಗೆ ತೆರಳಿ ಕಾರ್ಯಕ್ರಮದ ಬಗ್ಗೆ ಪ್ರಚಾರ ನಡೆಸುತ್ತವೆ. ನಟ ಪುನೀತ್ ರಾಜಕುಮಾರ್ ಜನಪರ ನಿಸ್ವಾರ್ಥ ಸೇವೆ ಹಾಗೂ ಅವರ ದಾರಿಯಲ್ಲಿ ಇಂದಿನ ಯುವ ಜನತೆ ಸಾಗುವ ದೃಷ್ಟಿಯಿಂದ ಈ ಕಾರ್ಯಕ್ರಮ ರೂಪಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಬೇಕೆಂದು ಕೋರಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇಶ್ ಮಾತನಾಡಿ, ಶಾಸಕ ಸಿ.ಎಸ್.ಪುಟ್ಟರಾಜು ನಮ್ಮ ತಾಲೂಕಿನ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ. ಅವರ ನೇತೃತ್ವದಲ್ಲಿ ಪುನೀತ್ ರಾಜಕುಮಾರ್ ಸ್ಮರಣೆ ಹಾಗೂ ಕನ್ನಡ ರಾಜ್ಯೋತ್ಸವದ ಪ್ರಯುಕ್ತ 3 ದಿನಗಳ ಕಾಲ ಅದ್ದೂರಿ ಸಾಂಸ್ಕೃತಿಕ ಸಂಭ್ರಮ ನಡೆಸಲಾಗುವುದು. ಡಾ.ರಾಜಕುಮಾರ್ ಕುಟುಂಬ ಸೇರಿದಂತೆ ಕನ್ನಡ ಚಿತ್ರರಂಗದ ಹೆಸರಾಂತ ನಟ, ನಟಿಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದರು.

ಈ ವೇಳೆ ಪುರಸಭೆ ಅಧ್ಯಕ್ಷೆ ಅರ್ಚನಾ, ಸದಸ್ಯರಾದ ಇಮ್ರಾನ್ ಷರೀಫ್, ಸುನೀತಾ, ಗಿರೀಶ್, ಸೋಮಶೇಖರ್, ಜೆಡಿಎಸ್ ಮುಖಂಡರಾದ ಟೌನ್ ಚಂದ್ರು, ಬಲರಾಮು ಕಸಪಾ ಅಧ್ಯಕ್ಷ ಮೇನಾಗರ ಪ್ರಕಾಶ್ ಇನ್ನಿತರರಿದ್ದರು.

ಕಬ್ಬಾರೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

ಮದ್ದೂರು, ನ.20– ತಾಲೂಕಿನ ಕಬ್ಬಾರೆ ಗ್ರಾಮದಲ್ಲಿ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ನಿರ್ಮಾಣವಾಗಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಂಸದೆ ಸುಮಲತಾ ಉದ್ಘಾಟಿಸಿದರು.



ಈ ವೇಳೆ ಮಾತನಾಡಿದ ಅವರು, ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಹಾಗೂ ಜಿಲ್ಲೆಯ ಜನತೆಯ ಆರೋಗ್ಯದ ದೃಷ್ಟಿಯಿಂದ ಕುಡಿಯುವ ನೀರಿನ ಘಟಕ ನಿರ್ಮಿಸಲಾಗಿದೆ. ಗ್ರಾಮಸ್ಥರು ಈ ಸೇವೆಯನ್ನು ಸದುಪಯೋಗಪಡಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.


ಜಿಪಂ ಮಾಜಿ ಅಧ್ಯಕ್ಷ ಬಿ.ವಿವೇಕಾನಂದ, ಗ್ರಾಪಂ ಸದಸ್ಯರಾದ ರಾಘವೇಂದ್ರ, ಬೀರೇಶ್, ಶೈಲಜಾ, ನಂದೀಶ್, ಕರಿಯಪ್ಪ ಅಂಬರೀಶ್ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಸೋಮಶೇಖರ್, ಶಶಿ, ಅರವಿಂದ್, ಮಹೇಂದ್ರ ಇದ್ದರು.



ಶ್ರೀರಂಗಪಟ್ಟಣ ತಾಲೂಕಿನ ಪಿ.ಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ವಿವೇಕ(ಪಟೇಲ್), ಉಪಾಧ್ಯಕ್ಷೆಯಾಗಿ ಶಾಂತಮ್ಮ ಆಯ್ಕೆಯಾಗಿದ್ದಾರೆ. ಈ ವೇಳೆ ಸಂಘದ ಕಾರ್ಯದರ್ಶಿ ನಾಗರಾಜು, ಪೈ.ನಾಗರಾಜು ಸೇರಿದಂತೆ ಸಂಘದ ನಿರ್ದೇಶಕರು, ಗ್ರಾಪಂ ಸದಸ್ಯರು ಹಾಜರಿದ್ದರು.

ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ಭಾರತೀನಗರ, ನ.20– ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದ ಕಾಳಿಕಾಂಬ ಪ್ರೌಢಶಾಲೆ ಆವರಣದಲ್ಲಿ ನ.26, 27 ರಂದು 11ನೇ ವರ್ಷದ ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ನಡೆಯಲಿದೆ.



ಗ್ರಾಮದ ಶ್ರೀಕಾಳಿಕಾಂಬ ಯುವ ಕ್ರೀಡಾ ಬಳಗ, ಶಾಸಕ ಡಿ.ಸಿ. ತಮ್ಮಣ್ಣ ನೇತೃತ್ವದಲ್ಲಿ ಪಂದ್ಯಾವಳಿ ನಡೆಯಲಿದ್ದು, ಮೈಸೂರು, ಮಂಡ್ಯ, ಹಾಸನ, ರಾಮನಗರ, ಚಿಕ್ಕಮಗಳೂರು, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಬಳ್ಳಾಪುರ, ಬೆಂಗಳೂರು ಸೇರಿದಂತೆ ಕ್ರೀಡಾಕೂಟದಲ್ಲಿ 65ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ. ಭಾಗವಹಿಸುವ ಎಲ್ಲಾ ತಂಡಗಳ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ಕಾರ್ಯಕ್ರಮದ ಆಯೋಜಕ ಡಿ.ಎಂ.ಮಂಚೇಗೌಡ ತಿಳಿಸಿದರು.

ಪಂದ್ಯಾವಳಿಯಲ್ಲಿ ವಿಜೇತರಿಗೆ ಪ್ರಥಮ 20 ಸಾವಿರ ರೂ, ದ್ವಿತೀಯ 15 ಸಾವಿರ, ತೃತೀಯ 10 ಸಾವಿರ ಹಾಗೂ 5 ಸಾವಿರ ರೂ. ಸಮಾಧಾನಕರ ಬಹುಮಾನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 9886381010, 9916718066, 9035906040 ಸಂಪರ್ಕಿಸಿ.

ದುಬ್ಬೆ ಚಂದ್ರಪ್ಪ ನಿಧನ



ಕೆ.ಆರ್.ಪೇಟೆ, ನ.20– ತಾಲೂಕಿನ ದುಡುಕನಹಳ್ಳಿ ಗ್ರಾಮದ ವೀರಶೈವ ಲಿಂಗಾಯಿತ ಮುಖಂಡ ದುಬ್ಬೆ ಚಂದ್ರಪ್ಪ(65) ಭಾನುವಾರ ನಿಧನರಾದರು. ಮೃತರು ಪತ್ನಿ ಲೀಲಾ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಗಳೂರಲ್ಲಿ ಆಟೋರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟ

● ಚಾಲಕನಿಗೆ ಅಲ್ಪ, ಪ್ರಯಾಣಿಕನಿಗೆ ತೀವ್ರ ಗಾಯ ● ಈ ಸ್ಫೋಟದ ಹಿಂದೆ ಭಯೋತ್ಪಾದನಾ ಶಕ್ತಿ ಕೈವಾಡ ● ಕೇಂದ್ರ ತನಿಖಾ ತಂಡಗಳೊಂದಿಗೆ ರಾಜ್ಯ ಪೊಲೀಸರ ತನಿಖೆ

ಮಂಗಳೂರು, ನ. 20– ಮಂಗಳೂರು ನಗರದ ಗರೋಡಿ ಎಂಬಲ್ಲಿ ಚಲಿಸುತ್ತಿದ್ದ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡ ಘಟನೆ ಶನಿವಾರ ಸಂಜೆ ನಡೆದಿದ್ದು, ಇದೊಂದು ಭಯೋತ್ಪಾದನಾ ಕೃತ್ಯ ಎಂಬುದು ಬಯಲಾಗಿದೆ

ಚಲಿಸುತ್ತಿದ್ದ ಆಟೋದಲ್ಲಿ ಕುಕ್ಕರ್ ಸ್ಫೋಟಗೊಳ್ಳುತ್ತಿದ್ದಂತೆಯೇ ಆ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿತ್ತು. ಸ್ಫೋಟದ ಶಬ್ಧಕ್ಕೆ ಬೆಚ್ಚಿ ಬಿದ್ದಿದ್ದ ಜನ ಸುಧಾರಿಸಿಕೊಂಡು ಆಟೋ ಬಳಿ ಬಂದು ನೋಡಿದಾಗ ಚಾಲಕ ಪುರುಷೋತ್ತಮ ಎಂಬಾತ ಗಾಯಗೊಂಡಿದ್ದರೆ, ಪ್ರಯಾಣಿಕ ತೀವ್ರವಾಗಿ ಗಾಯಗೊಂಡಿದ್ದ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡಿರುವುದು ಕಂಡುಬಂದಿದೆ. ಅದರಲ್ಲಿ ಟೈಮರ್ ಸೇರಿದಂತೆ ಕೆಲ ಸ್ಫೋಟಕ ವಸ್ತುಗಳು ಕಂಡುಬಂದ ಹಿನ್ನೆಲೆಯಲ್ಲಿ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ್ದ ಕಂಕನಾಡಿ ಠಾಣೆ ಪೊಲೀಸರು, ಇಬ್ಬರನ್ನೂ ಖಾಸಗಿ ಆಸ್ಪತ್ರೆಗೆ ರವಾನಿಸಿದರು.

ಪ್ರಯಾಣಿಕನನ್ನು ವಿಚಾರಿಸಿದಾಗ ಆತ ತನ್ನನ್ನು ಪ್ರೇಮ್‌ರಾಜ್ ಎಂದು ಹೇಳಿಕೊಂಡಿದ್ದು, ನನ್ನ ಅಣ್ಣ ಬಾಬುರಾವ್ ನಂಬರ್ ಎಂದು ಹೇಳಿ ಮೊಬೈಲ್ ನಂಬರ್‌ವೊಂದನ್ನು ತಿಳಿಸಿದ್ದಾನೆ. ಆ ಸಂಖ್ಯೆಗೆ ಕರೆಮಾಡಿದಾಗ ಬಾಬುರಾವ್ ಎಂಬುವರೇ ಮಾತನಾಡಿ, ಪ್ರೇಮ್‌ರಾಜ್ ನನ್ನ ಸಂಬಂಧಿಯೇ ಅಲ್ಲ, ಆತ ನನ್ನ ರೂಂನಲ್ಲಿದ್ದ ಬೆಂಗಳೂರಿಗೆ ಹೋಗುತ್ತೇನೆಂದು ಹೋಗಿದ್ದಾನೆ. ಅದನ್ನು ಬಿಟ್ಟರೆ ಆತನ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದು ಹೇಳಿದರೆನ್ನಲಾಗಿದೆ.

ತೀವ್ರವಾಗಿ ಗಾಯಗೊಂಡಿದ್ದ ಪ್ರಯಾಣಿಕನ ಬಳಿ ಪ್ರೇಮ್‌ರಾಜ್ ಹೆಸರಿನ, ಹುಬ್ಬಳ್ಳಿ ವಿಳಾಸದ ಆಧಾರ್ ಕಾರ್ಡ್ ಮತ್ತು ಅದೇ ಹೆಸರಿನ ರೈಲ್ವೇ ಉದ್ಯೋಗಿಯ ಗುರುತಿನ ಕಾರ್ಡ್ ದೊರೆತಿದೆ. ಸ್ಥಳಕ್ಕೆ ಬಂದಿದ್ದ ಪೊಲೀಸರು, ಕುಕ್ಕರ್‌ನಲ್ಲಿ ಬಾಂಬ್ ಇಟ್ಟು ಸ್ಫೋಟಿಸಲಾಗಿದೆ ಎಂಬ ನಿರ್ಧಾರಕ್ಕೆ ಬಂದು ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಕುಕ್ಕರ್ ಬಾಂಬ್‌ಅನ್ನು ಸಾಗಿಸುವಾಗ ಆಕಸ್ಮಿಕವಾಗಿ ಸ್ಫೋಟಗೊಂಡಿದೆ ಎಂಬ ತೀರ್ಮಾನಕ್ಕೆ ಬಂದು ತಮ್ಮ ಹಿರಿಯ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣವೇ ರಾಜ್ಯದ ಡಿಜಿ ಮತ್ತು ಐಜಿಪಿ ಪ್ರವೀಣ್ ಸೂದ್ ಅವರ ನಿರ್ದೇಶನದ ಮೇರೆಗೆ ಪೊಲೀಸರು, ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಬೆಂಗಳೂರಿನಿಂದಲೂ ಹಿರಿಯ ಅಧಿಕಾರಿಗಳು ಮಂಗಳೂರಿಗೆ ದೌಡಾಯಿಸಿದ್ದಾರೆ.

ಕುಕ್ಕರ್ ಬಾಂಬ್ ಹೊಂದಿದ್ದ ಶಂಕಿತನ ಬಳಿ ದೊರೆತ ಮೊಬೈಲ್ ಹಾಗೂ ಕೆಲವು ದಾಖಲೆಗಳನ್ನಾಧರಿಸಿ, ತಾಂತ್ರಿಕತೆಯ ಸಹಕಾರದೊಂದಿಗೆ ರಾತ್ರೋ ರಾತ್ರಿ ವಿವಿಧ ತಂಡಗಳಲ್ಲಿ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದರು. ಕುಕ್ಕರ್ ಬಾಂಬ್ ಹೊಂದಿದ್ದ ವ್ಯಕ್ತಿ ಮೈಸೂರಿನಿಂದ ಮಡಿಕೇರಿ ಮಾರ್ಗವಾಗಿ ಮಂಗಳೂರಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬಂದಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದಿದ್ದು ಆತ ಮೈಸೂರಿನ ಲೋಕನಾಯಕನಗರದಲ್ಲಿ ವಾಸವಿದ್ದ ವಿಳಾಸವೂ ಕೂಡ ಪತ್ತೆಯಾಗಿದೆ. ಅಲ್ಲದೇ, ಈತ ಸುರೇಂದ್ರ ಎಂಬ ಹೆಸರಿನ ಊಟಿ ವಿಳಾಸದ ಆಧಾರ್ ಕಾರ್ಡ್ ಆಧರಿಸಿ, ಕೊಯಮತ್ತೂರಿನಲ್ಲಿ ಸಿಮ್ ಪಡೆದಿರುವುದು ಕೂಡ ಗೊತ್ತಾಗಿದೆ ತಕ್ಷಣವೇ ಮೈಸೂರು ಹಾಗೂ ತಮಿಳುನಾಡು ಪೊಲೀಸರಿಗೆ ಮಾಹಿತಿ ರವಾನಿಸಿದ್ದು, ರಾತ್ರೋರಾತ್ರಿ ಮೈಸೂರು ಹಾಗೂ ತಮಿಳುನಾಡಿನ ಪೊಲೀಸರು ಕೂಡ ಕಾರ್ಯಪ್ರವೃತ್ತರಾಗಿದ್ದಾರೆ.



ಇದೊಂದು ಉಗ್ರರ ಕೃತ್ಯ: ಸಿಎಂ

ಬಳ್ಳಾರಿ, ನ. 20– ಮಂಗಳೂರು ಸ್ಫೋಟ ಪ್ರಕರಣದ ಪ್ರಾಥಮಿಕ ತನಿಖೆಯಲ್ಲಿ ಇದೊಂದು ಉಗ್ರರ ಕೃತ್ಯ ಎಂದು ತಿಳಿದುಬಂದಿದೆ. ಇದೊಂದು ವ್ಯವಸ್ಥಿತ ಜಾಲವಾಗಿದ್ದು, ಆ ಜಾಲವನ್ನು ಪತ್ತೆ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣ ಸಂಬಂಧ ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಯುತ್ತಿದೆ. ನಕಲಿ ಗುರುತಿನ ಚೀಟಿ, ನಕಲಿ ವಿಳಾಸ ಬಳಸಿ ಈ ಕೃತ್ಯ ನಡೆಸಲಾಗಿದೆ. ನಕಲಿ ವಿಳಾಸ ಹುಬ್ಬಳ್ಳಿಯದೆಂದು ಗೊತ್ತಾಗಿದೆ. ಎನ್‌ಐಎ, ಐಬಿ ಸ್ಥಳದಲ್ಲೇ ಬೀಡು ಬಿಟ್ಟಿದೆ, ಅವರ ಜಾಡನ್ನು ಹಿಡಿಯಲು ಎನ್‌ಐಎ, ತನಿಖೆ ಮುಂದುವರೆಸಿದೆ ಎಂದು ಹೇಳಿದ್ದಾರೆ.

ಉಗ್ರರು ಮಂಗಳೂರು, ಕೊಯಮತ್ತೂರಿನಲ್ಲಿ ಓಡಾಡಿರುವ ಶಂಕೆ ಇದೆ. ಇದೊಂದು ವ್ಯವಸ್ಥಿತ ಜಾಲ, ಆ ಜಾಲವನ್ನು ಪತ್ತೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ.



ಶಂಕಿತ ವ್ಯಕ್ತಿಯು ಶನಿವಾರ ಸಂಜೆ 4.30ರ ಸುಮಾರಿನಲ್ಲಿ ರೈಲ್ವೇ ನಿಲ್ದಾಣದಿಂದ ಬರುತ್ತಿದ್ದ ಪುರುಷೋತ್ತಮ್ ಎಂಬುವರ ಆಟೋವನ್ನು ನಾಗುರಿ ಎಂಬ ಸ್ಥಳದಲ್ಲಿ ಹತ್ತಿದ್ದಾನೆ. ತಾನು ಪಂಪ್‌ವೆಲ್‌ಗೆ ಹೋಗಬೇಕೆಂದು ಚಾಲಕನಿಗೆ ತಿಳಿಸಿದ್ದಾನೆ. ಆದರೆ, ಆಟೋ ಒಂದು ಕಿಲೋಮೀಟರ್ ಕ್ರಮಿಸುವಷ್ಟರಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡಿದೆ.

ಶನಿವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳೂರಿಗೆ ಭೇಟಿ ನೀಡಿ, ಸ್ವಾತಂತ್ರ್ಯ ಹೋರಾಟಗಾರ ಕೆದಂಬಾಡಿ ರಾಮಯ್ಯ ಗೌಡರು ಪ್ರತಿಮೆ ಉದ್ಘಾಟಿಸಿದ್ದರು. ಮುಖ್ಯಮಂತ್ರಿಗಳ ಮಂಗಳೂರು ಭೇಟಿ ವೇಳೆಯೇ ಬಾಂಬ್ ಸ್ಫೋಟಿಸಿ ದುಷ್ಕೃತ್ಯವೆಸಗಲು ಸಂಚು ರೂಪಿಸಲಾಗಿತ್ತು ಎಂದು ಶಂಕಿಸಲಾಗಿದೆ. ಶಂಕಿತ ವ್ಯಕ್ತಿ ಪಂಪ್‌ವೆಲ್‌ಗೆ ಹೋಗಬೇಕು ಎಂದು ಹೇಳಿದ್ದನ್ನು ಗಮನಿಸಿದಾಗ ಜನಸಂಚಾರ ಜಾಸ್ತಿ ಇರುವ ಪಂಪ್‌ವೆಲ್‌ನಲ್ಲಿ ಕೇರಳಕ್ಕೆ ಹೋಗುವ ವಾಹನಗಳು ಅಲ್ಲದೇ, ಹಾಸನ, ಪುತ್ತೂರು ಕಡೆಗೆ ಚಲಿಸುವ ವಾಹನಗಳು ಕೂಡ ಸಂಚರಿಸುತ್ತವೆ. ಹೀಗಾಗಿ ಜನ ಸಂದಣಿ ಹಾಗೂ ವಾಹನ ಸಂಚಾರ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಸ್ಫೋಟಿಸಲು ಕೊಂಡೊಯ್ಯುತ್ತಿದ್ದ ಕುಕ್ಕರ್ ಬಾಂಬ್ ಆಕಸ್ಮಿಕವಾಗಿ ಮಾರ್ಗಮಧ್ಯೆಯೇ ಸ್ಫೋಟಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಪ್ರಕರಣದ ತನಿಖೆಗಾಗಿ ಈಗಾಗಲೇ ಎನ್‌ಐಎ ಅಧಿಕಾರಿಗಳು ಮಂಗಳೂರಿಗೆ ಭೇಟಿ ನೀಡಿದ್ದಾರೆ. ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಇಂದು ಸಂಜೆ ಮಂಗಳೂರಿಗೆ ಆಗಮಿಸಿದ್ದು, ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿ ಮಾಡಿದ ನಂತರ ಸ್ಫೋಟ ನಡೆದ ಸ್ಥಳ ಪರಿಶೀಲನೆ ನಡೆಸಿ, ತನಿಖಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದ್ದಾರೆ.

ಮಂಗಳೂರು ಸ್ಫೋಟ 'ಒಂದು ಭಯೋತ್ಪಾದನಾ ಕೃತ್ಯ'

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸ್ಪಷ್ಟನೆ

ಬೆಂಗಳೂರು, ನ. 20– ಮಂಗಳೂರಿನಲ್ಲಿ ನಡೆದಿರುವ ಸ್ಫೋಟ ಆಕಸ್ಮಿಕವಲ್ಲ, ಭಯೋತ್ಪಾದನಾ ಕೃತ್ಯ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಪ್ರವೀಣ್ ಸೂದ್ ಟ್ವೀಟ್ ಮಾಡಿದ್ದಾರೆ.



ದೊಡ್ಡ ಮಟ್ಟದಲ್ಲಿ ಅಪಾಯವನ್ನುಂಟು ಮಾಡುವ ನಿಟ್ಟಿನಲ್ಲಿ ಈ ಕೃತ್ಯ ನಡೆದಿದೆ. ಕರ್ನಾಟಕ ಪೊಲೀಸರು ಸಮರ್ಥವಾಗಿ ತನಿಖೆ ನಡೆಸುತ್ತಿದ್ದಾರೆ. ಕೇಂದ್ರ ತನಿಖಾ ತಂಡದೊಂದಿಗೆ ರಾಜ್ಯ ಪೊಲೀಸರು ಜಂಟಿಯಾಗಿ ಎಲ್ಲಾ ಆಯಾಮಗಳಿಂದಲೂ ತನಿಖೆ ಮಾಡುತ್ತಿದ್ದಾರೆ ಎಂದಿದ್ದಾರೆ.

ಪ್ರೇಮ್‌ರಾಜ್‌ಗೆ ಸಂಬಂಧವಿಲ್ಲ: ಈ ಪ್ರಕರಣಕ್ಕೂ ಹುಬ್ಬಳ್ಳಿಯ ಪ್ರೇಮ್‌ರಾಜ್ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿರುವ ಪ್ರವೀಣ್ ಸೂದ್, ಪ್ರೇಮ್ ರಾಜ್ ತಮ್ಮ ದಾಖಲೆಗಳನ್ನು ಕಳೆದುಕೊಂಡಿದ್ದರು. ಅದನ್ನು ಆರೋಪಿ ಬಳಸಿಕೊಂಡಿದ್ದಾನೆ ಎಂದು ಅವರು ತಿಳಿಸಿದ್ದಾರೆ.

ಮಂಗಳೂರು ಸ್ಫೋಟದ ಶಂಕಿತನ ಆಧಾರ್ ಅಸಲಿ ಪ್ರೇಮ್‌ರಾಜ್ ಸ್ಪಷ್ಟನೆ

ಎರಡು ಬಾರಿ 'ಆಧಾರ್' ಕಳೆದುಕೊಂಡಿದ್ದೆ; 'ಆಧಾರ್' ನನ್ನದು, ಆದರೆ ಫೋಟೋ ನನ್ನದಲ್ಲ!

ತುಮಕೂರು, ನ 20– ಮಂಗಳೂರಿನಲ್ಲಿ ಸ್ಫೋಟ ನಡೆಸಿರುವ ವ್ಯಕ್ತಿ ಬಳಿ ಇದ್ದ ಪ್ರೇಮ್‌ರಾಜ್ ಹೆಸರಿನ ಆಧಾರ್ ಕಾರ್ಡ್‌ನ ಅಸಲಿ ಪ್ರೇಮ್‌ರಾಜ್ ಅವರನ್ನು ಪೊಲೀ ಸರು ತುಮಕೂರಿನಲ್ಲಿ ಪತ್ತೆ ಹಚ್ಚಿದ್ದಾರೆ.



ಹುಬ್ಬಳ್ಳಿ ಮೂಲದ ಪ್ರೇಮರಾಜ್ ಹುಟಗಿ ಮಾಧ್ಯಮದೊಂದಿಗೆ ಮಾತನಾಡಿ, ನಾನು ತುಮಕೂರಿನಲ್ಲಿ ರೈಲ್ವೇ ಟ್ರ್ಯಾಕ್ ಮೈನ್ಟೈನರ್ ಆಗಿ ಕೆಲಸ ಮಾಡಿಕೊಂಡಿದ್ದು, ಸದ್ಯ ತುಮಕೂರಿನ ಹಿರೇಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುವುದಾಗಿ ತಿಳಿಸಿದ್ದಾರೆ. ಕಳೆದ 2 ವರ್ಷಗಳಲ್ಲಿ 2 ಬಾರಿ ಆಧಾರ್ ಕಾರ್ಡ್ ಅನ್ನು ಕಳೆದುಕೊಂಡಿದ್ದೇನೆ. ಮೊದಲ ಸಲ ಧಾರವಾಡದಿಂದ ಬೆಳಗಾವಿಗೆ ಬಸ್‌ನಲ್ಲಿ ಹೋಗುತ್ತಿದ್ದ ವೇಳೆ ಕಳೆದುಕೊಂಡಿದ್ದು, ಬಳಿಕ ಮತ್ತೊಂದು ಆಧಾರ್ ಕಾರ್ಡ್ ಪಡೆದಿದ್ದೆ. ಅದನ್ನು ಕಳೆದ 6 ತಿಂಗಳ ಹಿಂದೆ ಹುಬ್ಬಳ್ಳಿಯಿಂದ ತುಮಕೂರಿಗೆ ಬಸ್‌ನಲ್ಲಿ ಬರುತ್ತಿದ್ದ ವೇಳೆ ಕಳೆದುಕೊಂಡಿದ್ದೆ ಎಂದು ತಿಳಿಸಿದ್ದಾರೆ.

ಶನಿವಾರ ರಾತ್ರಿಯೇ ನನಗೆ ಕಾನೂನು ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್ ಕರೆ ಮಾಡಿ, ತುಮಕೂರು ಎಸ್‌ಪಿಯನ್ನು ಸಂಪರ್ಕಿಸುವಂತೆ ಸೂಚಿಸಿದ್ದರು. ಅದರಂತೆ ತುಮಕೂರು ಎಸ್‌ಪಿ ರಾಹುಲ್ ಕುಮಾರ್ ಶಹಪುರ್‌ವಾಡ್ ಅವರನ್ನು ಸಂಪರ್ಕಿಸಿದೆ. ನಿನ್ನೆ ನಮ್ಮ ಮನೆಗೆ ಪೊಲೀಸರು ಬಂದು ಪರಿಶೀಲನೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿದ ಪ್ರೇಮ್‌ರಾಜ್, ನನ್ನ ಹೆಸರನ್ನು ಈ ರೀತಿಯಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ನನಗೂ ಮಂಗಳೂರಿನಲ್ಲಿ ನಡೆದಿರುವ ಘಟನೆಗೂ ಯಾವುದೇ ಸಂಬಂಧವಿಲ್ಲ. ಅಧಿಕಾರಿಗಳಿಗೆ ದೊರೆತಿರುವ ಆಧಾರ್ ಕಾರ್ಡ್‌ನಲ್ಲಿ ನನ್ನ ವಿಳಾಸ ಇದೆ. ಆದರೆ ಫೋಟೋ ನನ್ನದಲ್ಲ. ನನಗೂ ಈ ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲ. ನನಗೆ ಯಾವುದೇ ಭಯವಿಲ್ಲ. ಪೊಲೀಸರು ಎಲ್ಲಿಗೆ ಬರಬೇಕು ಎಂದು ಹೇಳುತ್ತಾರೋ ಅಲ್ಲಿಗೆ ನಾನು ಬರುತ್ತೇನೆ ಎಂದು ತಿಳಿಸಿದ್ದಾರೆ.

ನನ್ನ ಮಗನಿಗೂ, ಸ್ಫೋಟಕ್ಕೂ ಸಂಬಂಧವಿಲ್ಲ

● ಪ್ರೇಮ್‌ರಾಜ್ ಪೋಷಕರ ಸ್ಪಷ್ಟನೆ ● ನಮ್ಮ ಮಗನ 'ಆಧಾರ್' ಕಳೆದುಹೋಗಿದೆ; ಅದಕ್ಕೆ ಬೇರೆ ಫೋಟೋ ಅಂಟಿಸಿ ಕುಕೃತ್ಯ

ಹುಬ್ಬಳ್ಳಿ, ನ. 20– ತಮ್ಮ ಪುತ್ರ ಪ್ರೇಮ್‌ರಾಜ್‌ಗೂ ಮಂಗಳೂರು ಸ್ಫೋಟಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಆತನ ಪೋಷಕರು ತಿಳಿಸಿದ್ದಾರೆ. ಕಳೆದ 6 ತಿಂಗಳ ಹಿಂದೆ ತಮ್ಮ ಪುತ್ರ, ತನ್ನ ಆಧಾರ್ ಕಾರ್ಡ್ ಅನ್ನು ಕಳೆದುಕೊಂಡಿದ್ದು, ಅದನ್ನು ದುರುಪಯೋಗಪಡಿಸಿ ಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಆಧಾರ್ ಕಾರ್ಡ್ ಪ್ರೇಮ್‌ರಾಜ್‌ನದ್ದೇ ಆಗಿದ್ದರೂ ಅದರಲ್ಲಿ ಇರುವ ಫೋಟೋ ಆತನದ್ದಲ್ಲ. ಆಧಾರ್ ಕಾರ್ಡ್ ಮೇಲೆ ಬೇರೆ ಫೋಟೋವನ್ನು ಹಾಕಲಾಗಿದೆ. ತಮ್ಮ ಮಗ ಆಧಾರ್ ಕಾರ್ಡ್ ಕಳೆದುಕೊಂಡಾಗ ಪೊಲೀಸರಿಗೆ ದೂರು ಸಲ್ಲಿಸಿಲ್ಲ ಎಂದಿರುವ ಪೋಷಕರು, ಮಗ ರೈಲ್ವೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಕಳೆದ 6 ವರ್ಷದಿಂದ ತುಮಕೂರಿನಲ್ಲಿ ಟ್ರ್ಯಾಕ್ ನಿರ್ವಹಕರಾಗಿ ಕೆಲಸ ಮಾಡುತ್ತಿದ್ದಾನೆ. ಈಗಲೂ ತುಮಕೂರಿನಲ್ಲೇ ಇದ್ದಾನೆ ಎಂದು ತಿಳಿಸಿದ್ದಾರೆ. ನಿನ್ನೆ ಸಂಜೆ 7.30ರ ಸುಮಾರಿನಲ್ಲಿ ನಮ್ಮ ಮನೆಗೆ ಪೊಲೀಸ್ ಅಧಿಕಾರಿಗಳು ಬಂದಿದ್ದರು. ಆಗ ನಮಗೆ ಮಂಗಳೂರಿನ ಸ್ಫೋಟದ ಬಗ್ಗೆ ಗೊತ್ತಿರಲಿಲ್ಲ. ಮಗನ ಬಗ್ಗೆ ವಿಚಾರಿಸಿದರು. ಆತನ ಎಲ್ಲಾ ವಿವರಗಳನ್ನು ನೀಡಿದ್ದೇವೆ ಎಂದು ಪ್ರೇಮ್‌ರಾಜ್ ತಂದೆ ತಿಳಿಸಿದ್ದಾರೆ.

ಸ್ಫೋಟಕ ಬೇರೆಡೆ ಸಾಗಿಸುವಾಗ ಸ್ಫೋಟ

ಎಡಿಜಿಪಿ ಅಲೋಕ್‌ಕುಮಾರ್ ವಿವರಣೆ

ಬೆಂಗಳೂರು, ನ. 20– ಮಂಗಳೂರಿನಲ್ಲಿ ಶನಿವಾರ ಸಂಜೆ ಆಟೋದಲ್ಲಿ ನಡೆದಿರುವ ಸ್ಫೋಟ ಭಯೋತ್ಪಾದನಾ ಕೃತ್ಯ ಎಂದು ತಿಳಿಸಿರುವ ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು, ಸ್ಫೋಟಕವನ್ನು ಬೇರೆ ಕಡೆ ಕೊಂಡೊಯ್ದು ಸ್ಫೋಟಿಸುವ ಉದ್ದೇಶ ಆತನದ್ದಾಗಿತ್ತು. ಆದರೆ, ಆಕಸ್ಮಿಕವಾಗಿ ಅದು ಆಟೋದಲ್ಲೇ ಸ್ಫೋಟಗೊಂಡಿದೆ ಎಂದರು.

ಮಂಗಳೂರಿಗೆ ತೆರಳುವ ಮುನ್ನ ಇಂದು ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎಂಬುದರ ಬಗ್ಗೆ ಸಾಕಷ್ಟು ಮಾಹಿತಿಗಳು ದೊರೆತಿವೆ. ಆರೋಪಿಗೆ ಎಲ್ಲೆಲ್ಲಿ ಲಿಂಕ್ ಇತ್ತು ಎಂಬುದರ ಬಗ್ಗೆಯೂ ಮಾಹಿತಿ ದೊರೆತಿದ್ದು, ನಮ್ಮ ವಿಶೇಷ ತಂಡಗಳು ಅಲ್ಲಿಗೆಲ್ಲಾ ತೆರಳಿವೆ ಎಂದು ಹೇಳಿದರು.

ಆರೋಪಿಗೆ ಶೇ. 45ರಷ್ಟು ಸುಟ್ಟ ಗಾಯಗಳಾಗಿದ್ದು, ಆತ ಮಾತನಾಡುವ ಸ್ಥಿತಿಯಲ್ಲಿಲ್ಲ ಎಂದ ಅವರು, ಆತನ ಗುರುತು ಖಚಿತಪಡಿಸಿಕೊಳ್ಳಲು ಸಂಬಂಧಿಕರನ್ನು ಕರೆತಂದಿದ್ದೇವೆ. ಅವರು ಗುರುತಿಸಿದ ನಂತರ ಆರೋಪಿ ಯಾರು ಎಂಬುದನ್ನು ನಾವು ಖಚಿತಪಡಿಸುತ್ತೇವೆ ಎಂದ ಅವರು, ಪ್ರಶ್ನೆಯೊಂದಕ್ಕೆ ಉತ್ತರಿಸಿ ತರಾತುರಿಯಲ್ಲಿ ಏನನ್ನೂ ಹೇಳಲು ಸಾಧ್ಯವಿಲ್ಲ. 12ರಿಂದ 15 ಗಂಟೆ ನಂತರ ಹೇಳುತ್ತೇವೆ. ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಯುತ್ತಿದ್ದು, ಕೇಂದ್ರದ ಅಧಿಕಾರಿಗಳೊಂದಿಗೆ ಸಂಪರ್ಕ ವಿಟ್ಟುಕೊಂಡು ಸಮನ್ವಯತೆಯಿಂದ ತನಿಖೆ ನಡೆಯುತ್ತಿದೆ ಎಂದರು.

ಬಾಳಗೋಡುವಿನಲ್ಲಿ ಕೊಡವ ನಮ್ಮೆ ಸಮಾರೋಪ

ವಿಜೇತ ತಂಡಗಳಿಗೆ ಬಹುಮಾನ ವಿತರಣೆ





ಮಡಿಕೇರಿ, ನ.20– ಕೊಡವರು ತಮ್ಮ ಒಗ್ಗಟ್ಟನ್ನು ಕಾಪಾಡುವ ಮೂಲಕ ಶ್ರೀಮಂತ ಸಂಸ್ಕೃತಿಯನ್ನು ಬೆಳೆಸಲು ಪಣ ತೊಡಬೇಕು ಎಂದು ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಕರೆ ನೀಡಿದ್ದಾರೆ.

ಕಳೆದ 4 ದಿನಗಳಿಂದ ವಿರಾಜಪೇಟೆಯ ಬಾಳುಗೋಡಿನಲ್ಲಿ ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ನಡೆಯುತ್ತಿದ್ದ 'ಕೊಡವ ನಮ್ಮೆ' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕೊಡವರು ಒಗ್ಗಟ್ಟನ್ನು ಕಾಯ್ದುಕೊಳ್ಳುವ ಮೂಲಕ ಕೊಡವ ಆಚಾರ, ವಿಚಾರ, ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಪಣ ತೊಡಬೇಕು. ಕೊಡವ ಸಮುದಾಯ ಅತ್ಯಂತ ಚಿಕ್ಕದಾಗಿದ್ದು, ಕೊಡವರ ಸಂಖ್ಯೆ ಹೆಚ್ಚಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಮಾಜಿ ಸಚಿವ ಮೇರಿಯಂಡ ಸಿ.ನಾಣಯ್ಯ ಮಾತನಾಡಿ, ಸರ್ಕಾರ ನೀಡಿರುವ ರೂ.10 ಕೋಟಿ ಅನುದಾನದಲ್ಲಿ 6 ಕೋಟಿ ಬಾಳುಗೋಡು ಕೊಡವ ಸಮಾಜ, 3 ಕೋಟಿ 31 ಕೊಡವ ಸಮಾಜಗಳಿಗೆ ಮತ್ತು 1 ಕೋಟಿ ರೂ. ಭಾಗಮಂಡಲದ ಕೊಡವ ಸಮುದಾಯ ಭವನಕ್ಕೆ ಹಂಚಿಕೆಯಾಗಲಿದೆ ಎಂದು ತಿಳಿಸಿದರು. ಸ್ವಾಭಿಮಾನಿ ಕೊಡವರು ಒಗ್ಗಟ್ಟನ್ನು ಪ್ರದರ್ಶಿಸುವ ಅಗತ್ಯವಿದೆ. ಸರ್ಕಾರ ನೀಡಿದ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಕೊಡವ ಸಮುದಾಯ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಂತೆ ಸಲಹೆ ನೀಡಿದರು.

ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಮಾತನಾಡಿ, ಎಲ್ಲಾ 34 ಕೊಡವ ಸಮಾಜಗಳು ಹಾಗೂ ದಾನಿಗಳ ಸಹಕಾರದಿಂದ ನಾಲ್ಕು ದಿನಗಳ 'ಕೊಡವ ನಮ್ಮೆ' ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ಕಾರ್ಯಕ್ರಮ ಮಾಡಿದರೂ ಇದೇ ರೀತಿಯ ಒಗ್ಗಟ್ಟು ಮತ್ತು ಸಹಕಾರವನ್ನು ನೀಡಬೇಕೆಂದು ಮನವಿ ಮಾಡಿದರು.

ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ, ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಮಲ್ಲೇಂಗಡ ದಾದಾ ಬೆಳ್ಯಪ್ಪ ಕ್ರೀಡಾ ಸಮಿತಿಯ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ, ಆಹಾರ ಸಮಿತಿಯ ಅಧ್ಯಕ್ಷ ಕುಂಬೇರನ ಮನುಕುಮಾರ್, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಕಾಳಿಮಾಡ ಮೋಟಯ್ಯ, ಒಕ್ಕೂಟದ ಖಜಾಂಚಿ ಚಿರಿಯಪಂಡ ಕಾಶಿಯಪ್ಪ, ಉಪಾಧ್ಯಕ್ಷರುಗಳಾದ ಮಾಳೇಟಿರ ಅಭಿಮನ್ಯು ಕುಮಾರ್, ಕರವಟ್ಟಿರ ಪೆಮ್ಮಯ್ಯ, ಮಾಲಚಿರ ಬೋಸ್ ಚಿಟ್ಟಿಯಪ್ಪ ಉಪಸ್ಥಿತರಿದ್ದರು.

ಕೊಡವ ನಮ್ಮೆ ಅಂಗವಾಗಿ ಆಯೋಜಿತ ಹಾಕಿ ಪಂದ್ಯಾವಳಿಯಲ್ಲಿ ಮೂರ್ನಾಡು ಕೊಡವ ಸಮಾಜ ಗೆಲುವು ಸಾಧಿಸಿದ್ದು, ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕೊಡವ ನಮ್ಮೆಯ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ 9 ಸ್ಪರ್ಧೆಗಳಲ್ಲಿ ಬಹುಮಾನ ಗೆಲ್ಲುವ ಮೂಲಕ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು. ಮೈಸೂರು ಕೊಡವ ಸಮಾಜ 6 ಸ್ಪರ್ಧೆಗಳಲ್ಲಿ ಬಹುಮಾನ ಗೆದ್ದು ದ್ವಿತೀಯ ಸ್ಥಾನ ಹಾಗೂ ಮಡಿಕೇರಿ, ನಾಪೋಕ್ಲು ಮತ್ತು ಪೊನ್ನಂಪೇಟೆ ಕೊಡವ ಸಮಾಜಗಳು ತಲಾ ಎರಡು ಸ್ಪರ್ಧೆಗಳಲ್ಲಿ ಬಹುಮಾನ ಗೆದ್ದು ತೃತೀಯ ಸ್ಥಾನ ಗಳಿಸಿತು.

ಉಮ್ಮತ್ತಾಟ್ ಸ್ಪರ್ಧೆಯಲ್ಲಿ ಮಡಿಕೇರಿ ಕೊಡವ ಸಮಾಜ ಪ್ರಥಮ, ಮೈಸೂರು ಕೊಡವ ಸಮಾಜ ದ್ವಿತೀಯ ಹಾಗೂ ಬೆಂಗಳೂರು ಕೊಡವ ಸಮಾಜ ತೃತೀಯ ಬಹುಮಾನ ಪಡೆದುಕೊಂಡಿತು.

ಕೋಲಾಟ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಪ್ರಥಮ, ಮಡಿಕೇರಿ ಕೊಡವ ಸಮಾಜ ದ್ವಿತೀಯ ಹಾಗೂ ವಿರಾಜಪೇಟೆ ಕೊಡವ ಸಮಾಜ ತೃತೀಯ ಬಹುಮಾನ ಗಳಿಸಿತು.

ಬೊಳಕಾಟ್ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಪ್ರಥಮ, ಮೈಸೂರು ಕೊಡವ ಸಮಾಜ ದ್ವಿತೀಯ ಹಾಗೂ ನಾಪೋಕ್ಲು ಕೊಡವ ಸಮಾಜ ತೃತೀಯ ಸ್ಥಾನ ಪಡೆದುಕೊಂಡಿತು.

ಕತ್ತಿಯಾಟ್ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಪ್ರಥಮ, ಮೈಸೂರು ಕೊಡವ ಸಮಾಜ ದ್ವಿತೀಯ ಹಾಗೂ ಪೊನ್ನಂಪೇಟೆ ಕೊಡವ ಸಮಾಜ ತೃತೀಯ ಬಹುಮಾನ ಗಳಿಸಿತು.

ಬಾಳೋಪಾಟ್ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಪ್ರಥಮ, ಮೂರ್ನಾಡು ಕೊಡವ ಸಮಾಜ ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ಮಕ್ಕಂದೂರು ಕೊಡವ ಸಮಾಜ ಪಡೆದುಕೊಂಡಿತು.


ತಾಲಿಪಾಟ್ ಸ್ಪರ್ಧೆಯಲ್ಲಿ ವಿರಾಜಪೇಟೆ ಕೊಡವ ಸಮಾಜ ಪ್ರಥಮ, ಬೆಂಗಳೂರು ಕೊಡವ ಸಮಾಜ ದ್ವಿತೀಯ ಹಾಗೂ ಮೈಸೂರು ಕೊಡವ ಸಮಾಜ ತೃತೀಯ ಬಹುಮಾನ ಪಡೆದುಕೊಂಡಿತು.

ಸಮ್ಮಂದ ಅಡಕವೊ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಪ್ರಥಮ, ಮೈಸೂರು ಕೊಡವ ಸಮಾಜ ದ್ವಿತೀಯ ಹಾಗೂ ಚೆಯ್ಯಂಡಾಣೆ ಕೊಡವ ಸಮಾಜ ತೃತೀಯ ಬಹುಮಾನ ಗಳಿಸಿತು. ಪರಿಯಕಳಿ ಸ್ಪರ್ಧೆಯಲ್ಲಿ ಬೆಂಗಳೂರು ಕೊಡವ ಸಮಾಜ ಪ್ರಥಮ, ನಾಪೋಕ್ಲು ಕೊಡವ ಸಮಾಜ ದ್ವಿತೀಯ ಹಾಗೂ ಶ್ರೀಮಂಗಲ ಕೊಡವ ಸಮಾಜ ತೃತೀಯ ಬಹುಮಾನ ಪಡೆಯಿತು.

ಕಪ್ಪೆಯಾಟ್ ಸ್ಪರ್ಧೆಯಲ್ಲಿ ಬಿರುನಾಣಿ ಕೊಡವ ಸಮಾಜದ ಕರ್ತಮಾಡ ಅಯ್ಯಪ್ಪ, ಪೊನ್ನಂಪೇಟೆ ಕೊಡವ ಸಮಾಜದ ನೆಲ್ಲಮಾಡ ಸಿದ್ದಾರ್ಥ ಹಾಗೂ ಬೆಂಗಳೂರು ಕೊಡವ ಸಮಾಜದ ತಂಬುಕುತ್ತಿರ ಆಕಾಶ್ ಪ್ರಥಮ ಬಹುಮಾನ ಪಡೆದುಕೊಂಡರು. ಸ್ಪರ್ಧಾ ವಿಜೇತ ತಂಡಗಳಿಗೆ ಗಣ್ಯರು ಬಹುಮಾನ ವಿತರಿಸಿ ಶುಭ ಹಾರೈಸಿದರು.

ಸಿಮೆಂಟ್ ಕಂಬದ ಬೇಲಿ ನಡುವೆ ಸಿಲುಕಿದ ಕಾಡಾನೆ

ಕುಶಾಲನಗರ/ ಮಡಿಕೇರಿ, ನ.20– ಬೃಹತ್ ಗಾತ್ರದ ಕಾಡಾನೆಯೊಂದು ಸಿಮೆಂಟ್ ಕಂಬಗಳ ಬೇಲಿಯ ನಡುವೆ ಸಿಲುಕಿ ಪಡಿಪಾಟಲು ಪಟ್ಟ ಕುತೂಹಲಕಾರಿ ಘಟನೆ



ತೊಂಡೂರು ಗ್ರಾಮದಿಂದ ವರದಿಯಾಗಿದೆ.

ಕುಶಾಲನಗರ–ಸುಂಟಿಕೊಪ್ಪ ಮುಖ್ಯ ರಸ್ತೆಯಲ್ಲಿ ಕಾಣುವ ಆನೆಕಾಡು ರಕ್ಷಿತಾರಣ್ಯ ವ್ಯಾಪ್ತಿಯ ತೊಂಡೂರು ಗ್ರಾಮದಲ್ಲಿ, ಕಾಡಾನೆಗಳ ನಿಯಂತ್ರಣಕ್ಕೆ ಸಿಮೆಂಟ್ ಕಂಬಗಳ ಬೇಲಿ ಅಳವಡಿಸಲಾಗಿದೆ. ಈ ವ್ಯಾಪ್ತಿಗೆ ದಾಳಿ ಇಟ್ಟ ಕಾಡಾನೆಗಳು ಸಿಮೆಂಟ್ ಬೇಲಿ ದಾಟುವ ಪ್ರಯತ್ನ ನಡೆಸಿ ವಿಫಲವಾದರೆ, ಹೆಣ್ಣಾನೆಯೊಂದು ತನ್ನ ಈ ಪ್ರಯತ್ನದ ಸಂದರ್ಭ ಎರಡು ಸಿಮೆಂಟ್ ಕಂಬಗಳ ನಡುವೆ ಸಿಲುಕಿಕೊಂಡಿದೆ. ವಿಷಯ ಅರಿತ ಅರಣ್ಯ ಇಲಾಖಾ ಅಧಿಕಾರಿ, ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಪರಿಸ್ಥಿತಿ ಅವಲೋಕಿಸಿ, ಜೆಸಿಬಿ ಮೂಲಕ ಹೆಣ್ಣಾನೆಯ ರಕ್ಷಣೆ ಮಾಡುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಈ ವೇಳೆ ಇತರೆ ಆನೆಗಳ ಹಿಂಡು ಅರಣ್ಯ ಸಿಬ್ಬಂದಿಗಳ ಮೇಲೆ ದಾಳಿಗೆ ಮುಂದಾಗಿ ಕಾರ್ಯಾಚರಣೆಗೆ ಅಡ್ಡಿಪಡಿಸಿವೆ.

ಅನ್ಯ ಮಾರ್ಗ ತೋಚದೆ ಅರಣ್ಯ ಇಲಾಖಾ ಸಿಬ್ಬಂದಿ 4 ಟಿನ್ ಅಡುಗೆ ಎಣ್ಣೆ ಮತ್ತು ಸರ್ಫ್‌ಪುಡಿ ಬೆರೆಸಿದ ನೀರನ್ನು ಸಿಮೆಂಟ್ ಕಂಬದ ನಡುವೆ ಸಿಲುಕಿದ್ದ ಆನೆಯ ಮೇಲೆ ಸುರಿದಿದ್ದಾರೆ. ಜಾರಿಕೆಯ ಎಣ್ಣೆ ಮತ್ತು ಸರ್ಫ್‌ನಿಂದ ಹೆಣ್ಣಾನೆ ಕಂಬಗಳ ನಡುವಿನಿಂದ ಹೊರ ಬರುವ ಮೂಲಕ ಸಂಕಷ್ಟ ಬಗೆಹರಿದಿದೆ. ಗಂಟೆಗಳ ಕಾಲ ಕಂಬಗಳ ನಡುವೆ ಸಿಲುಕಿ ಆಕ್ರೋಶಗೊಂಡಿದ್ದ ಹೆಣ್ಣಾನೆ ಅರಣ್ಯ ಸಿಬ್ಬಂದಿಗಳ ಮೇಲೆ ದಾಳಿಗೆ ಮುಂದಾಗಿ ಕೆಲಕಾಲ ಆತಂಕ ಮೂಡಿಸಿತ್ತಾದರೂ, ನಂತರ ಇತರೆ ಆನೆಗಳೊಂದಿಗೆ ಕಾಡಿಗೆ ಮರಳಿದೆ. ಕಾರ್ಯಾಚರಣೆಯಲ್ಲಿ ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ, ಆರ್‌ಎಫ್‌ಓಗಳಾದ ರಂಜನ್, ಅನಿಲ್ ಡಿಸೋಜ, ಸುಬ್ರಾಯ, ದೇವಯ್ಯ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಲಾಭದಲ್ಲಿ ಕೊಡಗಿನ ಶೇ.90ರಷ್ಟು ಸಹಕಾರ ಸಂಘಗಳು

ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಮನು ಮುತ್ತಪ್ಪ



ನಾಪೋಕ್ಲು, ನ.20– ಕೊಡಗು ಜಿಲ್ಲೆಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯುತ್ತಿವೆ. ಈ ಪ್ರಾತಿಯನ್ನು ಉಳಿಸಿಕೊಂಡು ಹೋಗುವುದರ ಜೊತೆಗೆ ಸಹಕಾರ ಸಂಘಗಳನ್ನು ಬಲಪಡಿಸಬೇಕಿದೆ ಎಂದು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎ.ಕೆ.ಮನು ಮುತ್ತಪ್ಪ ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ, ಕೊಡಗು ಜಿಲ್ಲಾ ಸಹಕಾರಿ ಯೂನಿಯನ್ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಬೆಟ್ಟಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕಾರುಗುಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಚೇರಂಬಾಣೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಬೆಟ್ಟಗೇರಿ ಉದಯ ವಿದ್ಯಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯಪೂರ್ವದಲ್ಲಿ ದೇಶದ ಅಭಿವೃದ್ಧಿ ಕುಂಠಿತವಾಗಿದ್ದು ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಏಷ್ಯಾ ಖಂಡದಲ್ಲಿ ಪ್ರಪ್ರಥಮವಾಗಿ 1905 ಮೇ 8ರಂದು ಕರ್ನಾಟಕದ ಗದಗಿನಿಂದ ಮೊದಲ ಸಹಕಾರ ಚಳವಳಿ ಆರಂಭವಾಯಿತು. 1905ರ ಮೇ 22ರಲ್ಲಿ ಕೊಡಗಿನ ಶಾಂತಳ್ಳಿಯ ತಲ್ತರೆ ಶೆಟ್ಟಳ್ಳಿಯಲ್ಲಿ ದೊಡ್ಡಯ್ಯ ಎಂಬವರು ಮೊದಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಪ್ರಾರಂಭಗೊಳಿಸಿದ್ದು, ಸಹಕಾರ ಕ್ಷೇತ್ರದಲ್ಲಿ ಮೈಲುಗಲ್ಲು ಆಗಿ ನಂತರದ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸಹಕಾರ ಸಂಘಗಳು ಆರಂಭಗೊಂಡು ಸಾರ್ವಜನಿಕ ಬ್ಯಾಂಕುಗಳಿಗಿಂತ ಭಿನ್ನವಾಗಿ ಕಾರ್ಯನಿರ್ವಹಿಸಿ ರೈತರ ಅಭಿವೃದ್ಧಿಗೆ ಸಹಕರಿಸುತ್ತಿವೆ ಎಂದರು.

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೆರ ಪಿ.ಬಾಂಡ್ ಗಣಪತಿ ಮಾತನಾಡಿ, ಸಹಕಾರ ಸಂಘದಿಂದ ದೊರಕುವ ಸೌಲಭ್ಯಗಳು ಮತ್ತು ಅದರ ಸದುಪಯೋಗವನ್ನು ಪಡೆದುಕೊಂಡು ಸಂಘದ ಶ್ರೇಯೋಭಿವೃದ್ಧಿಗೆ ಕಾರಣೀಭೂತರಾಗಬೇಕೆಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಬೆಟ್ಟಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ತಳೂರು ಎ.ಕಿಶೋರ್ ಕುಮಾರ್ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಯಾಡಿದರು.

ಈ ಸಂದರ್ಭ ಕಾರುಗುಂದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಪಂಡ ರ‍್ಯಾಲಿ ಮಾದಯ್ಯ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಉಪಾಧ್ಯಕ್ಷ ಕೆಟ್ಟೋಳಿರ ಹರೀಶ್ ಪೂವಯ್ಯ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಹೊಸೂರು ಜೆ. ಸತೀಶ್‌ಕುಮಾರ್, ನಿರ್ದೇಶಕರಾದ ಕಿಮ್ಮುಡಿರ ಜಗದೀಶ್, ಕನ್ನಂಡ ಸಂಪತ್, ನಂದಿನೆರವಂಡ ಎ.ರವಿ ಬಸಪ್ಪ, ವಾಂಚೀರ ಕೆ.ಅಜಯ್ ಕುಮಾರ್, ಎನ್.ಎಂ.ಉಮೇಶ್ ಉತ್ತಪ್ಪ ಬಾಚರಣಿಯಂಡ ಸುಮನ್, ಉದಯ ವಿದ್ಯಾ ಮುಖ್ಯಶಿಕ್ಷಕಿ ಎಂ.ಪಿ.ಕವಿತಾ, ಕೊಡಗು ಯೂನಿಯನ್, ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಸಿಬ್ಬಂದಿಗಳು. ಉದಯ ವಿದ್ಯಾ ಸಂಸ್ಥೆ ಆಡಳಿತ ಮಂಡಳಿ ಶಿಕ್ಷಕರ ಸಿಬ್ಬಂದಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿಗಳನ್ನು ಸನ್ಮಾನಿಸಲಾಯಿತು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೆರ ಪಿ ಬಾಂಡ್ ಗಣಪತಿ, ಬೆಟಗೇರಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಎಡಿಕೇರಿ ವಾಸುದೇವ, ಕೊಡಗು ಏಲಕ್ಕಿ ಸಹಕಾರ ಸಂಘದ ಅಧ್ಯಕ್ಷ ಸೂದನ ಈರಪ್ಪ, ಕಾರುಗುಂದ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕಿ ಪೊಡಲೋಳಂಡ ತುಳಸಿ ಬೊಳ್ಳವ್ವ, ಚೇರಂಬಾಣೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಎಂ.ಕೆ. ವಸಂತ ಅವರನ್ನು ಶಾಲು ಹೊದಿಸಿ ಕಿರು ಕಾಣಿಕೆ ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಶಿಕ್ಷಕಿ ಜಯಶ್ರೀ ಪ್ರಾರ್ಥಿಸಿ, ಜಿಲ್ಲಾ ಯೂನಿಯನ್ ವ್ಯವಸ್ಥಾಪಕಿ ಮಂಜುಳಾ ನಿರೂಪಿಸಿದರು. ವಿದ್ಯಾರ್ಥಿಗಳು ಸಹಕಾರ ಮತ್ತು ರೈತ ಗೀತೆ ಹಾಡಿ, ಶಿಕ್ಷಕ ಹೇಮಂತ್ ವಂದಿಸಿದರು.

ನ.26ರಂದು ಹಿರಿಯ ನಾಗರಿಕರ ವೇದಿಕೆಯ ವಾರ್ಷಿಕ ಸಾಮಾನ್ಯ ಸಭೆ

ಮಡಿಕೇರಿ, ನ.20– ಹಿರಿಯ ನಾಗರಿಕರ ವೇದಿಕೆಯ ವಾರ್ಷಿಕ ಸಾಮಾನ್ಯ ಸಭೆಯು ನ.26 ರಂದು ಬೆಳಗ್ಗೆ 11 ಗಂಟೆಗೆ ನಗರದ ಬಾಲಭವನದಲ್ಲಿ ವೇದಿಕೆಯ ಅಧ್ಯಕ್ಷ ಕೊಂಗಂಡ ಎ.ತಿಮ್ಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸದಸ್ಯರು ಮಾತ್ರ ಆಗಮಿಸುವಂತೆ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷರು ಕೋರಿದ್ದಾರೆ.

ಜಿಲ್ಲಾ ಪೊಲೀಸ್ ಕ್ರೀಡಾಕೂಟ ಉದ್ಘಾಟನೆ



ಚಾಮರಾಜನಗರ, ನ20– ಮೂರು ದಿನಗಳ ಕಾಲ ನಡೆಯಲಿರುವ ಚಾಮರಾಜನಗರ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ನಗರದಲ್ಲಿ ಇಂದು ಚಾಲನೆ ದೊರೆಯಿತು.

ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿಂದು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 25ನೇ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ಪಾರಿವಾಳ ಹಾಗೂ ಬಲೂನ್‌ಗಳನ್ನು ಹಾರಿಬಿಡುವ ಮೂಲಕ ಉದ್ಘಾಟಿಸಿ ಕ್ರೀಡಾಜ್ಯೋತಿಯನ್ನು ಸ್ವೀಕರಿಸಿದರು.

ಇದೇ ವೇಳೆ ಕ್ರೀಡಾಕೂಟವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಭಾರತಿ ಅವರು, ಪೊಲೀಸ್ ಇಲಾಖೆಯಲ್ಲಿ ಪ್ರತಿನಿತ್ಯ ಒತ್ತಡದಲ್ಲಿ ಕೆಲಸ ನಿರ್ವಹಿಸುವ ಪೊಲೀಸರ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯ ಹೆಚ್ಚಿಸಲು ಕ್ರೀಡೆ ಸಹಕಾರಿಯಾಗಲಿದೆ ಎಂದರು.

ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಪುರುಷರ ಹಾಗೂ ಮಹಿಳೆಯರ 200 ಮೀ. ಓಟ ಸ್ಪರ್ಧೆಗಳಿಗೆ ಗನ್‌ಶೂಟ್ ಮಾಡುವ ಮೂಲಕ ಚಾಲನೆ ನೀಡಿದರು. ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ, ತೃತೀಯ ಸ್ಥಾನ ಪಡೆದ ವಿಜೇತರಿಗೆ ಬಹುಮಾನ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸೋಮಣ್ಣ, ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಎಲ್ಲಾ ಕ್ರೀಡಾಳುಗಳು ಕ್ರೀಡಾಸ್ಫೂರ್ತಿ ಮೆರೆಯಬೇಕು. ವಿಜೇತ ಕ್ರೀಡಾಪಟುಗಳು ರಾಜ್ಯಮಟ್ಟದಲ್ಲಿ ನಡೆಯುವ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಜಿಲ್ಲೆಗೆ ಕೀರ್ತಿ ತರಬೇಕು ಎಂದು ಶುಭ ಹಾರೈಸಿದರು. ಜಿಲ್ಲಾ ಎಸ್‌ಪಿ ಟಿ.ಪಿ.ಶಿವಕುಮಾರ್ ಮಾತನಾಡಿ, ಕೌಟುಂಬಿಕ ನೆಮ್ಮದಿಯನ್ನು ಕಡೆಗಣಿಸಿ ಕರ್ತವ್ಯದಲ್ಲಿ ತೊಡಗಬೇಕಾಗಿರುವ ಪೊಲೀಸರು ಮಾನಸಿಕ, ದೈಹಿಕ ಸದೃಢತೆ ಕಾಪಾಡಿಕೊಂಡು ಸ್ಪರ್ಧಾತ್ಮಕ ಮನೋಭಾವ ಮೈಗೂಡಿಸಿಕೊಳ್ಳಲು ಕ್ರೀಡಾಕೂಟ ನೆರವಾಗಲಿದೆ. ಕ್ರೀಡೆಯಲ್ಲಿ ಸೋಲು, ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾ ಎಸ್‌ಪಿ ಕೆಎಸ್. ಸುಂದರರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ನಾಗರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಜಯ ಮಹೇಶ್ ಜನ್ಮದಿನ: ಐವರಿಗೆ ವಿಜಯ ಪ್ರಶಸ್ತಿ ಪ್ರದಾನ



ಚಾಮರಾಜನಗರ, ನ.20– ಶಾಸಕ ಎನ್. ಮಹೇಶ್ ಅವರ ಜೀವನದಲ್ಲಿ ಅವರ ಪತ್ನಿ ವಿಜಯ ಮಹೇಶ್ ದೊಡ್ಡಶಕ್ತಿಯಾಗಿದ್ದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕಾನ್ಷಿ ಫೌಂಡೇಶನ್ ವತಿಯಿಂದ ನಡೆದ ಶ್ರೀಮತಿ ವಿಜಯ ಮಹೇಶ್‌ರವರ ಜನ್ಮದಿನದ ಸ್ಮರಣಾರ್ಥ ರಾಜ್ಯ ಮಟ್ಟದ ವಿಜಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಿಜಯ ಮಹೇಶ್‌ರವರ ಸಂಸ್ಕರಣಾ ಪುಸ್ತಕ ಲೋಕಾರ್ಪಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಜಯ ಮಹೇಶ್ ಅವರು ಮಹೇಶ ಅವರ ಜೀವನದಲ್ಲಿ ಒಳ್ಳೆಯ ಸಂಗಾತಿಯಾಗಿದ್ದು, ಎಲ್ಲ ಆಸೆ, ಆಕಾಂಕ್ಷೆಗಳು ಬದಿಗೊತ್ತಿ ಸರ್ವಸ್ವವೇ ಪತಿ ಎಂಬುದನ್ನು ಸಮಾಜಕ್ಕೆ ತೋರಿಸಿಕೊಡುವ ಜೊತೆಗೆ ತನ್ನ ಬುದ್ಧಿವಂತಿಕೆ, ದೂರದೃಷ್ಟ ಚಿಂತನೆ ಹಾಗೂ ತಮ್ಮಲ್ಲಿ ಅಡಕವಾಗಿರುವ ಪ್ರತಿಭೆಯನ್ನು, ಬರವಣಿಗೆ, ಸಂಶೋಧನೆಗಳ ಮೂಲಕ ಲೋಕಾರ್ಪಣೆ ಮಾಡಿದ್ದಾರೆ.

ಅಧ್ಯಕ್ಷತೆ ವಹಿಸಿದ್ದ ಶಾಸಕ ಎನ್.ಮಹೇಶ್ ಮಾತನಾಡಿ, 2016 ರಿಂದೀಚೆಗೆ ಕೇಂದ್ರ ಸರ್ಕಾರ ಪ್ರತಿಭೆಗಳನ್ನು ಹುಡುಕಿಕೊಂಡು ಹೋಗಿ ಪ್ರಶಸ್ತಿಗಳನ್ನು ನೀಡುತ್ತಿದೆ. ಇದಕ್ಕಿಂತ ಹಿಂದಿನ ಸರ್ಕಾರಗಳು ಬೇಕಾದವರಿಗೆ ಪದ್ಮಶ್ರೀ, ಪದ್ಮವಿಭೂಷಣ, ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡುತ್ತಿದ್ದವು. ಪತ್ನಿ ವಿಜಯ ಜೀವಿತ ಸಂದರ್ಭದಲ್ಲಿ ಪ್ರಶಸ್ತಿಗಳನ್ನು ಪ್ರತಿಭೆಗಳನ್ನು ಹೆಕ್ಕಿತೆಗೆದು ಕೊಡಬೇಕೆಂದು ಹೇಳಿದ್ದರು. ಅ ಹಿನ್ನೆಲೆಯಲ್ಲಿ ಅವರ ಹೆಸರಿನ ವಿಜಯ ಪ್ರಶಸ್ತಿಯನ್ನು ಕಾನ್ಷಿ ಫೌಂಡೇಶನ್ ಐವರು ಪ್ರತಿಭೆಗಳನ್ನು ಹುಡುಕಿ ನೀಡಿದೆ ಎಂದರು

ತಿ.ನರಸೀಪುರ ವಾಟಾಳ್ ಸೂರ್ಯ ಸಿಂಹಾಸನ ಮಠದ ಡಾ.ಸಿದ್ದಲಿಂಗ ಶಿವಾಚಾರ್ಯಮಹಾಸ್ವಾಮಿಗಳು, ನಳಂದ ಬುದ್ಧವಿಹಾರದ ಬೋದಿರತ್ನ ಭಂತೇಜಿ, ಮಕ್ಕಾಮಸೀದಿ ದರ್ಮಗುರುಗಳಾದ ಮೌಲಾನ ಮಹಮ್ಮದ್ ಇಸ್ಮಾಯಿಲ್, ಸಂತ ಪೌಲ್ ಚರ್ಚ್ ಫಾದರ್ ಅಂತೋಣಪ್ಪ ಅವರು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ರಾಜ್ಯ ಮಟ್ಟದ ವಿಜಯ ಪ್ರಶಸ್ತಿ ಪ್ರದಾನ: ಸಾಹಿತಿ ಡಾ.ಎಂ.ಎಸ್.ವೇದಾ ಅವರಿಗೆ ಸಾಹಿತ್ಯ ವಿಜಯ ಪ್ರಶಸ್ತಿ, ಗಾಯಕ ಆರ್. ಮಹೇಂದ್ರ ಅವರಿಗೆ ಸಾಂಸ್ಕೃತಿಕ ಪ್ರಶಸ್ತಿ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಸಹಜ ಕೃಷಿ ಬಳಗ ಅಧ್ಯಕ್ಷ ಕಾಳಪ್ಪ ಅವರಿಗೆ ಸಾವಯವ ಕೃಷಿ ವಿಜಯ ಪ್ರಶಸ್ತಿ, ಶ್ರೀರಂಗಪಟ್ಟಣ ತಾಲೂಕಿನ ಚಂದಗಾಲು ಪರಿಸರ ಪ್ರೇಮಿ ಪರಿಸರ ರಮೇಶ್ ಅವರಿಗೆ ಪರಿಸರ ವಿಜಯ ಪ್ರಶಸ್ತಿ, ವಿಶ್ವವಾಣಿ ಸುದ್ದಿ ಸಂಪಾದಕರಾದ ಶಿವಕುಮಾರ್ ಬೆಳ್ಳಿತಟ್ಟೆ ಅವರಿಗೆ ಮಾಧ್ಯಮ ವಿಜಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಹುಭಾಷಾ ಚಿತ್ರನಟ ಅವಿನಾಶ್, ರಾಜ್ಯೋತ್ಸವ ಪಶಸ್ತಿ ಪುರಸ್ಕೃತರಾದ ಸೋಲಿಗರ ಮಾದಮ್ಮ, ತಬಲ ಕಲಾವಿದ ಎ.ವಿ.ದಶಪಾಲ್, ಚಿತ್ರ ಕಲಾವಿದರಾದ ಹರೀಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ದಲಿತ ಮಹಿಳೆ ನೀರು ಕುಡಿದ ತೊಂಬೆ ಗೋಮೂತ್ರದಲ್ಲಿ ಶುದ್ಧೀಕರಣ ಪ್ರಕರಣ

ಹೆಗ್ಗೊಠಾರಕ್ಕೆ ಅಧಿಕಾರಿಗಳ ಭೇಟಿ; ಗ್ರಾಮದ ಎಲ್ಲಾ ತೊಂಬೆಗಳಲ್ಲಿ ನೀರು ಕುಡಿದ ದಲಿತರು

ಚಾಮರಾಜನಗರ, ನ.20– ಸಾರ್ವಜನಿಕ ತೊಂಬೆಯಲ್ಲಿ ದಲಿತ ಮಹಿಳೆಯೊಬ್ಬರು ನೀರು ಕುಡಿದರು ಎಂಬ ಕಾರಣಕ್ಕೆ ತೊಂಬೆಯಲ್ಲಿ ಸಂಗ್ರಹವಾಗಿದ್ದ ನೀರನ್ನು ಖಾಲಿ ಮಾಡಿ, ತೊಂಬೆ ಸುತ್ತಲೂ ಗೋಮೂತ್ರ ಹಾಕಿ ಶುದ್ಧೀಕರಣ ಮಾಡಿದರು ಎನ್ನಲಾದ ಹೆಗ್ಗೊಠಾರ ಗ್ರಾಮಕ್ಕೆ ಭಾನುವಾರ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಉಪ ವಿಭಾಗಾಧಿಕಾರಿ ಗೀತಾ ಹುಡೇದ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ್, ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ, ಪಿಡಿಓ ಮಾದಪ್ಪ, ಹಾಸ್ಟೆಲ್ ವಾರ್ಡನ್ ರಾಜು, ಗ್ರಾಮಾಂತರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಜಯರಾಂ ಅವರು ಸ್ಥಳಕ್ಕೆ ಭೇಟಿ ನೀಡಿದರು. ಈ ವೇಳೆ ಅವರು ಗ್ರಾಮದಲ್ಲಿ ನಡೆದಿರುವ ಘಟನೆ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ಜಿಲ್ಲಾ ಕಲ್ಯಾಣಾಧಿಕಾರಿ ಹಾಗೂ ತಹಶೀಲ್ದಾರ್ ಅವರ ಸಮ್ಮುಖದಲ್ಲಿ ಗ್ರಾಮದ ದಲಿತರ ಬೀದಿಯಲ್ಲಿ ಗ್ರಾಮದ ಮುಖಂಡರ ಸಭೆಯನ್ನು ಕರೆಯಲಾಯಿತು. ತಪ್ಪೆಸಗಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ದಲಿತ ಮುಖಂಡರು ಒತ್ತಾಯಿಸಿದರು. ಬಳಿಕ ಅಧಿಕಾರಿಗಳು ದಲಿತ ಮುಖಂಡರು ಹಾಗೂ ಯುವಕರನ್ನು ಎಲ್ಲಾ ತೊಂಬೆಗಳ ಬಳಿ ಕರೆದೊಯ್ದು ನೀರು ಕುಡಿಯುವಂತೆ ಹೇಳಿದರು. ನಂತರ ದಲಿತ ಮುಖಂಡರು ನೀರು ಕುಡಿದರು.

ನೀರಿನ ತೊಂಬೆಗಳ ಮೇಲೆ ಇದು ಸಾರ್ವಜನಿಕರು ಕುಡಿಯುವ ನೀರಿನ ತೊಂಬೆಯಾಗಿದೆ ಎಲ್ಲಾ ವರ್ಗದ ಸಾರ್ವಜನಿಕರು ಇದನ್ನು ಬಳಸಬಹುದು. ನೀರನ್ನು ಮಿತವಾಗಿ ಬಳಸಿ ಎಂದು ಬರೆಸುವ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು.

ಅಸ್ಪೃಶ್ಯತೆ ಆಚರಣೆ ಸರಿಯಲ್ಲ



ಚಾಮರಾಜನಗರ: ತಾಲೂಕಿನ ಹೆಗ್ಗೊಠಾರ ಗ್ರಾಮದಲ್ಲಿ ದಲಿತ ಮಹಿಳೆ ನೀರು ತೆಗೆದುಕೊಂಡ ಹಿನ್ನೆಲೆಯಲ್ಲಿ ತೊಂಬೆಯಲ್ಲಿದ್ದ ನೀರನ್ನು ಖಾಲಿ ಮಾಡಿ ಗಂಜಲ ಹಾಕಿ ತೊಳೆಯುವ ಮೂಲಕ ಅಸ್ಪೃಶ್ಯತೆ ಆಚರಣೆ ಮಾಡಿರುವುದು ಸರಿಯಲ್ಲ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಖಂಡಿಸಿದರು.

ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕಾನ್ಷಿ ಫೌಂಡೇಶನ್ ವತಿಯಿಂದ ನಡೆದ ರಾಜ್ಯ ಮಟ್ಟದ ವಿಜಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಜಯಾ ಮಹೇಶ್‌ರವರ ಸಂಸ್ಕರಣಾ ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ದೇಶದಲ್ಲಿ ಮಾಹಿತಿ ತಂತ್ರಜ್ಞಾನ ಬಹಳಷ್ಟು ಮುಂದುವರೆದಿದ್ದು, ನಾಗರಿಕತೆ ನಾಗಾಲೋಟದಲ್ಲಿ ಓಡುತ್ತಿರುವ ಇಂತಹ ಸಂದರ್ಭದಲ್ಲೂ ಅಸ್ಪೃಶ್ಯತೆ ಆಚರಣೆ ಜೀವಂತವಾಗಿರುವುದು ಬಹಳ ದುರಂತ ಎಂದರು. 21ನೇ ಶತಮಾನದಲ್ಲಿ ದೇಶ ಮುಂದುವರೆದಿದ್ದು ಅನೇಕ ಸಂಶೋಧನೆಗಳು ನಡೆದು ಮನುಷ್ಯನೇ ಆಶ್ಚರ್ಯ ಪಡುತ್ತಿದ್ದಾನೆ. ಸಮಾಜದಲ್ಲಿ ಇನ್ನೂ ಅಸ್ಪೃಶ್ಯತೆ ಆಚರಣೆ ನಡೆಯುತ್ತಿರುವುದು ಬಹಳ ನೋವು ಉಂಟು ಮಾಡಿದೆ ಎಂದರು.



ಹೆಗ್ಗೊಠಾರ ಗ್ರಾಮದಲ್ಲಿ ನಡೆದಿರುವ ಘಟನೆ ನನಗೆ ಶನಿವಾರ ಸಂಜೆ ತಿಳಿಯಿತು. ತಕ್ಷಣವೇ ನಾನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳನ್ನು ಸ್ಥಳಕ್ಕೆ ತೆರಳುವಂತೆ ಸೂಚಿಸಿದೆ. ಜಿಲ್ಲಾಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಅಲ್ಲಿ ನಡೆದಿರುವ ವಾಸ್ತವಾಂಶ ಗೊತ್ತಿಲ್ಲ. ಅಧಿಕಾರಿಗಳಿಂದ ಮಾಹಿತಿ ಪಡೆದು ತಪ್ಪೆಸಗಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಇದೊಂದು ನೋವಿನ ಸಂಗತಿ. ಇಂತಹ ಘಟನೆಗಳು ನಡೆಯಬಾರದು.

–ವಿ.ಸೋಮಣ್ಣ, ಜಿಲ್ಲಾ ಉಸ್ತುವಾರಿ ಸಚಿವರು, ಚಾಮರಾಜನಗರ.

ಮುಖ್ಯಮಂತ್ರಿಯವರ ಭೇಟಿ ಹಿನ್ನೆಲೆ

ಜಿಲ್ಲಾ ಉಸ್ತುವಾರಿ ಸಚಿವರಿಂದ ಸ್ಥಳ ಪರಿಶೀಲನೆ



ಚಾಮರಾಜನಗರ, ನ.20– ಮುಖ್ಯಮಂತ್ರಿಯವರು ಜಿಲ್ಲೆಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ ಆಯೋಜನೆಗಾಗಿ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಇಂದು ನಗರದಲ್ಲಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ನಗರದ ಮೆಡಿಕಲ್ ಕಾಲೇಜು ಬಳಿ ಇರುವ ಜೆ.ಎಸ್.ಎಸ್. ಕಾಲೇಜಿಗೆ ಸೇರಿದ ಪ್ರದೇಶಕ್ಕೆ ಭೇಟಿ ನೀಡಿ ವೀಕ್ಷಿಸಿದರು. ತದನಂತರ ನಗರದ ಪ್ರಮುಖ ಭಾಗದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಮುಖ್ಯಮಂತ್ರಿಯವರ ಕಾರ್ಯಕ್ರಮಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣವೇ ಸೂಕ್ತವೆಂದು ನಿರ್ಧರಿಸಲಾಯಿತು.

ಕ್ರೀಡಾಂಗಣವನ್ನು ವೀಕ್ಷಿಸಿದ ಸಚಿವರು ಪ್ರಸ್ತುತ ಇರುವ ತೇವಾಂಶ ಹೋಗಲಾಡಿಸುವ ಹಾಗೂ ನೀರು ಹರಿದಿರುವುದನ್ನು ತಡೆಯುವ ಕೆಲಸವನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಹೆಚ್ಚು ಜನರು ಕುಳಿತುಕೊಳ್ಳಲು ಅನುಕೂಲವಾಗುವ ಶಾಮಿಯಾನ, ಆಸನಗಳು ಸಮಾರಂಭಕ್ಕೆ ಎತ್ತರದ ವೇದಿಕೆ ಸೇರಿದಂತೆ ಇನ್ನಿತರ ವ್ಯವಸ್ಥೆಗಳನ್ನು ಏರ್ಪಾಡು ಮಾಡಲು ಸಚಿವರು ತಿಳಿಸಿದರು.

ಇದೇ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಮುಖ್ಯಮಂತ್ರಿಯವರು ಜಿಲ್ಲೆಗೆ ಇದೇ ನವೆಂಬರ್ ಇಲ್ಲವೇ ಡಿಸೆಂಬರ್‌ನಲ್ಲಿ ಭೇಟಿ ನೀಡಲಿರುವುದು ನಿಶ್ಚಿತವಾಗಿದೆ. ಭೇಟಿಯ ದಿನಾಂಕ ವನ್ನು ಇಂದು ಅಥವಾ ನಾಳೆಯೊಳಗೆ ಪ್ರಕಟಿಸಲಾಗುತ್ತದೆ. ಚಾಮರಾಜನಗರ ಪಟ್ಟಣಕ್ಕೂ ಮುಖ್ಯಮಂತ್ರಿಯವರು ಬರಲಿದ್ದಾರೆ. ಬಳಿಕ ಹನೂರು, ಮಲೆ ಮಹದೇಶ್ವರಬೆಟ್ಟಕ್ಕೂ ಭೇಟಿ ನೀಡಲಿದ್ದಾರೆ. ಚಾಮರಾಜನಗರ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲೇ ಮುಖ್ಯಮಂತ್ರಿಯವರ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ತಹಶೀಲ್ದಾರ್ ಬಸವರಾಜು, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರಾದ ವಿನಯ್‌ಕುಮಾರ್, ಸಹಾಯಕ ಕಾರ್ಯಪಾಲಕ ಎಂಜಿನಿಯರಾದ ಆರ್.ಸಿ. ಕೆಂಪರಾಜು, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಇಬ್ರಾಹಿಂ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯಪಾಲಕ ಎಂಜಿನಿಯರ್ ವಸಂತ್‌ಕುಮಾರ್, ನಗರಸಭೆ ಆಯುಕ್ತರಾದ ರಾಮದಾಸ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಇದ್ದರು.

ಇಂದು ಸ್ವಚ್ಛತಾ ಓಟ ಕಾರ್ಯಕ್ರಮ

ಚಾ.ನಗರ, ನ.20– ಜಿಪಂ ವತಿಯಿಂದ ವಿಶ್ವ ಶೌಚಾಲಯ ದಿನಾಚರಣೆ ಅಂಗವಾಗಿ ಗ್ರಾಮೀಣ ಜನರಲ್ಲಿ ನೈರ್ಮಲ್ಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ನ.21ರಂದು ಬೆಳಗ್ಗೆ 8.30 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಿಂದ ಪ್ರವಾಸಿಮಂದಿರದವರೆಗೆ ಸ್ವಚ್ಛತಾ ಓಟ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಒಂದನೇ ಪುಟದಿಂದ

ಹೊಸ ಕಾನೂನು ರೂಪಿಸುವ ಅನಿವಾರ್ಯತೆ

ಎಂದು ಹೇಳಿದರು. ರೈತರಿಗೆ ಸಾಲಸೌಲಭ್ಯ ಕಲ್ಪಿಸುವಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಸಾಲ ವಿತರಣೆಯೊಂದಿಗೆ ಮರು ಪಾವತಿ ಉತ್ತಮವಾಗಿ ನಡೆಯುತ್ತಿದೆ. ರಾಜ್ಯದ 21 ಡಿಸಿಸಿ ಬ್ಯಾಂಕುಗಳು ಲಾಭದಲ್ಲಿ ನಡೆಯುತ್ತಿವೆ. ಸಹಕಾರ ಕ್ಷೇತ್ರ ಸಾವಿರಾರು ಜನರಿಗೆ ಉದ್ಯೋಗ, ಲಕ್ಷಾಂತರ ರೈತರಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ. ಎಲ್ಲ ವಲಯದಲ್ಲಿ ಸಹಕಾರ ಕ್ಷೇತ್ರ ಮುಂಚೂಣಿಯಲ್ಲಿದೆ. ಸಹಕಾರ ಇದ್ದರೆ ಮಾತ್ರ ಸಹಕಾರ ಸಂಘಗಳು ಯಶಸ್ವಿಯಾಗುತ್ತವೆ. ಅಸಹಕಾರದಿಂದ ಯಾವುದೇ ಸಂಘಗಳು ಅಭಿವೃದ್ಧಿ ಆಗಲ್ಲ ಎಂದರು

ಯಶಸ್ವಿನಿ ಯೋಜನೆ ಪುನರಾರಂಭ: ಯಶಸ್ವಿನಿ ಯೋಜನೆ ಮರು ಜಾರಿಗೆ ಬಂದಿದೆ. ಈಗಾಗಲೇ 1 ಲಕ್ಷ ನೋಂದಣಿ ಆಗಿದ್ದು, ಈ ತಿಂಗಳ ಅಂತ್ಯದ ವೇಳೆಗೆ 2 ಲಕ್ಷ ನೋಂದಣಿ ಆಗುವ ವಿಶ್ವಾಸ ಇದೆ. ಪ್ರತಿಯೊಬ್ಬ ಸಹಕಾರಿ ಸಹ ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಿಸಿಕೊಂಡು ವೈದ್ಯಕೀಯ ಸೇವೆ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು

ನಂದಿನಿ ಕ್ಷೀರ ಸಮೃದ್ಧಿ ಬ್ಯಾಂಕ್: ಹಾಲು ಉತ್ಪಾದಕರಿಗಾಗಿ ಪ್ರತ್ಯೇಕ ನಂದಿನಿ ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪನೆಗೆ ಮುಂದಾಗಿದ್ದು, ಆದರೆ, ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಆರ್‌ಬಿಐ ಅನುಮತಿ ನೀಡಿಲ್ಲ. ಈ ಕುರಿತು ನ.25ಕ್ಕೆ ಸಭೆಯಿದೆ. ಅಲ್ಲಿ ಒಪ್ಪಿಗೆ ದೊರೆತರೆ ಶೀಘ್ರದಲ್ಲೇ ಬ್ಯಾಂಕ್ ಆರಂಭವಾಗಲಿದೆ. ಇದರಿಂದ ಹಾಲು ಪೂರೈಕೆ ಮಾಡುವ ಅಂದಾಜು 25 ಲಕ್ಷ ಜನರಿಗೆ ಸಾಲ ಸೌಲಭ್ಯ, ಇನ್ನಿತರ ಬ್ಯಾಂಕಿಂಗ್ ಸವಲತ್ತು ದೊರೆಯಲಿದೆ ಎಂದರು.

25ಕ್ಕೆ ಹಾಲಿನ ದರ ಕುರಿತು ನಿರ್ಧಾರ: ಹಾಲಿನ ದರ ಹೆಚ್ಚಳ ಕುರಿತು ನ.25ರಂದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಕೆಎಂಎಫ್ ಸಭೆ ನಡೆಯಲಿದೆ. ಹಾಲು ಉತ್ಪಾದನೆ ಮಾಡುವ ರೈತರಿಗೆ ಪ್ರತಿ ಲೀಟರ್‌ಗೆ 3 ರೂ. ನೀಡಲಾಗುತ್ತಿದೆ. ಅದೇ ರೀತಿ ಗ್ರಾಹಕರಿಗೂ ಹೊರೆ ಆಗದಂತೆ ದರ ನಿಗದಿ ಮಾಡಬೇಕಾಗಿದೆ. ಈ ಕುರಿತು ಸಿಎಂ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದರು. ಶಾಸಕ ಜಿ.ಟಿ.ದೇವೇಗೌಡ ಸಹಕಾರ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ನಾನು ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಮಾಡಿಲ್ಲ. ಸಹಕಾರ ಮಹಾಮಂಡಳದ ಮಾತೃ ಸಂಸ್ಥೆ. ಇದನ್ನು ಬೆಳೆಸಲು ಸಾಕಷ್ಟು ಮಂದಿ ಶ್ರಮಿಸಿದ್ದಾರೆ. ರಾಜಕಾರಣ ಬೇರೆ, ಸಹಕಾರ ಕ್ಷೇತ್ರ ಬೇರೆ. ಜಿ.ಟಿ.ದೇವೇಗೌಡರು ಅಧ್ಯಕ್ಷರಾದರೆ ಮಹಾಮಂಡಳ ಬೆಳೆಯುತ್ತದೆ ಎಂಬ ಕಾರಣಕ್ಕೆ ಚುನಾವಣೆಗೆ ನಿಲ್ಲಲು ಒತ್ತಡ ಹಾಕಿದೆವು. ರಾಜಕೀಯ ಉದ್ದೇಶದಿಂದ ನಾನಿರುವ ಸಹಕಾರಿ ಸಂಸ್ಥೆಗಳ ಮೇಲೆ ಸಿಐಡಿ ತನಿಖೆ ಮಾಡಿಸಿದರು. ಆದರೆ ನಾನು ಸಹಕಾರ ಸಚಿವನಾದ ಬಳಿಕ ಯಾವ ಸಹಕಾರಿಗೂ ತೊಂದರೆ ಮಾಡಿಲ್ಲ. ಸಹಕಾರ ಕ್ಷೇತ್ರದಲ್ಲಿ ಯುವಕರು ಮುಂದೆ ಬರಬೇಕು ಎಂದರು.

ಕಾರ್ಯಕ್ರಮದಲ್ಲಿ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಿ, ಹಿರಿಯ ಸಹಕಾರಿಗಳ ಗೌರವಿಸಲಾಯಿತು. ಇದೇ ವೇಳೆ ಸಹಕಾರ ವಾರಪತ್ರಿಕೆ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ, ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಹಾಗೂ ಮೈಸೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮೇಯರ್ ಶಿವಕುಮಾರ್, ವಿಧಾನಪರಿಷತ್ ಸದಸ್ಯರಾದ ಮಧು ಮಾದೇಗೌಡ, ನಿಗಮ ಮಂಡಲಿ ಅಧ್ಯಕ್ಷರಾದ ಎಂ.ಶಿವಕುಮಾರ್, ಎಂ.ಕೆ.ಶ್ರೀನಿವಾಸ್, ಕಾ.ಪು.ಸಿದ್ದಲಿಂಗಸ್ವಾಮಿ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತದ ಅಧ್ಯಕ್ಷ ಹೆಚ್.ವಿ.ರಾಜೀವ್, ಮಂಡ್ಯ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಅಧ್ಯಕ್ಷ ಬಿ.ಆರ್.ರಾಮಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಮೆರವಣಿಗೆಯಲ್ಲಿ ಸಾಗಿದ ಸಹಕಾರಿಗಳು

ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲು ವಿವಿಧೆಡೆಯಿಂದ ಆಗಮಿಸಿದ್ದ ಸಹಕಾರ ಸಂಘಗಳ ಸದಸ್ಯರು ಜಲದರ್ಶಿನಿ ಅತಿಥಿ ಗೃಹದ ಆವರಣದಿಂದ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮುಕ್ತ ವಿಶ್ವವಿದ್ಯಾನಿಲಯದ ಆವರಣದವರೆಗೂ ಮೆರವಣಿಗೆಯಲ್ಲಿ ಸಾಗಿದರು. ಸಂಭ್ರಮದಿಂದ ಪಾಲ್ಗೊಂಡಿದ್ದ ಸಹಕಾರಿಗಳು ಮೆರವಣಿಗೆಗೆ ಮೆರಗು ನೀಡಿ, ಸಹಕಾರ ಚಳುವಳಿಯ ಮಹತ್ವ ಸಾರಿದರು.

ಮೆರವಣಿಗೆಗೆ ಅಡ್ಡಿಗೆ ಯತ್ನ

ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲು ಮೆರವಣಿಗೆಯಲ್ಲಿ ಆಗಮಿಸುತ್ತಿದ್ದ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಕಬ್ಬು ಬೆಳೆಗಾರರು ಘೇರಾವ್ ಮಾಡಲೆತ್ನಿಸಿದರು. ಕಬ್ಬಿಗೆ ಎಫ್‌ಆರ್‌ಪಿ ಬೆಲೆ ನಿಗಧಿ ಮಾಡಬೇಕು. ರೈತರ ಸಮಸ್ಯೆಗಳ ನಿವಾರಣೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಈ ವೇಳೆ ಸಚಿವ ಎಸ್.ಟಿ.ಸೋಮಶೇಖರ್, ಮುಖ್ಯಮಂತ್ರಿಗಳು ಶೀಘ್ರದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ ಎಂದು ಭರವಸೆ ನೀಡಿದರು. ಈ ವೇಳೆ ಕೆಲ ಮುಖಂಡರು ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ. ಕಾರ್ಪೊರೇಟ್ ಕಂಪನಿಗಳ ಪರವಾಗಿ ಇದೆ. ರೈತರು ನಡೆಸುವ ಪ್ರತಿಭಟನೆಗೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ ಘೋಷಣೆ ಕೂಗಲಾರಂಭಿಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಪೊಲೀಸರು ಕಬ್ಬು ಬೆಳೆಗಾರರ ಮನವೊಲಿಸಿ ಮೆರವಣಿಗೆ ಸಾಗಲು ಅನುವು ಮಾಡಿಕೊಟ್ಟರು. ಆದರೆ ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ಉಂಟಾಗಿತ್ತು. ಈ ವೇಳೆ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಮುಖಂಡರಾದ ಕಿರಗಸೂರು ಶಂಕರ್,ಬಿ ಪಿ ಪರಶಿವಮೂರ್ತಿ, ಅಂಬಳೆ ಮಂಜುನಾಥ್, ಡಿ ಕಾಟೂರು ಮಾದೇವಸ್ವಾಮಿ, ಕಿರಗಸೂರು ಪ್ರಸಾದ್ ನಾಯಕ, ವರಕೋಡು ನಾಗೇಶ್, ಚುಂಚರಾಯನ ಹುಂಡಿ ಸತೀಶ್, ಹಿರಿಯೂರು ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.

ಸಾಧನೆಯತ್ತ ಸಹಕಾರಿ ಕ್ಷೇತ್ರ: ಜಿಟಿಡಿ

ಮಾಡಿದಂತೆ ಎಂದು ಅಭಿಪ್ರಾಯಪಟ್ಟರು. ರಾಜ್ಯದಲ್ಲಿ ಮತ್ತೆ ಜಾರಿಗೆ ತಂದಿರುವ ಯಶಸ್ವಿನಿ ಯೋಜನೆ ರೈತರು ಹಾಗೂ ಸಹಕಾರಿಗಳಿಗೆ ವರದಾನವಾಗಿದೆ. ಅನಾರೋಗ್ಯ ಪೀಡಿತ ರೈತರಿಗೆ ಸೂಕ್ತ ಸಂದರ್ಭದಲ್ಲಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಈ ಯೋಜನೆ ಸಹಕಾರಿಯಾಗಲಿದೆ. ಈ ಯೋಜನೆ ಜನೋಪಯೋಗಿ ಕಾರ್ಯಕ್ರಮವಾಗಿದೆ. ಈ ಹಿಂದೆಯೂ ಸಹಕಾರಿಗಳಿಗೆ, ರೈತರಿಗೆ ಯಶಸ್ವಿನಿ ಯೋಜನೆ ನೆರವಾಗಿತ್ತು. ಕೆಲ ಕಾರಣದಿಂದ ಯೋಜನೆ ಸ್ಥಗಿತಗೊಳಿಸಲಾಗಿತ್ತು. ಆದರೆ ಇದೀಗ ಮತ್ತೆ ಜಾರಿಗೆ ತಂದಿರುವುದು ಶ್ಲಾಘನೀಯ. ಎಲ್ಲಾ ಸಹಕಾರಿಗಳಿಗೂ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳುವುದಕ್ಕಾಗಿ ನೋಂದಣಿ ಮಾಡಿಕೊಳ್ಳಬೇಕು. ಯಶಸ್ವಿನಿ ಯೋಜನೆಯ ಸದಸ್ಯತ್ವ ಪಡೆದುಕೊಳ್ಳಲು ಪ್ರತಿಯೊಬ್ಬರಿಗೂ ಸಹಕಾರಿಗಳು ಉತ್ತೇಜಿಸಬೇಕು. ಅದಕ್ಕಾಗಿ ಪ್ರತಿಯೊಂದು ಸಹಕಾರ ಸಂಘದಲ್ಲಿ ನೋಂದಣಿಗೆ ಆದ್ಯತೆ ನೀಡಬೇಕು. ಈ ಕುರಿತು ನಾಮಫಲಕ ಹಾಕುವ ಮೂಲಕ ಪ್ರಚಾರ ಮಾಡಬೇಕು ಎಂದು ಸಲಹೆ ನೀಡಿದರು.

ಫಿಫಾ ವಿಶ್ವಕಪ್‌ಗೆ ಅದ್ಧೂರಿ ಚಾಲನೆ

ತಾರೆ ಜಂಗ್‌ಕುಕ್ ಗಾಯನ ನೆರೆದಿದ್ದ ಕ್ರೀಡಾಭಿಮಾನಿಗಳನ್ನು ರಂಜಿಸಿತು. ಅಲ್ಲದೇ ಸಮಾರಂಭದಲ್ಲಿ ಕತಾರ್ ಸಾಂಸ್ಕೃತಿಕ ನೃತ್ಯ ಹಾಗೂ ಹಾಡು ಪ್ರದರ್ಶನಗೊಂಡವು. ಅಲ್ಲದೇ ಪಂದ್ಯಾವಳಿಗೆ ಅರ್ಹತೆ ಪಡೆದಿರುವ 32 ತಂಡಗಳ ರಾಷ್ಟ್ರಧ್ವಜ ವೇದಿಕೆ ಮೇಲೆ ಪ್ರದರ್ಶನಗೊಂಡಿತು.

ಉಪರಾಷ್ಟ್ರಪತಿ ಧನ್‌ಕರ್ ಭಾಗಿ: ಕತಾರ್‌ನಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ 2022ರ ಉದ್ಘಾಟನಾ ಸಮಾರಂಭದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಭಾಗವಹಿಸಿದ್ದಾರೆ. ಕತಾರ್ ಭೇಟಿ ಸಮಯದಲ್ಲಿ, ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದರೊಂದಿಗೆ, ಉಪರಾಷ್ಟ್ರಪತಿ ಅವರು ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ.

ಕತಾರ್– ಈಕ್ವೆಡಾರ್ ನಡುವೆ ಉದ್ಘಾಟನಾ ಪಂದ್ಯ: ಫಿಫಾ ಫುಟ್ಬಾಲ್ ವಿಶ್ವಕಪ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯದಲ್ಲಿ ಅತಿಥೇಯ ಕತಾರ್ ಅನ್ನು 0–2 ಗೋಲುಗಳ ಅಂತರದಲ್ಲಿ ಮಣಿಸಿದ ಈಕ್ವೆಡಾರ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಂದು ಭಾರತೀಯ ಕಾಲಮಾನ ರಾತ್ರಿ 9.30ರ ವೇಳೆಗೆ ಅಲ್ ಬೇತ್ ಸ್ಟೇಡಿಯಂನಲ್ಲಿ ಆರಂಭವಾದ ಪಂದ್ಯದಲ್ಲಿ ಆಕ್ರಮಣಕಾರಿ ಆಟವಾಡಿದ ಈಕ್ವೆಡಾರ್ ಪಂದ್ಯದ ಮೊದಲಾರ್ಧದ 16 ನಿಮಿಷದಲ್ಲಿ ಪೆನಾಲ್ಟಿ ಕಿಕ್ ಮೂಲಕ ಮೊದಲ ಗೋಲು ಗಳಿಸಿದ ಈಕ್ವೆಡಾರ್ ನಾಯಕ ಎನ್ನರ್ ವೇಲೆನ್ಸಿಯಾ 31ನೇ ನಿಮಿಷದಲ್ಲಿ ಹೆಡರ್ ಮೂಲಕ ಮತ್ತೊಂದು ಗೋಲು ಗಳಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ನಂತರ ನಡೆದ ದ್ವಿತಿಯಾರ್ಧದಲ್ಲಿ ಉಭಯ ತಂಡಗಳು ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಈಕ್ವೆಡಾರ್ 0–2 ಅಂತರದಿಂದ ಗೆಲ್ಲುವ ಮೂಲಕ ಖಾತೆ ತೆರೆದಿದೆ.

ಗೃಹ ಇಲಾಖೆಯ ವೈಫಲ್ಯಕ್ಕೆ ಸಾಕ್ಷಿ

ಈ ಘಟನೆಯ ಬಗ್ಗೆ ಊಹಾಪೋಹಗಳ ಸುದ್ದಿಗಳನ್ನು ನಂಬಿ ಉದ್ರಿಕ್ತರಾಗದೆ ಸಾರ್ವಜನಿಕರು ಸಂಯಮ ಮತ್ತು ಎಚ್ಚರದಿಂದ ಇರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಎಂದು ಹೇಳಿದ್ದಾರೆ. ರಾಜ್ಯ ಪೊಲೀಸ್ ಮಹಾನಿರ್ದೇಶಕರೇ ಭಯೋತ್ಪಾದಕ ಕೃತ್ಯ ಎಂದು ದೃಢೀಕರಿಸಿರುವ ಮಂಗಳೂರು ಸ್ಫೋಟ ಪ್ರಕರಣವನ್ನು ಖಂಡಿಸುತ್ತೇನೆ. ಕಳವಳಕಾರಿಯಾದ ಈ ಘಟನೆಯ ಬಗ್ಗೆ ಪೊಲೀಸರು ತ್ವರಿತಗತಿಯಲ್ಲಿ ತನಿಖೆ ನಡೆಸಿ ದುಷ್ಕರ್ಮಿಗಳನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಇಬ್ಬರು ಪೊಲೀಸ್ ವಶಕ್ಕೆ

ಮೊಬೈಲ್‌ನಲ್ಲಿ ಟೈಮರ್ ಸೆಟ್ ಮಾಡಿ ಬಾಂಬ್ ಸ್ಫೋಟಿಸುವ ಉದ್ದೇಶದಿಂದ ಈ ಮೊಬೈಲ್‌ಗಳನ್ನು ಖರೀದಿಸಿದ್ದ ಎಂದು ಶಂಕಿಸಲಾಗಿದೆ. ಇದಕ್ಕೆ ಪೂರಕವಾಗಿ ಆತನ ರೂಂನಲ್ಲಿ ದೊರೆತಿರುವ ಕೆಲ ವಸ್ತುಗಳು ಟೈಂ ಬಾಂಬ್ ತಯಾರಿಕೆಗೆ ವಸ್ತುಗಳಾಗಿವೆ ಎನ್ನಲಾಗಿದೆ. ಪೊಲೀಸರು ವಶಪಡಿಸಿಕೊಂಡಿರುವ ಶಂಕಿತ ಉಗ್ರನ ಇಬ್ಬರೂ ಸ್ನೇಹಿತರನ್ನು ಅಜ್ಞಾತ ಸ್ಥಳದಲ್ಲಿ ವಿಚಾರಣೆಗೊಳಪಡಿಸಿದ್ದಾರೆ. ವಿಶೇಷ ತಂಡದ ಪೊಲೀಸರು ಮಾತ್ರವಲ್ಲದೇ ಎನ್‌ಐಎ ಅಧಿಕಾರಿಗಳು ಕೂಡ ಇವರಿಬ್ಬರನ್ನೂ ತೀವ್ರವಾಗಿ ವಿಚಾರಣೆಗೊಳಪಡಿಸಿದ್ದಾರೆ ಎಂದು ಹೇಳಲಾಗಿದೆ. ಸ್ಥಳೀಯ ಪೊಲೀಸರು ಈ ಕುರಿತು ಯಾವುದೇ ಮಾಹಿತಿ ನೀಡದಿದ್ದರೂ ಕೂಡ ಮಂಗಳೂರು ಕುಕ್ಕರ್‌ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಅವರು ಮಂಗಳೂರಿನಲ್ಲಿ ತಿಳಿಸಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಪ್ರಿಯಾಂಕ್ ಖರ್ಗೆ ಅವರಿಗೆ

ಕೊಲೆ ಬೆದರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

● ಬಿಜೆಪಿ ವಿರುದ್ಧ ವಾಗ್ದಾಳಿ ● ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಕುಸಿತ ಆರೋಪ ● ಮುಖ್ಯಮಂತ್ರಿ, ಗೃಹ ಸಚಿವರ ರಾಜೀನಾಮೆಗೆ ಆಗ್ರಹ



ಮೈಸೂರು,ನ.20(ಪಿಎಂ)– ಶಾಸಕರಾದ ತನ್ವೀರ್ ಸೇಠ್, ಪ್ರಿಯಾಂಕ್ ಖರ್ಗೆ ಅವರಿಗೆ ಜೀವ ಬೆದರಿಕೆ ಹಾಕಿರುವುದನ್ನು ಖಂಡಿಸಿ ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಎಫ್‌ಟಿಎಸ್ ವೃತ್ತದಲ್ಲಿ (ಡಾ.ಬಿ.ಆರ್.ಅಂಬೇಡ್ಕರ್ ವೃತ್ತ) ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು. ಹಾಸನ ಜಿಲ್ಲೆಯ ಬಜರಂಗದಳದ ಕಾರ್ಯಕರ್ತ ರಘು ಎಂಬಾತ ಟಿಪ್ಪು ಪ್ರತಿಮೆ ಸ್ಥಾಪಿಸಿದರೆ ನಿಮಗೆ 6 ಅಡಿ–3ಅಡಿ ಜಾಗ ಫಿಕ್ಸ್ ಎಂಬ ಹೇಳಿಕೆ ಮೂಲಕ ತನ್ವೀರ್ ಸೇಠ್ ಅವರಿಗೆ ಕೊಲೆ ಬೆದರಿಕೆ ಹಾಕಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಂತೆಯೇ ಪ್ರಿಯಾಂಕ್ ಖರ್ಗೆ ಕುರಿತಂತೆ ಶೂಟ್ ಮಾಡಲು ನಾವು ರೆಡಿ ಎಂಬ ಹೇಳಿಕೆ ಮೂಲಕ ಬಿಜೆಪಿ ಮುಖಂಡ ಮಣಿಕಂಠ ರಾಥೋಡ್ ಸಹ ಕೊಲೆ ಬೆದರಿಕೆ ಹಾಕಿದ್ದಾನೆ. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಈ ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ರಾಜ್ಯ ಬಿಜೆಪಿ ಸರ್ಕಾರವೇ ಇಂತಹ ಬೆದರಿಕೆಗೆಲ್ಲಾ ಉತ್ತೇಜನ ನೀಡುತ್ತಿದೆ. ಮತ್ತೊಂದೆಡೆ ಬೆಂಗಳೂರಿನಲ್ಲಿ ಕಾಂಗ್ರೆಸ್ ಮತದಾರರನ್ನು ಪಟ್ಟಿಯಿಂದ ಕೈಬಿಟ್ಟಿರುವ ಪ್ರಕರಣ ಬೆಳಕಿಗೆ ಬಂದಿದೆ. ಬಿಜೆಪಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಮಾತನಾಡಿ, ದೇಶದಲ್ಲಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಮತೀಯವಾದ ಹೆಚ್ಚಾಗುತ್ತಿದೆ. ಜಾತಿ–ಧರ್ಮದ ಹೆಸರಿನಲ್ಲಿ ಕೊಲೆ–ಸುಲಿಗೆ ನಡೆಯುತ್ತಿವೆ. ಪ್ರಿಯಾಂಕ್ ಖರ್ಗೆ ಅವರನ್ನು ಕಾಣೆಯಾಗಿದ್ದಾರೆಂದು ಪೋಸ್ಟರ್ ಅಂಟಿಸಿದ್ದರು. ಅಲ್ಲದೆ, ಅವರ ಮನೆ ಸಮೀಪ ಗಲಾಟೆ ಸಹ ನಡೆಸಿದ್ದರು. ಇವುಗಳನ್ನು ಪ್ರಶ್ನೆ ಮಾಡಿದ್ದಕ್ಕೆ ನಿಮ್ಮನ್ನು ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದರು.

ದೇಶದಲ್ಲಿ ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಸಂವಿಧಾನದತ್ತವಾಗಿ ತಮ್ಮ ಆಶಯ ವ್ಯಕ್ತಪಡಿಸಲು ಅವಕಾಶವಿದೆ. ಆದರೆ ಟಿಪ್ಪು ಪ್ರತಿಮೆ ಸ್ಥಾಪನೆ ವಿಚಾರದಲ್ಲಿ ತನ್ವೀರ್‌ಸೇಠ್ ಅವರಿಗೆ ಬಜರಂಗ ದಳದ ಕಾರ್ಯಕರ್ತನೊಬ್ಬ ಕೊಲೆ ಬೆದರಿಕೆ ಹಾಕಿದ್ದಾನೆ. ಕಾಂಗ್ರೆಸ್ ಶಾಸಕರಿಗೆ ಬೆದರಿಕೆ ಹಾಕಿರುವುದನ್ನು ಗೃಹ ಸಚಿವರು ಗಂಭೀರವಾಗಿ ಪರಿಗಣಿಸಿಲ್ಲ. ಬಿಜೆಪಿ ಆಡಳಿತವಿರುವ ಎಲ್ಲಾ ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ಇದೆಯೇ? ಎಂಬ ಆತಂಕ ಎದುರಾಗಿದೆ ಎಂದು ಹೇಳಿದರು.

ಸರ್ಕಾರವೇ ಸಮಾಜಘಾತುಕರಿಗೆ ಬೆಂಬಲವಾಗಿ ನಿಂತಿದೆ. ಆ ಮೂಲಕ ದೇಶದಲ್ಲಿ ಕೋಮುಗಲಭೆಗೆ ಉತ್ತೇಜನ ನೀಡಲಾಗುತ್ತಿದೆ. ಕೊಡಗಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರ ಮೇಲೆ ದಾಳಿ ನಡೆಸಿದ ಕಿಡಿಗೇಡಿಗಳನ್ನು ರಾತ್ರೋರಾತ್ರಿ ಅಲ್ಲಿಯ ಶಾಸಕರು ಜಾಮೀನು ಕೊಡಿಸಿ, ಬಿಡುಗಡೆ ಮಾಡಿಸಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆ ಬಿಜೆಪಿಯವರು ಭಾವನಾತ್ಮಕ ವಿಚಾರಗಳನ್ನು ಮುನ್ನೆಲೆಗೆ ತರುತ್ತಾರೆ. ಧರ್ಮ–ಜಾತಿ ಮತ್ತು ದೇಶದ ಸೇನೆಯ ವಿಚಾರಗಳನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗೆ ಐದಾರು ತಿಂಗಳು ಇರುವಾಗಲೇ ಮತದಾರರ ಪಟ್ಟಿಯನ್ನೇ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳಲು ಕುತಂತ್ರ ರೂಪಿಸಿದ್ದಾರೆ. ರಾಷ್ಟ್ರಪತಿಗಳು ಹಾಗೂ ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಮೇಯರ್ ಅಯೂಬ್‌ಖಾನ್ ಮಾತನಾಡಿ, ದೇಶ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಬಳಿಕ ಇಡಿ, ಐಟಿ ಮತ್ತು ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ವಿರೋಧ ಪಕ್ಷದ ನಾಯಕರ ಮೇಲೆ ದಾಳಿ ನಡೆಸುವ ಕುತಂತ್ರ ನಡೆಸಲಾಯಿತು. ಆದರೆ ಕಾಂಗ್ರೆಸ್ ಇದಕ್ಕೆಲ್ಲಾ ಜಗ್ಗುವುದಿಲ್ಲ ಎಂಬುದು ಗೊತ್ತಾದ ಬಳಿಕ ಈಗ ನೇರವಾಗಿ ಜೀವ ಬೆದರಿಕೆ ಹಾಕಲು ಮುಂದಾಗಿದ್ದಾರೆ. ಪ್ರಿಯಾಂಕ್ ಖರ್ಗೆ, ತನ್ವೀರ್‌ಸೇಠ್ ಅವರಿಗೆ ಜೀವ ಬೆದರಿಕೆ ಹಾಕಿದ್ದರೂ ಯಾವುದೇ ಗಂಭೀರ ಕ್ರಮ ವಹಿಸದೇ ಸರ್ಕಾರ ಮೌನ ವಹಿಸಿದೆ. ಇದನ್ನು ನೋಡಿದರೆ ಇದೆಲ್ಲಾ ಸರ್ಕಾರಿ ಪ್ರಾಯೋಜಿತ ಬೆದರಿಕೆಯೇ? ಎಂಬ ಅನುಮಾನ ಮೂಡುತ್ತಿದೆ ಎಂದು ಕಿಡಿಕಾರಿದರು.

ತನ್ವೀರ್‌ಸೇಠ್ ಅವರಿಗೆ ಬೆದರಿಕೆ ಹಾಕಿದ ರಘು ಎಂಬಾತನನ್ನು ಈವರೆಗೆ ಬಂಧಿಸಿಲ್ಲ. ಕಾನೂನು–ಸುವ್ಯವಸ್ಥೆ ಸರ್ಕಾರದ ಹಿಡಿತದಲ್ಲಿದೆಯೋ? ಇಲ್ಲ ಆರ್‌ಎಸ್‌ಎಸ್ ಕೈಯ್ಯಲ್ಲಿದೆಯೋ? ಎಂಬುದು ಅರ್ಥವಾಗುತ್ತಿಲ್ಲ. ಸರ್ಕಾರದಿಂದಲೇ ನಿರ್ಮಿಸಿದ ಬಸ್ ತಂಗುದಾಣವೊಂದನ್ನು ತಾವೇ ಒಡೆಯುವುದಾಗಿ ಇಲ್ಲಿನ ಸಂಸದರು ಹೇಳಿಕೆ ನೀಡುತ್ತಾರೆ. ಅವರ ಇಂತಹ ವರ್ತನೆ ಸಾರ್ವಜನಿಕರ ವಲಯಕ್ಕೆ ಯಾವ ಸಂದೇಶ ನೀಡಿದಂತಾಗುತ್ತದೆ ಎಂದು ಪ್ರಶ್ನಿಸಿದರು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ ಪಕ್ಷದ ಮುಖಂಡರಾದ ಎಸ್.ರಾಜೇಶ್, ಮೈಸೂರು ಬಸವಣ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಯೊಬ್ಬರಲ್ಲೂ ಕನ್ನಡ ಜಾಗೃತಿ ಪ್ರಜ್ಞೆ ಅವಶ್ಯವಾಗಿದೆ

ಸಾಹಿತಿ ಬನ್ನೂರು ರಾಜು ಬಲವಾದ ಪ್ರತಿಪಾದನೆ



ಮೈಸೂರು, ನ.20– ಕನ್ನಡ ಎನ್ನುವುದು ಎಂದೂ ನಶಿಸದ ಜಗತ್ತಿನ ಸರ್ವ ಶ್ರೇಷ್ಠ ಪ್ರಾಚೀನ ಭಾಷೆಗಳಲ್ಲೊಂದು ಎಂಬ ಅರಿವು ಮತ್ತು ಜಾಗೃತಿ ಪ್ರಜ್ಞೆ ಪ್ರತಿಯೊಬ್ಬರಲ್ಲೂ ಇರಬೇಕೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಹೆಗ್ಗಡದೇವನಕೋಟೆಯ ಹೆದ್ದಾರಿಯಲ್ಲಿರುವ ಮಹದೇವಪುರ ಬಡಾವಣೆಯಲ್ಲಿ ಜೈ ಭುವನೇಶ್ವರಿ ಕನ್ನಡ ಯುವಕರ ಸಂಘದಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಸಂತ ಶ್ರೇಷ್ಠ ದಾರ್ಶನಿಕ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಿದ್ದ ಅವರು, ಜಗದ್ವಿಖ್ಯಾತ ಸಂತ ಕವಿ ಕನಕದಾಸರಂಥ ಸಮಾಜ ಸುಧಾರಕರನ್ನು ಹಾಗೂ ಅಲ್ಪಾಯುಷ್ಯದಲ್ಲೇ ಅಪಾರ ಸಾಧನೆ ಮಾಡಿ ಹೋಗಿರುವ ನಟ ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್‌ರಂಥ ಸಮಾಜಮುಖಿ ಕಲಾವಿದರನ್ನು ನಾಡಿಗೆ ನೀಡಿದ ನಮ್ಮ ಕನ್ನಡ ಭಾಷೆ ಜಗತ್ತಿನ ಭಾಷೆಗಳಲ್ಲೇ ಶ್ರೇಷ್ಠಾತಿಶ್ರೇಷ್ಠವೆಂದರು.

ಕೇವಲ ಭಾಷಣಗಳಿಂದ ಕನ್ನಡ ಭಾಷೆ ಬೆಳೆಯುವುದಿಲ್ಲ. ಪ್ರತಿಯೊಂದು ಹಂತದಲ್ಲೂ ಪ್ರತಿಯೊಬ್ಬರೂ ಕನ್ನಡವನ್ನು ಬಳಸುತ್ತಾ ಹೋಗಬೇಕು. ಬಳಸಿದಷ್ಟೂ ಕನ್ನಡ ಬೆಳೆಯುತ್ತದೆ. ಕನ್ನಡ ನಾಲಿಗೆಯ ಮಾತಿಗಿಂತ ಹೃದಯದ ಮಾತಾಗಬೇಕು. ಮನಸ್ಪೂರ್ವಕವಾಗಿ ನಾವು ಅದನ್ನು ಪ್ರೀತಿಸಬೇಕು. ವರನಟ ಡಾ.ರಾಜಕುಮಾರ್ ಹಾಡಿರುವಂತೆ ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ. ಅದು ನಮ್ಮ ಕನ್ನಡ. ಜೀವನಕ್ಕಾಗಿ ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯೋಣ. ಆದರೆ, ಕನ್ನಡವನ್ನೇ ಪ್ರೀತಿಸಿ ಅಭಿಮಾನಿಸೋಣ. ಏಕೆಂದರೆ ನಾವು ಕನ್ನಡ ನಾಡಿನ ಮಣ್ಣಿನ ಮಕ್ಕಳು. ಕನ್ನಡವೇ ನಮ್ಮ ಜೀವ ಹಾಗೂ ಜೀವನವೆಂದ ಅವರು, ಒಟ್ಟಾರೆ ಕನ್ನಡಿಗರಿಗೆ ಕನ್ನಡ ಭಾಷೆಯೇ ಸರ್ವಸ್ವವೆಂದು ಅಭಿಪ್ರಾಯಪಟ್ಟರು.

ಪ್ರಾರಂಭದಲ್ಲಿ ವೇದಿಕೆಯಲ್ಲಿದ್ದ ಗಣ್ಯರೊಡಗೂಡಿ ಸಮಸ್ತ ಕನ್ನಡಿಗರ ತಾಯಿ ಭುವನೇಶ್ವರಿ ಮತ್ತು ಸಂತ ಜ್ಞಾನಿ ಕನಕದಾಸರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಖ್ಯಾತ ವಕೀಲ ರಮೇಶ್ ಅವರು, ಕನ್ನಡ ರಾಜ್ಯೋತ್ಸವ ಮತ್ತು ಕನಕದಾಸರ ಜಯಂತಿಯ ಮಹತ್ವವನ್ನು ತಿಳಿಸಿಕೊಟ್ಟರಲ್ಲದೆ ನಾಡು, ನುಡಿ, ನೆಲ, ಜಲ ಸಂರಕ್ಷಣೆಯ ವಿಚಾರದಲ್ಲಿ ಕನ್ನಡಿಗರೆಲ್ಲರೂ ಒಗ್ಗಟ್ಟಾಗಿರಬೇಕು, ಹಾಗೆಯೇ ಸಾರ್ಥಕ ಬದುಕಿಗಾಗಿ ಕನಕದಾಸರ ತತ್ವ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಸಮಾಜಸೇವಕ ಗೆಜ್ಜಗಳ್ಳಿ ಮಹೇಶ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ನವೀನ್‌ಕುಮಾರ್ ಕಾರ್ಯಕ್ರಮ ಕುರಿತು ಮಾತನಾಡಿದರು.

ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಮಾಜಿ ಅಧ್ಯಕ್ಷ ಎಂ. ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಬುಲೆಟ್ ಮಹದೇವ್, ಜೈ ಭುವನೇಶ್ವರಿ ಕನ್ನಡ ಯುವಕರ ಸಂಘದ ಅಧ್ಯಕ್ಷ ಕಪನಿಗೌಡ, ಮಂಜುನಾಥ್, ಕಿರಣ್ ಕುಮಾರ್, ಶಿವಣ್ಣ, ಚಂದ್ರು, ನಾಗರಾಜು, ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಂತರ ಸಂಘದ ವತಿಯಿಂದ ಎಲ್ಲರಿಗೂ ಸಿಹಿ ವಿತರಿಸಿ, ಕನ್ನಡ ರಾಜ್ಯೋತ್ಸವ ಮತ್ತು ಮಹಾನ್ ಮಾನವತಾವಾದಿ ಕನಕದಾಸರ ಜಯಂತಿಯ ಶುಭಾಶಯಗಳನ್ನು ಕೋರಲಾಯಿತು.

ಉತ್ತಮ ಆರೋಗ್ಯಕ್ಕಾಗಿ ನಡಿಗೆ

ವಾಕಥಾನ್ ಕಾರ್ಯಕ್ರಮಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಚಾಲನೆ



ಮೈಸೂರು, ನ.20(ಆರ್‌ಕೆಬಿ)– 'ಉತ್ತಮ ಆರೋಗ್ಯಕ್ಕಾಗಿ ಹೆಜ್ಜೆ ಇಡಿ' ಘೋಷಣೆಯೊಂದಿಗೆ ಮಣಿಪಾಲ್ ಆಸ್ಪತ್ರೆ ಆಯೋಜಿಸಿದ್ದ ವಾಕಥಾನ್ ಕಾರ್ಯಕ್ರಮಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಭಾನುವಾರ ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಚಾಲನೆ ನೀಡಿದರು.

ನಾಲ್ಕು ಕಿ.ಮೀ. ಉದ್ದದ ವಾಕಥಾನ್‌ನಲ್ಲಿ ನೂರಾರು ವಿದ್ಯಾರ್ಥಿನಿಯರು, ಆಸ್ಪತ್ರೆ ಸಿಬ್ಬಂದಿ ಭಾಗವಹಿಸಿ, ವಾಕಥಾನ್‌ನಿಂದ ಆಗುವ ಲಾಭಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ದೈನಂದಿನ ವ್ಯಾಯಾಮ ದಿನಚರಿ ಅಥವಾ 30 ನಿಮಿಷಗಳ ನಡಿಗೆ ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಮತ್ತು ಹೃದ್ರೋಗ, ಪಾರ್ಶ್ವವಾಯು, ಅಧಿಕ ರಕ್ತದೊತ್ತಡ, ಕ್ಯಾನ್ಸರ್ ಮತ್ತು ಟೈಪ್ 2 ಡಯಾಬಿಟಿಸ್ ಸೇರಿದಂತೆ ಹಲವಾರು ಕಾಯಿಲೆಗಳನ್ನು ತಡೆಗಟ್ಟಲು, ನಿರ್ವಹಿಸಲು ನಿರ್ಣಾಯಕವಾಗಿದೆ. ಹೃದಯ ರಕ್ತನಾಳದ ಫಿಟ್ನೆಸ್ ಅನ್ನು ಸುಧಾರಿಸಲು, ನಿಯಮಿತ ನಡಿಗೆ ಅಭ್ಯಾಸ ರೂಢಿಸಿಕೊಳ್ಳುವುದು ಅಗತ್ಯ. ನಡಿಗೆಯಿಂದ ಆಗುವ ಪ್ರಯೋಜನ, ಆರೋಗ್ಯಕರ ಅಭ್ಯಾಸಗಳ ಮೌಲ್ಯವನ್ನು ತಿಳಿಸಲು ಈ ವಾಕಥಾನ್ ಆಯೋಜಿಸಲಾಗಿದೆ ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ತಿಳಿಸಿದರು. ಆಸ್ಪತ್ರೆಯ ನಿರ್ದೇಶಕ ಪ್ರಮೋದ ಕುಂದರ್ ಇನ್ನಿತರರು ಭಾಗವಹಿಸಿದ್ದರು.

ಮೈಮುಲ್ ಮೆಗಾ ಡೈರಿ ಆವರಣದಲ್ಲಿ ಮಹಿಳಾ ವಸತಿ ನಿಲಯ ಕಟ್ಟಡಕ್ಕೆ ಸಚಿವರಿಂದ ಶಿಲಾನ್ಯಾಸ



ಮೈಸೂರು, ನ.20(ಆರ್‌ಕೆಬಿ)– ಮೈಸೂರು ಹಾಲು ಒಕ್ಕೂಟದ ಮೆಗಾ ಡೈರಿ ಆವರಣದಲ್ಲಿ ಅಂದಾಜು 10 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮಹಿಳಾ ವಸತಿ ನಿಲಯ ಕಟ್ಟಡದ ಶಂಕುಸ್ಥಾಪನೆಯನ್ನು ಜಿಲ್ಲಾ ಉಸ್ತುವಾರಿಯೂ ಆದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಭಾನುವಾರ ನೆರವೇರಿಸಿದರು.

ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಮೈಮುಲ್ ಡೈರಿ ಆವರಣದಲ್ಲಿ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸಿದ್ದರು.

85 ಕೊಠಡಿಗಳುಳ್ಳ ಈ ವಸತಿ ನಿಲಯ ಕಟ್ಟಡದಲ್ಲಿ ಹಾಲು ಉತ್ಪಾದಕ ಮಹಿಳೆಯರ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ನಿರ್ಮಿಸಲಾಗುತ್ತಿದೆ. ಇದರಲ್ಲಿ ಒಟ್ಟು 250 ಮಂದಿ ಹೆಚ್ಚು ಮಕ್ಕಳಿಗೆ ಅವಕಾಶವಾಗಲಿದೆ.

ಮೈಸೂರು ಹಾಲು ಒಕ್ಕೂಟದ ಅಧ್ಯಕ್ಷ ಪಿ.ಎಂ.ಪ್ರಸನ್ನ, ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯ ಕುಮಾರ್, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಉಮಾಶಂಕರ್, ಓಂಪ್ರಕಾಶ್, ಸದಾನಂದ, ಕೆ.ಈರೇಗೌಡ, ಚೆಲುವರಾಜು, ಡಿ.ರಾಜೇಂದ್ರಪ್ಪ ಶಿವಾಮಿ, ನೀಲಾಂಬಿಕಾ ಮಹೇಶ್, ಲೀಲಾ ನಾಗರಾಜು, ದಾಕ್ಷಾಯಿಣಿ, ಪ್ರಧಾನ ವ್ಯವಸ್ಥಾಪಕ ಎಚ್.ಆರ್.ರಘು ಇನ್ನಿತರರು ಉಪಸ್ಥಿತರಿದ್ದರು.

ವಿಶ್ವ ಶೌಚಾಲಯ ದಿನದ ಜಾಗೃತಿ ಜಾಥಾ



ಮೈಸೂರು, ನ.20(ಆರ್‌ಕೆಬಿ)– ವಿಶ್ವ ಶೌಚಾಲಯ ದಿನದ ಅಂಗವಾಗಿ ದೊಡ್ಡಕಾನ್ಯ ಹಿರಿಯ ಪ್ರಾಥಮಿಕ ಶಾಲೆ, ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ ಜಂಟಿಯಾಗಿ ಜಾಗೃತಿ ಕಾರ್ಯಕ್ರಮ ನಡೆಸಿದವು. ಶೌಚಾಲಯದ ಬಳಕೆ ಮತ್ತು ನಿರ್ವಹಣೆಯ ಮಹತ್ವ ಕುರಿತು ಘೋಷಣೆಗಳ ಭಿತ್ತಿಪತ್ರಗಳನ್ನು ಹಿಡಿದ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು. ನೈರ್ಮಲ್ಯ ಸೌಲಭ್ಯಗಳ ಕೊರತೆಯು ಶಿಕ್ಷಣಕ್ಕೆ ಅಡಚಣೆಯಾಗಿದ್ದು, ನೈರ್ಮಲ್ಯ ಸಂಬಂಧಿತ ಸಮಸ್ಯೆಗಳಿಂದ ಮಕ್ಕಳು ಶಾಲೆ ತಪ್ಪಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಮತ್ತು ಸ್ವಚ್ಛತೆಗೆ ಆದ್ಯತೆ ನೀಡುವಂತೆ ಒತ್ತಾಯಿಸಲಾಯಿತು.

ಕೆಇಎ ವತಿಯಿಂದ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಪಿಜಿಸಿಇಟಿ, ಡಿಸಿಇಟಿ ಪರೀಕ್ಷೆ

● ಮೈಸೂರಲ್ಲಿ ಪಿಜಿಸಿಇಟಿ ಸಂಬಂಧ ಎಂಸಿಎಗೆ 2,615, ಎಂಬಿಎಗೆ 4,914, ಎಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್‌ಗೆ 378 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಭಾಗಿ ● ಮೈಸೂರಲ್ಲಿ ಡಿಸಿಇಟಿ ಪರೀಕ್ಷೆ ಎದುರಿಸಿದ 1,789 ಅಭ್ಯರ್ಥಿಗಳು



ಮೈಸೂರು,ನ.20(ಪಿಎಂ)– ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವತಿಯಿಂದ ಭಾನುವಾರ ರಾಜ್ಯಾದ್ಯಂತ ನಡೆದ ಪಿಜಿಸಿಇಟಿ ಪರೀಕ್ಷೆ (ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ–2022) ಸಂಬಂಧ ಮೈಸೂರು ನಗರದ ವಿವಿಧ ಕೇಂದ್ರಗಳಲ್ಲಿ ಎಂಸಿಎ ಕೋರ್ಸ್ ಪ್ರವೇಶಕ್ಕಾಗಿ 2,615 ಅಭ್ಯರ್ಥಿಗಳು ಹಾಗೂ ಎಂಬಿಎ ಕೋರ್ಸ್ ಪ್ರವೇಶಕ್ಕಾಗಿ 4,914 ಅಭ್ಯರ್ಥಿಗಳು ಪರೀಕ್ಷೆ ಬರೆದರು.

ಬೆಳಗ್ಗೆ 10.30ರಿಂದ 12.30ರವರೆಗೆ ನಡೆದ ಎಂಸಿಎ ಕೋರ್ಸ್‌ನ ಪ್ರವೇಶ ಪರೀಕ್ಷೆಯಲ್ಲಿ ನಗರದ 7 ಕೇಂದ್ರಗಳಲ್ಲಿ 2,615 ಅಭ್ಯರ್ಥಿಗಳು ಪರೀಕ್ಷೆ ಬರೆದರೆ, 506 ಅಭ್ಯರ್ಥಿಗಳು ಗೈರಾಗಿದ್ದರು. ಮಧ್ಯಾಹ್ನ 2.30ರಿಂದ ಸಂಜೆ 4.30ರವರೆಗೆ ನಡೆದ ಎಂಬಿಎ ಕೋರ್ಸ್ ಪ್ರವೇಶ ಪರೀಕ್ಷೆಯಲ್ಲಿ ನಗರದ 12 ಕೇಂದ್ರಗಳಲ್ಲಿ 4,914 ಅಭ್ಯರ್ಥಿಗಳು ಹಾಜರಿದ್ದರೆ, 279 ಅಭ್ಯರ್ಥಿಗಳು ಗೈರು ಹಾಜರಿದ್ದರು.

ಅಂತೆಯೇ ಶನಿವಾರ (ನ.19) ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಜ ಸರ್ಕಾರಿ ಪಿಯು ಕಾಲೇಜಿನ ಒಂದೇ ಕೇಂದ್ರದಲ್ಲಿ ನಡೆದ ಎಇ, ಎಂ.ಟೆಕ್ ಮತ್ತು ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯಲ್ಲಿ ನೋಂದಾಯಿಸಿದ್ದ 419 ಅಭ್ಯರ್ಥಿಗಳ ಪೈಕಿ 378 ಅಭ್ಯರ್ಥಿಗಳು ಪಿಜಿಸಿಇಟಿ ಪರೀಕ್ಷೆ ಬರೆದರು.

ಡಿಸಿಇಟಿ ಪರೀಕ್ಷೆ: ಕೆಇಎ ವತಿಯಿಂದ ಭಾನುವಾರ ರಾಜ್ಯಾದ್ಯಂತ ನಡೆದ ಡಿಸಿಇಟಿ (ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆ) ಪರೀಕ್ಷೆ ಸಂಬಂಧ ಮೈಸೂರಿನ ನಾಲ್ಕು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಿಗದಿಯಾಗಿದ್ದ ಪರೀಕ್ಷೆಯಲ್ಲಿ 1,789 ಅಭ್ಯರ್ಥಿಗಳು ಪರೀಕ್ಷೆ ಬರೆದರು. ನೋಂದಾಯಿಸಿದ್ದ 1,891 ಅಭ್ಯರ್ಥಿಗಳ ಪೈಕಿ 102 ಅಭ್ಯರ್ಥಿಗಳು ಗೈರಾಗಿದ್ದರು.

ಜೆಎಲ್‌ಬಿ ರಸ್ತೆಯ ಮಹಾರಾಜ ಸರ್ಕಾರಿ ಪಿಯು ಕಾಲೇಜು, ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಸರ್ಕಾರಿ ಪಿಯು ಕಾಲೇಜು, ನಜರ್‌ಬಾದಿನ ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪಿಯು ಕಾಲೇಜು ಹಾಗೂ ಸಿದ್ಧಾರ್ಥ ನಗರದ ಟೆರಿಷಿಯನ್ ಕಾಲೇಜಿನಲ್ಲಿ ವ್ಯವಸ್ಥೆಗೊಳಿಸಿದ್ದ ಕೇಂದ್ರಗಳಲ್ಲಿ ಡಿಸಿಇಟಿ ಪರೀಕ್ಷೆ ನಡೆಯಿತು. 2022ನೇ ಸಾಲಿನ ಎರಡನೇ ವರ್ಷದ ಮೂರನೇ ಸೆಮಿಸ್ಟರ್‌ನ ಇಂಜಿನಿಯರಿಂಗ್, ತಂತ್ರಜ್ಞಾನ, ಕೋರ್ಸ್‌ಗಳ ಪ್ರವೇಶಕ್ಕಾಗಿ ಡಿಸಿಇಟಿ ಪರೀಕ್ಷೆ ನಡೆಯಿತು. ಒಟ್ಟಾರೆ ಎರಡು ದಿನಗಳಲ್ಲಿ ನಗರದ 12 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು.



ಅಶೋಕಪುರಂ ಕ್ರೀಡಾಂಗಣದಲ್ಲಿ ಅಶೋಕಪುರಂ ಯುವ ಕ್ರಿಕೆಟರ್ಸ್ ವತಿಯಿಂದ ಆಯೋಜಿಸಲಾಗಿದ್ದ ನಾಲ್ವಡಿ ಕ್ರಿಕೆಟ್ ಕಪ್‌ನಲ್ಲಿ ಪ್ರಥಮ ಬಹುಮಾನ ಪಡೆದ ಪಿಬಿಜೆಡ್ ತಂಡಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆಕರ್ಷಕ ಟ್ರೋಫಿ ಹಾಗೂ 25 ಸಾವಿರ ನಗದು ಬಹುಮಾನ ವಿತರಿಸಿದರು. ಈ ವೇಳೆ ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಹಿರಿಯ ಕ್ರೀಡಾಪಟುಗಳಾದ ಭಾಸ್ಕರ್, ರಾಜು, ಸುಗುಣೇಶ್, ಆಯೋಜಕರಾದ ಸುಮನ್, ಚಂದನ್, ಪ್ರೀತಮ್, ಗೌರವ್, ರಾಕೇಶ್, ಉಲ್ಲಾಸ್, ಭರತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಸೋಮವಾರ 21 ನವೆಂಬರ್ 2022

ಈ ಬಾರಿ ಕೆ.ಆರ್.ನಗರದಲ್ಲಿ ನನ್ನ ಗೆಲುವು ಖಚಿತ

ಜನಾಶೀರ್ವಾದ ಯಾತ್ರೆಯಲ್ಲಿ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ವಿಶ್ವಾಸ

ಭೇರ್ಯ, ನ.20– ಜನಾಶೀರ್ವಾದ ಯಾತ್ರೆಗೆ ಜನಸಾಗರ ಹರಿದು ಬರುತ್ತಿದ್ದು, ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ನಗರ ಕ್ಷೇತ್ರದಲ್ಲಿ ನನ್ನ ಗೆಲುವು ಖಚಿತ ಎಂದು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿಯಲ್ಲಿ ಜನಾಶೀರ್ವಾದ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮುಂಜನಹಳ್ಳಿ, ಭೇರ್ಯ, ಮೇಲೂರು, ಮಿರ್ಲೆ, ನರಚನಹಳ್ಳಿ, ಹೊಸ ಅಗ್ರಹಾರ, ಅರ್ಜುನಹಳ್ಳಿ, ಅಡಗೂರು ಗ್ರಾಪಂ ವ್ಯಾಪ್ತಿಯಲ್ಲಿ ಜನಾಶೀರ್ವಾದ ಯಾತ್ರೆಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ತಮ್ಮ ಮನೆ ಮಗನಂತೆ ಆಶೀರ್ವಾದ ಮಾಡಿ ಅಭಿನಂದಿಸಿದ್ದಾರೆ ಎಂದರು.

ಜನಾಶೀರ್ವಾದ ಯಾತ್ರೆ ಪ್ರತಿ ಗ್ರಾಮಕ್ಕೂ ಭೇಟಿ ನೀಡಿದಾಗ ಗ್ರಾಮಸ್ಥರು ನನಗೆ ಬೆಂಬಲ ಸೂಚಿಸಿದ್ದಾರೆ. ಕೆಲವರು ಸ್ವಇಚ್ಛೆಯಿಂದ ಕಾಂಗ್ರೆಸ್ ಸೇರುತ್ತಿದ್ದಾರೆ. ಪಕ್ಷದ ಮುಖಂಡರ ಸಲಹೆಯಂತೆ ಜನಾಶೀರ್ವಾದ ಯಾತ್ರೆ ಆರಂಭಿಸಿದ್ದು, 40 ಸಾವಿರ ಕುಟುಂಬಗಳನ್ನು ಸಂಪರ್ಕ ಮಾಡಲಾಗಿದೆ. ಜನರಿಂದ ಉತ್ತಮ ಸ್ಪಂದನೆ ದೊರೆಯುತ್ತಿದ್ದು, ಈ ಬಾರಿ ನನ್ನ ಗೆಲುವು ಖಚಿತ



ಎಂದು ವಿಶ್ವಾಸ ವ್ಯಕ್ತಪಡಿಸಿದ ಡಿ.ರವಿಶಂಕರ್, ಪಕ್ಷದ ಕಾರ್ಯಕರ್ತರು ಚುನಾವಣೆ ಮುಗಿಯುವವರೆಗೂ ಇದೇ ಉತ್ಸಾಹದಲ್ಲಿರಬೇಕು ಎಂದು ಸಲಹೆ ನೀಡಿದರು.

ಗಂಧನಹಳ್ಳಿ ಕಾಂಗ್ರೆಸ್ ಓಟ್ ಬ್ಯಾಂಕ್ ಆಗಿದೆ. 2023 ವಿಧಾನಸಭಾ ಚುನಾವಣೆಯಲ್ಲಿ ಶೇ.100ರಷ್ಟು ಕಾಂಗ್ರೆಸ್‌ಗೆ ಮತ ನೀಡಿ ಎಂದರಲ್ಲದೆ, ಗ್ರಾಮಸ್ಥರು ಯಾವುದೇ ಆಸೆ ಆಮಿಷ ಮತ್ತು ಅಪಪ್ರಚಾರಗಳಿಗೆ ಕಿವಿಗೊಡದೆ ಎಚ್ಚರಿಕೆಯಿಂದ ಮತದಾನ ಮಾಡಬೇಕು ಎಂದು ಮನವಿ ಮಾಡಿದರು. ಇದಕ್ಕೂ ಮೊದಲು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಅವರಿಗೆ ಜೆಸಿಬಿ ಮೂಲಕ ಬೃಹತ್ ಗಾತ್ರದ ಹಾರ ಹಾಕಿದರಲ್ಲದೆ, ಹೂ ಮಳೆ ಸುರಿಸಿ ಸ್ವಾಗತಿಸಿದ ಗಂಧನಹಳ್ಳಿ ಗ್ರಾಮಸ್ಥರು, ಜನಾಶೀರ್ವಾದ ಯಾತ್ರೆಗೆ ಆಗಮಿಸಿದ ಮುಖಂಡರು ಮತ್ತು ಪಕ್ಷದ ಪದಾಧಿಕಾರಿಗಳನ್ನು ಸನ್ಮಾನಿಸಿದರು. ನಂತರ ಗ್ರಾಮದೇವತೆ ಹುಣಸಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಜನಾಶೀರ್ವಾದ ಯಾತ್ರೆಗೆ ಚಾಲನೆ ನೀಡಲಾಯಿತು.

ಈ ವೇಳೆ ಗಂಧನಹಳ್ಳಿ ಗ್ರಾಮದ ಯಜಮಾನ್ ರಘು, ಮಾಜಿ ಜಿಪಂ ಸದಸ್ಯರಾದ ಜಿ.ಆರ್. ರಾಮೇಗೌಡ,

> ಮುಂಬರುವ ಚುನಾವಣೆಯಲ್ಲಿ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಡಿ.ರವಿಶಂಕರ್ ಗೆಲುವು ಶತಸಿದ್ಧ. ಕಾಂಗ್ರೆಸ್ ಜನಾಶೀರ್ವಾದ ಯಾತ್ರೆಗೆ ಅಭೂತಪೂರ್ವ ಸ್ವಾಗತ, ಬೆಂಬಲ ದೊರೆತಿದೆ. ಯುವಕರ ಪಡೆ ಪಕ್ಷ ಸೇರುತ್ತಿರುವುದರಿಂದ ಡಿ.ರವಿಶಂಕರ್‌ಗೆ ಆನೆ ಬಲ ಬಂದಿದೆ.
>
> –ವೆಂಕಟೇಶ್, ಜಿಲ್ಲಾ ಕಾಂಗ್ರೆಸ್ ಮುಖಂಡ.

ಜಯರಾಮೇಗೌಡ, ಡೈರಿ ಅಧ್ಯಕ್ಷ ಗಾಂಧಿ ಶಿವಣ್ಣ, ಕಾರ್ಯದರ್ಶಿ ಜಿ.ಕೆ.ಮಹದೇವ, ಜಿಲ್ಲಾ ಕಾಂಗ್ರೆಸ್ ಮುಖಂಡ ವೆಂಕಟೇಶ್, ಪಿಕಾರ್ಡ್ ಬ್ಯಾಂಕ್ ಮಾಜಿ ನಿರ್ದೇಶಕ ಜಿ.ಎಂ.ಹೇಮಂತ್, ಮಾಜಿ ತಾಪಂ ಸದಸ್ಯ ಮಂಜುನಾಥ್, ಮಾಜಿ ಗ್ರಾಪಂ ಅಧ್ಯಕ್ಷ ಜಿ.ಆರ್.ಸತೀಶ್, ಯೋಗೇಶ್, ಜಿ.ಆರ್.ಕೃಷ್ಣೇಗೌಡ, ಮಾಜಿ ಸದಸ್ಯ ಎಸ್.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯ ಶಂಕರ್, ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ಕಿಟ್ಟಿ, ಜಿ.ಬಿ.ಮಂಜು ಅರಸ್, ಕೆಂಪರಾಜು, ಜಿ.ಡಿ.ಅರುಣ, ಹರೀಶ ಆಚಾರ್, ಕುರುಬರ ಸಂಘದ ಉಪಾಧ್ಯಕ್ಷ ಕೆ.ಎಂ.ಶ್ರೀನಿವಾಸ್, ನಿರ್ದೇಶಕರಾದ ಕೃಷ್ಣೇಗೌಡ, ಎಂ.ಎಸ್.ಅನಂತು, ಬುಡಿಗೌಡ ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

ಪಿ.ಪಟ್ಟಣ ಕಸಬಾ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪಿರಿಯಾಪಟ್ಟಣ, ನ.20– ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಪಿ.ಕೆ.ಕುಮಾರ್, ಉಪಾಧ್ಯಕ್ಷರಾಗಿ ಕರಿನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕರಿನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷ ಕುಮಾರ್ ಮಾತನಾಡಿ, ಮುಂದಿನ ದಿನಗಳಲ್ಲಿ ಸಂಘಕ್ಕೆ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ವಿತರಿಸುವ ಜೊತೆಗೆ ಸಂಘದ ಏಳಿಗೆಗಾಗಿ ಕಾರ್ಯಕ್ರಮ ರೂಪಿಸುತ್ತೇನೆ ಎಂದರು.

ಈ ವೇಳೆ ನಿರ್ದೇಶಕರಾದ ರಮೇಶ್, ಹೆಚ್.ಬಿ.ನಟರಾಜು, ಸೈಯದ್, ಸಿರಾಜ್, ಸಣ್ಣಪ್ಪ, ಬಿ.ಆರ್.ಸತೀಶ್, ಕುಮಾರ್, ಪಾರ್ವತಿ, ಗೀತಾ, ಸಹಕಾರ ಬ್ಯಾಂಕ್ ಪ್ರತಿನಿಧಿ ಜಗದೀಶ್, ಸಂಘದ ಕಾರ್ಯ ನಿರ್ವಹಣಾಧಿಕಾರಿ ಪ್ರವೀಣ್, ಸದಸ್ಯರು ಹಾಜರಿದ್ದರು.

ತಿ.ನರಸೀಪುರದಲ್ಲಿ ವಿಜೃಂಭಣೆಯ ಶ್ರೀಶನೇಶ್ವರಸ್ವಾಮಿ ಉತ್ಸವ

ತಿ.ನರಸೀಪುರ, ನ.20– ಪಟ್ಟಣದ ಶ್ರೀಶನೇಶ್ವರಸ್ವಾಮಿ ಸೇವಾ ಸಮಿತಿಯಿಂದ ಶ್ರೀಶನೇಶ್ವರಸ್ವಾಮಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ವಾಟಾಳು ಶ್ರೀಮಠದ ಡಾ.ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಶನೇಶ್ವರಸ್ವಾಮಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಶನಿ ದೇವರ ಕೃಪೆ ಇದ್ದಲ್ಲಿ ಮಾತ್ರವೇ ನೆಮ್ಮದಿಯಿಂದ ಬದುಕಲು ಸಾಧ್ಯ. ಶನಿ ದೇವರು ಅಷ್ಟದಿಕ್ಪಾಲಕರಲ್ಲಿ ಪ್ರಮುಖ ದೇವರಾಗಿದ್ದು, ಶನಿದೇವರ ಒಳ್ಳೆ ದೃಷ್ಟಿ ಜನರ ಮೇಲೆ ಬೀಳಲಿ ಎಂದ ಅವರು, ಸೇವಾ ಸಮಿತಿಯವರು ಕಳೆದ 22 ವರ್ಷಗಳಿಂದ ಉತ್ಸವವನ್ನು ವೈಭವಯುತವಾಗಿ ಆಚರಿಸಿಕೊಂಡು



ಬರುತ್ತಿದ್ದಾರೆ. ಸೇವಾ ಸಮಿತಿಯವರು ಇನ್ನಷ್ಟು ವಿಜೃಂಭಣೆಯಿಂದ ಉತ್ಸವ ನಡೆಸುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಹರಸಿದರು. ಮುಖಂಡ ಹೆಳವರ ಹುಂಡಿ ಸಿದ್ದಪ್ಪ ಮಾತನಾಡಿದರು. ಇದೇ ವೇಳೆ ಶನೇಶ್ವರಸ್ವಾಮಿ ಭಾವಚಿತ್ರದ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಭಾಗವಹಿಸಿದ್ದವು. ಈ ವೇಳೆ ಸೇವಾ ಸಮಿತಿ ಅಂಗಡಿ ನಾಗೇಶ್, ಸುಭಾಷ್ ಚೌಧರಿ, ಪೆಟ್ರೋಲ್ ಬಂಕ್ ಚಂದು, ಸಾಲೂರು ಸ್ವಾಮಿ, ಫ್ಯಾನ್ಸಿ ಮೋಹನ್, ನಾಗರಾಜು, ಕೃಷ್ಣಪ್ಪ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಮೆಡಿಕಲ್ ನಾಗರಾಜು, ಶ್ರೀಕಂಠ ಮತ್ತಿತರರಿದ್ದರು.

ಎಸ್ಟಿ, ಎಸ್ಸಿ ಸಮುದಾಯಕ್ಕೆ 75 ಯುನಿಟ್ ಉಚಿತ ವಿದ್ಯುತ್



ನಂಜನಗೂಡು, ನ.20– ಬಿಪಿಎಲ್ ಕಾರ್ಡ್ ಹೊಂದಿರುವ ಎಸ್ಟಿ, ಎಸ್ಸಿ ಜನಾಂಗಕ್ಕೆ ಸರ್ಕಾರ ಅಮೃತ ಜ್ಯೋತಿ ಯೋಜನೆಯಡಿ 75 ಯುನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುತ್ತಿದ್ದು, ಸಮರ್ಪಕ ದಾಖಲೆ ನೀಡಿ ಯೋಜನೆ ಸದುಪಯೋಗ ಪಡೆದುಕೊಳ್ಳಿ ಎಂದು ಸೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಸಲಹೆ ನೀಡಿದರು.

ತಾಲೂಕಿನ ತಾಯೂರು ಗ್ರಾಮದಲ್ಲಿ ನಡೆದ ವಿದ್ಯುತ್ ಅದಾಲತ್ ಕಾರ್ಯಕ್ರಮದಲ್ಲಿ ಗ್ರಾಹಕರ ಅಹವಾಲು ಆಲಿಸಿ ಮಾತನಾಡಿದ ಅವರು, ಸರ್ಕಾರ ಬಡವರ ನೆರವಿಗೆ ಧಾವಿಸಲು 75 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡುತ್ತಿದೆ. ಈ ಯೋಜನೆಗೆ ನೋಂದಣಿ ಮಾಡಿಕೊಳ್ಳಲು ವಿದ್ಯುತ್ ಬಿಲ್, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಇತರೆ ದಾಖಲಾತಿ ನೀಡುವ ಮೂಲಕ ಯೋಜನೆ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

ವಿದ್ಯುತ್‌ಗೆ ಸಂಬಂಧಿಸಿದ ದೂರುಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಸೂಚಿಸುವ ಸಲುವಾಗಿ ಸರ್ಕಾರ ಪ್ರತಿ ತಿಂಗಳು 3ನೇ ಶನಿವಾರ ಗ್ರಾಮೀಣ ಭಾಗದಲ್ಲೇ ವಿದ್ಯುತ್ ಅದಾಲತ್ ಕಾರ್ಯಕ್ರಮ ರೂಪಿಸಿದೆ. ಈ ಕಾರ್ಯಕ್ರಮದಲ್ಲಿ ನಿಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ವಿದ್ಯುತ್ ಪರಿವರ್ತಕ ಸ್ಥಳಾಂತರಿಸಿ, ಜೋತು ಬಿದ್ದಿರುವ ವಿದ್ಯುತ್ ತಂತಿ ಸರಿಪಡಿಸಿ ಮತ್ತು ಪರಿವರ್ತಕ ಅಳವಡಿಸಿ ಎಂಬುದು ಸೇರಿದಂತೆ 14 ದೂರುಗಳು ಸ್ವೀಕೃತಗೊಂಡಿವೆ. ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಾಗಿದೆ ಎಂದರು.

ಸಮಾರಂಭದಲ್ಲಿ ತಾಯೂರು ಗ್ರಾಪಂ ಅಧ್ಯಕ್ಷ ಬಸವರಾಜು, ಜೆಇ ಮಂಜುನಾಥ್ ಸೇರಿದಂತೆ ಹಲವರಿದ್ದರು.

ಸಂಸ್ಕೃತಿ ರೂಪಿಸಿದ ಮಹಾಕೃತಿ ರಾಮಾಯಣ



ಸರಗೂರು, ನ.20– ರಾಮಾಯಣ ಮಹಾಕಾವ್ಯ ಸಂಸ್ಕೃತಿ ರೂಪಿಸಿದ ಮಹಾಕೃತಿ ಎಂದು ಜೆಡಿಎಸ್ ಮುಖಂಡ ಎಂ.ಕೆ. ಕೃಷ್ಣನಾಯಕ ತಿಳಿಸಿದರು.

ತಾಲೂಕಿನ ಬಿದರಹಳ್ಳಿ ನಾಯಕ ಸಮಾಜದಿಂದ ಭಾನುವಾರ ನಡೆದ ವಾಲ್ಮೀಕಿ ಜಯಂತೋತ್ಸವದಲ್ಲಿ ಮಾತನಾಡಿದ ಅವರು, ವಾಲ್ಮೀಕಿಯಲ್ಲಿ ಅಡಗಿದ್ದ ಪ್ರತಿಭೆ ಅನಾವರಣಗೊಂಡದ್ದು ಅವರ ಅಂತರಂಗದಲ್ಲಿ ದಟ್ಟವಾಗಿ ನೆಲೆಯಾಗಿದ್ದ ಕಾರುಣ್ಯದಿಂದಲೇ ಎನ್ನುವುದು ಗಮನಾರ್ಹ. ವಾಲ್ಮೀಕಿ ರಾಮಾಯಣವನ್ನು ಎಲ್ಲರೂ ಓದಿ ಗ್ರಹಿಸಿಕೊಳ್ಳಬೇಕು ಎಂದರು.

ಇದಕ್ಕೂ ಮುನ್ನಾ ನಡೆದ ಮೆರವಣಿಗೆಯಲ್ಲಿ ರಾಮಾಯಣ ಬಿಂಬಿಸುವ 9 ಸ್ತಬ್ಧ ಚಿತ್ರಗಳು, ವೀರಗಾಸೆ, ಮಂಗಳವಾದ್ಯ, ಕಂಸಾಳೆ, ಸತ್ತಿಗೆಗಳು ಇನ್ನಿತರ ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ಗ್ರಾಮದ ಯಜಮಾನ ಪುಟ್ಟಸಿದ್ದನಾಯ್ಕ, ಅಂಕನಾಯಕ, ವಿಜಯಕುಮಾರ್, ವೆಂಕಟೇಶ್, ಪ್ರಕಾಶ್, ಶ್ರೀನಿವಾಸ್, ಭೀಮನಾಯಕ, ಮಲಿನಾಯಕ, ಬಿ.ಎಲ್.ಶಿವಣ್ಣ, ಸಿದ್ದನಾಯಕ, ಬಿ.ವಿ.ಶಂಕರ್, ಪುಟ್ಟಮಾದನಾಯಕ ಇನ್ನಿತರರಿದ್ದರು.

ಸ್ಮಶಾನ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ತಿ.ನರಸೀಪುರ, ನ.20– ಪಟ್ಟಣದ ವಾರ್ಡ್ ನಂ.2ರ ತಿರುಮಕೂಡಲಿನ ಪಿಟೀಲು ಚೌಡಯ್ಯ ವೃತ್ತದ ಬಳಿಯ ಕಾವೇರಿ ನದಿ ತಪ್ಪಲಿನಲ್ಲಿರುವ ಸ್ಮಶಾನ ಅಭಿವೃದ್ಧಿ ಕಾಮಗಾರಿಗೆ ಪುರಸಭಾ ಸದಸ್ಯ ಸಿಸ್ಟವ್ ಸಿದ್ದು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 2018–2019ನೇ ಸಾಲಿನ ಪುರಸಭೆಯ 14ನೇ ಹಣಕಾಸು ಯೋಜನೆಯಡಿ 2.50 ಲಕ್ಷ ರೂ. ವೆಚ್ಚದಲ್ಲಿ ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಸ್ಮಶಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿಪಡಿಸಲಾಗುವುದು ಎಂದರು.

ಸ್ಮಶಾನ ಕಾವೇರಿ ನದಿ ಸಮೀಪವಿರುವುದರಿಂದ ಪ್ರವಾಹ ಬಂದಾಗ ನೀರು ತುಂಬಿಕೊಂಡು ಶವ ಸಂಸ್ಕಾರ ಮಾಡಲು ಕಷ್ಟವಾಗುತ್ತಿತ್ತು. ಹೀಗಾಗಿ ತಿರುಮಕೂಡಲಿನ ಜನತೆ ಕಾಂಪೌಂಡ್ ನಿರ್ಮಾಣ ಮಾಡುವಂತೆ ಮಾಡಿದ ಮನವಿ ಮೇರೆಗೆ ಈ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದರು.

ಈ ವೇಳೆ ಮಾಜಿ ಗ್ರಾಪಂ ಉಪಾಧ್ಯಕ್ಷ ತಿರುಮಕೂಡಲು ಪುಟ್ಟು, ಯಜಮಾನರಾದ ನಟರಾಜು, ಕೃಷ್ಣ, ಮಹದೇವಣ್ಣ, ಸೋಮಣ್ಣ, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಆರ್.ಚೇತನ್, ಜೆಡಿಎಸ್ ಮುಖಂಡ ಎಲ್.ರವಿ, ಚಂದ್ರಶೇಖರ್, ಗುತ್ತಿಗೆದಾರ ಮಹದೇವಸ್ವಾಮಿ, ಇಂಜಿನಿಯರ್ ನಾಗರಾಜು ಮತ್ತಿತರರಿದ್ದರು.



ಕೋಟೆಯಲ್ಲಿ ನಾಯಕ ನೌಕರರ ಸಂಘದ ವಾರ್ಷಿಕ ಮಹಾಸಭೆ



ಹೆಚ್.ಡಿ.ಕೋಟೆ, ನ.20– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ನಾಯಕ ನೌಕರರ ಸಂಘದಿಂದ ಆಯೋಜಿಸಿದ್ದ ಸಂಘದ ವಾರ್ಷಿಕ ಮಹಾಸಭೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳು ತಂದೆ, ತಾಯಿ ಹಾಗೂ ಗುರು ಹಿರಿಯರಿಗೆ ಗೌರವ ನೀಡಬೇಕು. ನೀವು ಕಲಿತ ವಿದ್ಯೆ ನಿಮ್ಮ ನಡೆ ನುಡಿಗಳನ್ನು ತಿಳಿಸುತ್ತದೆ. ಉದ್ಯೋಗಕೊಸ್ಕರ ವಿದ್ಯಾಭ್ಯಾಸ ಸೀಮಿತ ಮಾಡಿಕೊಳ್ಳಬೇಡಿ. ಪ್ರತಿಯೊಬ್ಬರೂ ಸಮಾಜ ಸೇವೆಯಲ್ಲಿ ತೊಡಗಬೇಕು. ಸಮಾಜದಲ್ಲಿ ಹುಟ್ಟಿದ ಮೇಲೆ ನಾವು ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು. ಆಗ ಮಾತ್ರ ಸಾರ್ಥಕ ಬದುಕು ಸಾಧ್ಯ ಎಂದರು.

ವಾಣಿಜ್ಯ ತೆರಿಗೆ ಉಪ ಆಯುಕ್ತ ಶ್ರೀಧರ ನಾಯಕ ಮಾತನಾಡಿ, ವಿದ್ಯಾರ್ಥಿಗಳು ಪಡೆಯುವ ಪುರಸ್ಕಾರ ಮೌಲ್ಯದಿಂದ ಕೂಡಿರುತ್ತದೆ. ಹೀಗಾಗಿ ಮುಂದಿನ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವೈದ್ಯಕೀಯ ವಿದ್ಯಾರ್ಥಿಗಳು, ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ತಾಯಿ ನಾಗಮ್ಮ, ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಸಿದ್ದನಾಯಕ, ಉಪಾಧ್ಯಕ್ಷ ಚನ್ನನಾಯಕ, ಗೌರವಾಧ್ಯಕ್ಷ ಚಿಕ್ಕನಾಯಕ, ಸಹ ಕಾರ್ಯದರ್ಶಿ ನಾಗನಾಯಕ, ಖಜಾಂಚಿ ಚನ್ನನಾಯಕ, ಸಂಘಟನಾ ಕಾರ್ಯದರ್ಶಿ ವೆಂಕಟರಂಗನಾಯಕ, ಪುರಸಭಾಧ್ಯಕ್ಷೆ ಅನಿತಾ, ಸದಸ್ಯರಾದ ಸರೋಜಮ್ಮ, ನವೀನ, ನಾಗರಾಜು, ನಂಜುಂಡನಾಯಕ, ತಾಲೂಕು ನಾಯಕ ಸಂಘದ ಅಧ್ಯಕ್ಷ ದೊಡ್ಡನಾಯಕ, ಕ್ಯಾತನಹಳ್ಳಿ ನಾಗರಾಜು, ಸರಗೂರು ಪಪಂ ಸದಸ್ಯ ಶ್ರೀನಿವಾಸ್, ಮುಖಂಡರಾದ ಶಂಭುಲಿಂಗ ನಾಯಕ, ಸಿದ್ದರಾಜು, ಶ್ರೀನಿವಾಸ್, ರಾಜನಾಯಕ, ಮಹದೇವಪ್ಪ, ನಾಗನಾಯಕ, ವೆಂಕಟಸುಬ್ಬನಾಯಕ, ನಾಗರಾಜ ನಾಯಕ, ಸೋಮನಾಯಕ ಇತರರಿದ್ದರು.

ದೇಶ, ಸಂವಿಧಾನ ರಕ್ಷಣೆಗಾಗಿ ಕಾಂಗ್ರೆಸ್ ಬೆಂಬಲಿಸಿ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮನವಿ

ಮಲ್ಕುಂಡಿ, ನ.20– ದೇಶ ಹಾಗೂ ಸಂವಿಧಾನ ರಕ್ಷಣೆಗಾಗಿ ಕಾಂಗ್ರೆಸ್ ಬೆಂಬಲಿಸುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮನವಿ ಮಾಡಿದರು.

ಇಲ್ಲಿಗೆ ಸಮೀಪದ ಹುರ, ಹಾಡ್ಯ ಗ್ರಾಪಂ ವ್ಯಾಪ್ತಿಯ ಯಡಹಳ್ಳಿ, ಮಡಿಕೆಹುಂಡಿ, ಮೂಡಲಹುಂಡಿ, ಜಾಲಹಳ್ಳಿ, ಅರಿಯೂರು, ಚನ್ನಪಟ್ಟಣ, ಸಿದ್ದೇಗೌಡನಹುಂಡಿ ಗ್ರಾಮಗಳಲ್ಲಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳು ಹೊರ ದೇಶದಿಂದ ಕಪ್ಪು ಹಣ ತಂದು ಬಡಜನರ ಖಾತೆಗೆ ಹಾಕುತ್ತೇವೆ. ಯುವಕರಿಗೆ ಉದ್ಯೋಗ ನೀಡುತ್ತೇವೆಂದು ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ಉದ್ಯೋಗ ನೀಡದೆ, ಹಣ ಹಾಕದೆ ದೇಶ ಹಾಗೂ ರಾಜ್ಯ ಲೂಟಿ ಮಾಡಲು ಮುಂದಾಗಿದೆ. ದೇಶದಲ್ಲಿ ಜೀತ ಪದ್ಧತಿ ನಿರ್ಮೂಲನೆ, ದಲಿತರಿಗೆ ಹಲವು ಜನಪರ ಯೋಜನೆ ಜಾರಿಗೆ ತಂದಿರುವುದು ಕಾಂಗ್ರೆಸ್ ಸರ್ಕಾರ. ದೇಶ ಹಾಗೂ ಸಂವಿಧಾನ ಉಳಿಯಬೇಕೆಂದರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಆದ್ದರಿಂದ ಕಾರ್ಯಕರ್ತರು



ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳನ್ನು ಪ್ರತಿಯೊಬ್ಬರಿಗೂ ತಿಳಿಸಬೇಕು ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕಾಂಗ್ರೆಸ್ ಅಧಿಕಾರವಧಿಯಲ್ಲಿ ಬಡವರಿಗೆ ಅಕ್ಕಿಭಾಗ್ಯ, ಮಕ್ಕಳಿಗೆ ಕ್ಷೀರಭಾಗ್ಯ ಹಾಗೂ ರೈತರ ಸಾಲ ಮನ್ನಾ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಈಗಿನ ಬಿಜೆಪಿ ಸರ್ಕಾರ ಶಾಲಾ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ಸಂಪೂರ್ಣ ವಿಫಲವಾಗಿದೆ. ಇದೀಗ ಶಾಲಾ ಶುಲ್ಕ ಹೆಚ್ಚಳ ಮಾಡಿದೆ ಇಂತಹ ಸರ್ಕಾರ ನಮಗೆ ಬೇಕೇ ಎಂದು ಪ್ರಶ್ನಿಸಿದ ಅವರು, ಪ್ರತಿ ಗ್ರಾಮಗಳ ಎಲ್ಲಾ ಜನಾಂಗದ ಬೀದಿಗಳಿಗೆ ಕಾಂಕ್ರೀಟ್ ರಸ್ತೆ ನೀಡಿರುವುದು ಕಾಂಗ್ರೆಸ್ ಸರ್ಕಾರ. ಈ ಭಾಗದ 124 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ಚಾಲನೆ ನೀಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ. ಈಗಿನ ಬಿಜೆಪಿ ಸರ್ಕಾರ ಹೊಸ ಅನುದಾನ ನೀಡುವಲ್ಲಿ ಸಂಪೂರ್ಣ ವಿಫಲವಾಗಿದೆ. ದೇಶದ ಜನರ ಹಿತದೃಷ್ಟಿಯಿಂದ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಒಗ್ಗಟ್ಟಿನಿಂದ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಜಿಪಂ ಮಾಜಿ ಅಧ್ಯಕ್ಷೆ ಲತಾ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಯುವ ಘಟಕದ ಅಧ್ಯಕ್ಷ ದೇಬೂರು ಅಶೋಕ್, ಕೆಪಿಸಿಸಿ ಎಸ್ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿನಾಯಕ, ಕೆಪಿಸಿಸಿ ಸದಸ್ಯ ಬಸವರಾಜ್, ಜಿಪಂ ಮಾಜಿ ಉಪಾಧ್ಯಕ್ಷ ಶಂಕರಪ್ಪ ವಕೀಲ ನಾಗರಾಜಯ್ಯ, ಗ್ರಾಪಂ ಸದಸ್ಯ ಕೃಷ್ಣಮೂರ್ತಿ, ಮುಖಂಡರಾದ ಜಯರಾಂ, ರಾಜು, ನಾಗೇಶ್, ಶಿವಣ್ಣ, ಸಂಗರಾಜು ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಟ್ಟಡ ಉದ್ಘಾಟನೆ



ತಿ.ನರಸೀಪುರ, ನ.20– ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ಪುರುಷರು ಹಸ್ತಕ್ಷೇಪ ಮಾಡದೇ ಅವರಿಗೆ ಸಹಕಾರ ನೀಡಿದರೆ ಸಂಘ ಅಭಿವೃದ್ಧಿ ಕಾಣಲಿದೆ ಎಂದು ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಅಭಿಪ್ರಾಯಪಟ್ಟರು.

ತಾಲೂಕಿನ ಚಿಕ್ಕಬೂಹಳ್ಳಿಯಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳಾ ಸಬಲೀಕರಣ ಉದ್ದೇಶದೊಂದಿಗೆ 2006ರಲ್ಲಿ ಕೇಂದ್ರ ಸರ್ಕಾರ ಹೊಸ ಯೋಜನೆ ಜಾರಿ ಮಾಡಿದ ಹಿನ್ನೆಲೆಯಲ್ಲಿ ಮಹಿಳಾ ಸೊಸೈಟಿಗಳನ್ನು ತೆರೆಯಲಾಯಿತು. ಯೋಜನೆ ಜಾರಿಯಾದ ವೇಳೆ ತಾಲೂಕಿನ ಸೊಸೈಟಿ ಅಧ್ಯಕ್ಷನಾಗಿದ್ದ ನಾನು ಮಹಿಳಾ ಸೊಸೈಟಿ ತೆರೆಯಲು ಹೆಚ್ಚಿನ ಪ್ರೋತ್ಸಾಹ ನೀಡಿದ್ದೆ. ಮಹಿಳೆಯರು ವಿದ್ಯಾವಂತರಾದರೆ ಸೊಸೈಟಿಗಳು ಹೆಚ್ಚಿನ ಅಭಿವೃದ್ಧಿಯತ್ತ ಮುನ್ನಡೆಯಲಿದ್ದು, ಗ್ರಾಮದಲ್ಲಿ ಸೊಸೈಟಿ ಪ್ರಾರಂಭಿಸಿದ 10 ವರ್ಷಗಳಲ್ಲೇ ನೂತನ ಕಟ್ಟಡ ನಿರ್ಮಾಣವಾಗಿರುವುದು ಇದಕ್ಕೆ ಉತ್ತಮ ಉದಾಹರಣೆ ಎಂದರು.

ಗ್ರಾಮದಲ್ಲಿ ಡೈರಿ ಕಟ್ಟಡ ನಿರ್ಮಾಣಕ್ಕೆ ಮೈಮುಲ್‌ನಿಂದ 11.50 ಲಕ್ಷ ರೂ. ನೀಡಿದ್ದು, ಇನ್ನುಳಿಕೆ ಹಣವನ್ನು ಸಂಘದ ಸದಸ್ಯರೇ ಭರಿಸಿ ಉತ್ತಮ ಡೈರಿ ಕಟ್ಟಡ ನಿರ್ಮಿಸಿದ್ದಾರೆ. ಸಂಘ ಅಭಿವೃದ್ಧಿಯಾಗಬೇಕಾದರೆ ಹಾಲು ಉತ್ಪಾದಕರ ಸಹಕಾರ ಮುಖ್ಯ. ಹೀಗಾಗಿ ಗುಣಮಟ್ಟದ ಹಾಲು ಸರಬರಾಜು ಮಾಡಿ ಸಂಘದ ಏಳಿಗೆಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಮೈಮುಲ್ ನಿರ್ದೇಶಕ ಚೆಲುವರಾಜು ಮಾತನಾಡಿ, ರೈತರು ಸರಬರಾಜು ಮಾಡುವ ಹಾಲಿಗೆ ಮೈಮುಲ್ ಹೆಚ್ಚಿನ ಹಣ ನೀಡುತ್ತಿದೆ. ಮಂಡ್ಯದಲ್ಲಿ 28, ಚಾಮರಾಜನಗರದಲ್ಲಿ 26 ರೂ. ನೀಡಲಾಗುತ್ತಿದೆ. ಹಾಲಿನ ದರ ಏರಿಕೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದ್ದು, ಸರ್ಕಾರ ಸಹ 3 ರೂ. ಹೆಚ್ಚು ಮಾಡುವುದಾಗಿ ಭರವಸೆ ನೀಡಿದೆ ಎಂದರು.

ಸಂಘದ ಅಧ್ಯಕ್ಷೆ ಪವಿತ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ, ಉಪ ವ್ಯವಸ್ಥಾಪಕ ಡಾ.ಸಿ.ದಿವಾಕರ್, ಬೆನಕನಹಳ್ಳಿ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷ ಮಧುಕುಮಾರ್, ಧರ್ಮಸ್ಥಳ ಕ್ಷೇತ್ರಾಭಿವೃದ್ಧಿ ಯೋಜನೆ ವಿಸ್ತರಣಾಧಿಕಾರಿ ಹನುಮಂತಪ್ಪ ಅಂಗಡಿ, ಸಂಘದ ಸಿಇಓ ಮಂಜುಳಾ ಸೇರಿದಂತೆ ಇತರರಿದ್ದರು.

ಕಂಸಾಳೆ ಕಲಾವಿದ ಪುಟ್ಟಸ್ವಾಮಿ ನಿಧನ



ಸುತ್ತೂರು, ನ.20– ಗ್ರಾಮದ ನಿವಾಸಿ ಕಂಸಾಳೆ ಪುಟ್ಟಸ್ವಾಮಿ (55) ಭಾನುವಾರ ನಿಧನರಾದರು. ಮೃತರು ಪತ್ನಿ, ಮೂವರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸಂಜೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖ್ಯಾತ ನಟಿ ಪ್ರಿಯಾಂಕ ಉಪೇಂದ್ರ, ಝೀ ವಾಹಿನಿ ಬಿಸಿನೆಸ್ ಮುಖ್ಯಸ್ಥ ರಾಘವೇಂದ್ರ ಹುಣಸೂರುಗೆ 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ



ಮೈಸೂರು, ನ.20(ಜಿಎ)–ಮೈಸೂರಿನ ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ಶ್ರೀ ನಿಮಿಷಾಂಬ ಡಾನ್ಸ್ ಪ್ರಮೋಟರ್ಸ್ ವತಿಯಿಂದ ಆಯೋಜಿಸಿದ್ದ 25ನೇ ವರ್ಷದ 'ಹೆಜ್ಜೆ–ಗೆಜ್ಜೆ' ಹಬ್ಬದ ಸಂಭ್ರಮದಲ್ಲಿ ಖ್ಯಾತ ನಟಿ ಪ್ರಿಯಾಂಕ ಉಪೇಂದ್ರ ಹಾಗೂ ಝೀ ವಾಹಿನಿಯ ಬಿಸಿನೆಸ್ ಹೆಡ್ ರಾಘವೇಂದ್ರ ಹುಣಸೂರು ಅವರಿಗೆ 'ಕನ್ನಡ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಇದೇ ವೇಳೆ 25ನೇ ವರ್ಷದ ಸಂಭ್ರಮದ ಅಂಗವಾಗಿ ಸುಮಾರು 500 ಕಲಾವಿದರಿಂದ ಭರತನಾಟ್ಯ, ಕೂಚುಪುಡಿ, ಕಥಕ್, ಮೋಹಿನಿಯಾಟ್ಟಂ, ಒಡಿಸಿ, ಕೊಡವ, ಡೋಳ್ ಕುಣಿತ, ಪೂಜಾ ಕುಣಿತ ಸೇರಿದಂತೆ ಭಾರತದ ವಿವಿಧ ರಾಜ್ಯಗಳ 30ಕ್ಕೂ ಹೆಚ್ಚು ಪ್ರಕಾರದ 'ಮೇರಾ ಭಾರತ್ ನೃತ್ಯೋತ್ಸವ' ಎಲ್ಲರ ಗಮನ ಸೆಳೆಯಿತು.

ನಂತರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಒಂದು ವಿಶ್ವ ವಿದ್ಯಾನಿಲಯ ಮಾಡಬೇಕಿದ್ದ ಕೆಲಸವನ್ನು ಈ ಕುಟುಂಬ ಮಾಡುತ್ತಿದೆ. ಒಂದು ಊರು ಸಂವೃದ್ಧಿಯಾಗಿರಬೇಕು ಎಂದರೆ, ಕಲೆ, ನೃತ್ಯ, ನಾಟಕ ಎಲ್ಲಾ ಸಾಂಸ್ಕೃತಿಕತೆ ಹೊಂದಿರಬೇಕು. ಅದನ್ನು ಮೈಸೂರು ಮಹಾರಾಜರು ಮಾಡಿದ್ದರು. ಈಗ ಈ ಪರಂಪರೆಯನ್ನು ಇಂತಹ ಕಲಾವಿದರು ಮುಂದುವರೆಸುತ್ತಿದ್ದಾರೆ. ಈ ಸಂಸ್ಥೆ ಯಶಸ್ವಿಯಾಗಲಿ, ಪ್ರಖ್ಯಾತಿಗಳಿಸಲಿ ಎಂದು ಆಶಿಸಿದರು.

'ಕನ್ನಡ ರತ್ನ' ಪ್ರಶಸ್ತಿ ಸ್ವೀಕರಿಸಿದ ನಟಿ ಪ್ರಿಯಾಂಕ ಉಪೇಂದ್ರ ಮಾತನಾಡಿ, ನನಗೆ ಬೆಂಗಳೂರಿಗಿಂತ ಮೈಸೂರು ಅಚ್ಚುಮೆಚ್ಚು. ಇಲ್ಲಿನ ಜನರು ಚಿತ್ರರಂಗವನ್ನು ಬಹಳಷ್ಟು ಇಷ್ಟ ಪಡುತ್ತಾರೆ. ನೃತ್ಯ ಎಂಬುದು ಧ್ಯಾನವಿದ್ದಂತೆ. ಜೀವನದ ಪ್ರತಿ ಹಂತದಲ್ಲಿಯೂ ಅದು ಸಹಕಾರಿಯಾಗಲಿದೆ ಎಂದರು.

ಮೈಸೂರು ತೊರೆದು ಬೆಂಗಳೂರಿಗೆ ಹೋಗಬೇಕು ಎಂದು ಕನಸು ಕಟ್ಟಿಕೊಂಡಿದ್ದು, ಇದೇ ಮಾನಸಗಂಗೋತ್ರಿಯಲ್ಲಿ. ಅಂದು ರಾತ್ರಿ ಇಲ್ಲಿ ಕುಳಿತು ಯೋಚಿಸಿ ನಿರ್ಧಾರ ತೆಗೆದುಕೊಂಡಿದ್ದೆ. ನಾವು ವಾಹಿನಿಗಳಲ್ಲಿ ಕಮರ್ಷಿಯಲ್ ಭಾಗವನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಕಾರ್ಯಕ್ರಮವನ್ನು ರೂಪಿಸುತ್ತೇವೆ. ಆದ್ದರಿಂದ ಎಲ್ಲಾ ಕ್ಷಣದಲ್ಲಿಯೂ ಸಂಸ್ಕೃತಿಗೆ ಒತ್ತುಕೊಡಲು ಸಾಧ್ಯವಾಗುವುದಿಲ್ಲ. ಆದರೆ, ಈ ಸಂಸ್ಥೆಯ ಗುರು, ಶಿಷ್ಯ ಹಾಗೂ ಪೋಷಕರು ನಮ್ಮ ಸಂಸ್ಕೃತಿಯನ್ನು ಉಳಿಸಲು ಶ್ರಮಿಸುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆ ಎಂದು ಖಾಸಗಿ ವಾಹಿನಿ ಬಿಸಿನೆಸ್ ಹೆಡ್ ರಾಘವೇಂದ್ರ ಹುಣಸೂರು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರವೀಣ್ ಜೈನ್, ರೇವತಿ ಕಾಮತ್, ಅನಿಲ್ ಆರ್. ಜೈನ್, ಎ.ಪಿ. ಶ್ರೀನಿವಾಸ್ ಅವರಿಗೆ ಹೆಜ್ಜೆ–ಗೆಜ್ಜೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಹೆಚ್.ಸಿ.ಜಿ ಗ್ರೂಪ್ ಆಫ್ ಹಾಸ್ಪಿಟಲ್ ಮತ್ತು ಭಾರತ್ ಕ್ಯಾನ್ಸರ್ ಆಸ್ಪತ್ರೆ ಛೇರ್‌ಮನ್ ಡಾ.ಬಿ.ಎಸ್. ಅಜಯ್‌ಕುಮಾರ್, ಚಲನಚಿತ್ರ ನಿರ್ದೇಶಕ ಸುಧಾಕರ್ ಸಾಜಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮುಸ್ಲಿಂ ವೈಯಕ್ತಿಕ ಕಾನೂನು ಪೋಕ್ಸೊ ಕಾಯ್ದೆಯಿಂದ ಹೊರತಾಗಿಲ್ಲ

ಕೇರಳ ಹೈಕೋರ್ಟ್ ಸ್ಪಷ್ಟನೆ

ಕೊಚ್ಚಿ, ನ.20– ಮುಸ್ಲಿಂ ವೈಯಕ್ತಿಕ ಕಾನೂನಿನ ಅಡಿಯಲ್ಲಿ ನಡೆಯುವ ಅಪ್ರಾಪ್ತ ವಯಸ್ಕರ ವಿವಾಹಗಳನ್ನು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯಿದೆಯಿಂದ ಹೊರಗಿಡಲಾಗುವುದಿಲ್ಲ ಎಂದು ಕೇರಳ ಹೈಕೋರ್ಟ್ ನ್ಯಾಯಮೂರ್ತಿ ಬೆಚು ಕುರಿಯನ್ ಥಾಮಸ್ ಅವರ ಏಕ ಸದಸ್ಯ ಪೀಠ ಹೇಳಿದೆ. ವಧು ಅಥವಾ ವರನು ಅಪ್ರಾಪ್ತ ವಯಸ್ಕನಾ(/ಳಾ)ಗಿದ್ದರೆ, ವಿವಾಹದ ಸಿಂಧುತ್ವ ಅಥವಾ ಇನ್ನಾವುದೇ ಕಾರಣಗಳನ್ನು ಲೆಕ್ಕಿಸದೆ ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಅಪರಾಧಗಳು ಅನ್ವಯಿಸುತ್ತವೆ ಎಂದು ಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ.

ಪೋಕ್ಸೊ ಕಾಯಿದೆಯು ಒಂದು ವಿಶೇಷ ಶಾಸನವಾಗಿದೆ. ಉನ್ನತ ಸಾಮಾಜಿಕ ಚಿಂತನೆಯ ಪ್ರಗತಿಯ ಕಾರಣದಿಂದ ಈ ಕಾಯ್ದೆ ರೂಪಿಸಲ್ಪಟ್ಟಿದೆ. ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ನ್ಯಾಯಶಾಸ್ತ್ರದಿಂದ ಉದ್ಭವಿಸುವ ತತ್ವಗಳ ಆಧಾರದ ಮೇಲೆ ಈ ವಿಶೇಷ ಶಾಸನವನ್ನು ಜಾರಿಗೊಳಿಸಲಾಗಿದೆ. ಮಕ್ಕಳ ಮೇಲಿನ ದೌರ್ಜನ್ಯ ನ್ಯಾಯಶಾಸ್ತ್ರವು ದುರ್ಬಲ, ಮೋಸಕ್ಕೊಳಗಾಗುವ ಮತ್ತು ಮುಗ್ಧಮಕ್ಕಳನ್ನು ರಕ್ಷಿಸುವ ಅಗತ್ಯದಿಂದ ವಿಕಸನಗೊಂಡಿದೆ. ಮದುವೆ ಸೇರಿದಂತೆ ವಿವಿಧ ಮುಖವಾಡಗಳ ಅಡಿಯಲ್ಲಿ ಲೈಂಗಿಕ ಅತ್ಯಾಚಾರದಿಂದ ಮಗುವನ್ನು ರಕ್ಷಿಸುವ ಶಾಸಕಾಂಗ ಉದ್ದೇಶವು ಶಾಸನಬದ್ಧ ನಿಬಂಧನೆಗಳಿಂದ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ ಎಂದು ಪ್ರತಿಪಾದಿಸಲಾಗಿದೆ.

ಬಾಲ್ಯವಿವಾಹಗಳನ್ನು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಪರಿಗಣಿಸಲಾಗಿದೆ ಎಂಬುದನ್ನು ನ್ಯಾಯಾಲಯ ಈ ಸಂದರ್ಭದಲ್ಲಿ ಗಮನಿಸಿದೆ. ಬಾಲ್ಯವಿವಾಹವು ಮಗು ತನ್ನ ಸಂಪೂರ್ಣ ಸಾಮರ್ಥ್ಯದಿಂದ ಬೆಳೆಯುವಿಕೆಯನ್ನು ಕುಂಠಿತಗೊಳಿಸುತ್ತದೆ. ಇದು ಸಮಾಜಕ್ಕೆ ಅಂಟಿದ ಶಾಪ. ಮಗುವಿನೊಂದಿಗೆ ಲೈಂಗಿಕ ಸಂಬಂಧ ಹೊಂದುವುದನ್ನು ಮತ್ತು ಮದುವೆಯ ನೆಪದಲ್ಲಿ ಮಗುವಿನೊಂದಿಗೆ ಲೈಂಗಿಕ ಸಂಬಂಧ ಹೊಂದುವುದನ್ನು ನಿಷೇಧಿಸುವುದು ಪೋಕ್ಸೊ ಕಾಯಿದೆಯ ಮೂಲ ಉದ್ದೇಶವಾಗಿದೆ. ಇದು ಸಮಾಜದ ಆಶಯವೂ ಆಗಿದೆ.

ಪೋಕ್ಸೊ ಕಾಯ್ದೆಯ ಸೆಕ್ಷನ್ 2(ಡಿ) ಅಡಿಯಲ್ಲಿ ಮಗು ಎಂಬ ಪದವನ್ನು '18 ವರ್ಷ ಕೆಳಗಿನ ಯಾವುದೇ ವ್ಯಕ್ತಿ' ಎಂದು ವ್ಯಾಖ್ಯಾನಿಸಲಾಗಿದೆ ಎಂಬುದನ್ನು ಕೋರ್ಟ್ ಉಲ್ಲೇಖಿಸಿದೆ. ವೈಯಕ್ತಿಕ ಕಾನೂನುಗಳು ಮತ್ತು ಸಾಂಪ್ರದಾಯಿಕ ಕಾನೂನು ಎರಡೂ ಕಾನೂನುಗಳಾಗಿವೆ. ಆದರೆ ಪೋಕ್ಸೊ ಕಾಯಿದೆ ಜಾರಿಗೆ ಬಂದ ನಂತರ, ಮಗುವಿನೊಂದಿಗೆ ಲೈಂಗಿಕ ಸಂಭೋಗ ನಡೆಸಿದ್ದು, ಅದು ವಿವಾಹದ ನೆಪದಲ್ಲಿದ್ದರೂ ಅದು ಅಪರಾಧವೇ ಆಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಅಂತರರಾಷ್ಟ್ರೀಯ ಸಿನಿಮಾದಿಂದ ಹೊರ ದೇಶದ ಸಂಸ್ಕೃತಿ ಅರಿಯಬಹುದು

ಹಿರಿಯ ನಟಿ ಗಿರಿಜಾ ಲೋಕೇಶ್ ಅಭಿಮತ



ಮೈಸೂರು, ನ.20(ಜಿಎ)– ಅಂತರ ರಾಷ್ಟ್ರೀಯ ಸಿನಿಮಾ ವೀಕ್ಷಣೆಯಿಂದ ಹೊರದೇಶದ ಸಂಸ್ಕೃತಿ ಅರಿಯಲು ಸಹಾಯವಾಗುತ್ತದೆ ಎಂದು ಹಿರಿಯ ನಟಿ ಗಿರಿಜಾ ಲೋಕೇಶ್ ಅಭಿಪ್ರಾಯಪಟ್ಟರು.

ನಗರದ ರಮಾಗೋವಿಂದ ರಂಗಮಂದಿರದಲ್ಲಿ ಶ್ರೀ ಪ್ರಣವ ಮೈಸೂರು ಆಯೋಜಿಸಿರುವ ಅಂತರರಾಷ್ಟ್ರೀಯ ಸಿನಿಮಾ ಉತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಅಂತರರಾಷ್ಟ್ರೀಯ ಸಿನಿಮಾಗಳಲ್ಲಿ ಶಬ್ದಕ್ಕಿಂತ ನಿಶ್ಯಬ್ದಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ. ಇಂತಹ ಸಿನಿಮಾ ವೀಕ್ಷಣೆಯೆಂದರೆ, ಸಿನಿಮಾ ನೋಡುವುದರ ಜೊತೆಗೆ ಅಲ್ಲಿನ ಸಂಸ್ಕೃತಿ, ಆಚಾರ, ವಿಚಾರಗಳು, ಸಂಗೀತ, ಅಭಿನಯದ ಬಗ್ಗೆಯೂ ಸೂಕ್ಷ್ಮವಾಗಿ ಗಮನ ವಹಿಸಬೇಕು. ಇದರಿಂದ ಹೊರದೇಶದ ಸಂಸ್ಕೃತಿ ಅರಿಯಲು ಸಹಾಯವಾಗುತ್ತದೆ ಎಂದರು.

ಪ್ರತಿ ಸಿನಿಮಾದಲ್ಲೂ ನಿರ್ದೇಶಕರು ಹೇಳಿಕೊಟ್ಟಂತೆ ಚಾಚೂತಪ್ಪದೆ ಅಭಿನಯಿಸಿ, ಜನರ ಪ್ರೀತಿ, ಅಭಿಮಾನ ಗಳಿಸಿದ್ದೇನೆ. ನನ್ನ ಮಾವ ಸುಬ್ಬಯ್ಯ ನಾಯ್ಡು ಅವರು, ಕನ್ನಡದ ಮೊದಲ ವಾಕ್ಚಿತ್ರದ ನಟರಾಗಿ, ಕನ್ನಡ ಸಿನಿಮಾಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ರಂಗಭೂಮಿಯಲ್ಲಿ ಈ ಹಿಂದೆ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತಿತ್ತು. ಸುಬ್ಬಯ್ಯ ನಾಯ್ಡು ಅವರು ತಮ್ಮ ನಾಟಕಗಳಲ್ಲಿ ಸಾಹಿತ್ಯ, ಅಭಿನಯಕ್ಕೆ ಹೆಚ್ಚಿನ ಒತ್ತು ನೀಡಿದರು ಎಂದರು. ನಂತರ ಬೇಡರ ಕಣ್ಣಪ್ಪ ಚಿತ್ರದ ಹಾಡು ಹಾಡಿ ರಂಜಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ನಟಿ ರಾಮೇಶ್ವರಿ ವರ್ಮಾ, ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಪ್ರವೀಣ್ ಕೃಪಾಕರ್, ವಿಭಾ ಎಜುಕೇಶನ್ ಟ್ರಸ್ಟ್‌ನ ಟ್ರಸ್ಟಿ ಅಂಬಿಕಾ ನಜರೆತ್, ಮೋನಿಶಾ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ಸಂಸ್ಥಾಪಕಿ ಶ್ರೀದೇವಿ ಉನ್ನಿ, ನಿರ್ಮಾಪಕ ಜಯಪ್ರಕಾಶ್, ಜಿಸಿಸಿಆರ್‌ನ ಕೆ.ಜಾರ್ಜ್ ಉಪಸ್ಥಿತರಿದ್ದರು.



ಹಿನಕಲ್‌ನಲ್ಲಿ ಭಾನುವಾರ ಶ್ರೀ ವಿನಾಯಕ ಸೇವಾ ಸಮಿತಿ ಟ್ರಸ್ಟ್ ಉದ್ಘಾಟನೆಗೊಂಡಿತು. ಈ ವೇಳೆ ಸಂಘದ ಅಧ್ಯಕ್ಷ ಕಿರಣ್, ಗೌರವ ಅಧ್ಯಕ್ಷ ಮಂಜುನಾಥ್, ಈಶ್ವರಪ್ಪ ರಾಜಣ್ಣ, ಮೋಹನ್ ಕುಮಾರ್, ಪ್ರಕಾಶ್, ಹೊನ್ನಪ್ಪ ನಾಗರಾಜ್, ಉದಯ್, ಜವರಪ್ಪ ಸಂಘದ ಸದಸ್ಯರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಅಮೆರಿಕದ ಕೊಲೊರಾಡೋ ನೈಟ್‌ಕ್ಲಬ್‌ನಲ್ಲಿ ಗುಂಡಿನ ದಾಳಿ; ಐವರು ಸಾವು, 18 ಮಂದಿಗೆ ಗಾಯ

ವಾಷಿಂಗ್ಟನ್: ಅಮೆರಿಕದ ಕೊಲೊರಾಡೋ ಸ್ಪ್ರಿಂಗ್ಸ್‌ನಲ್ಲಿರುವ ಎಲ್‌ಜಿಬಿಟಿಕ್ಯು ನೈಟ್‌ಕ್ಲಬ್‌ನಲ್ಲಿ ಶನಿವಾರ ನಡೆದ ಗುಂಡಿನ ದಾಳಿಯಲ್ಲಿ ಕನಿಷ್ಠ ಐವರು ಸಾವನ್ನಪ್ಪಿದ್ದಾರೆ. 18 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯ ಕ್ಲಬ್‌ನಲ್ಲಿ ಗುಂಡಿನ ದಾಳಿ ನಡೆದಿದೆ. ಘಟನೆಯಲ್ಲಿ 18 ಮಂದಿ ಗಾಯಗೊಂಡಿದ್ದಾರೆ ಮತ್ತು ಐವರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ವಕ್ತಾರ ಪಮೇಲಾ ಕ್ಯಾಸ್ಟ್ರೋ ಹೇಳಿದ್ದಾರೆ. ಕ್ಲಬ್ ಕ್ಯೂ ಎಂದು ಕರೆಯಲ್ಪಡುವ ಕ್ಲಬ್‌ನಲ್ಲಿ ನಡೆದ ಗುಂಡಿನ ದಾಳಿಯ ಕುರಿತು ಶನಿವಾರ ಮಧ್ಯರಾತ್ರಿಗಿಂತ ತುಸು ಮುನ್ನ ಪೊಲೀಸರಿಗೆ ಫೋನ್ ಕರೆ ಬಂದಿತ್ತು ಎಂದು ಪಮೇಲಾ ಕ್ಯಾಸ್ಟ್ರೋ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಶಂಕಿತ ವ್ಯಕ್ತಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಕರಣದ ತನಿಖೆಯಲ್ಲಿ ಎಫ್‌ಬಿಐ ಸಹಾಯ ಪಡೆಯುತ್ತಿರುವುದಾಗಿ ಪಮೇಲಾ ಕ್ಯಾಸ್ಟ್ರೋ ತಿಳಿಸಿದ್ದಾರೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು